ದುಡಿಯುವ ಜನರ ಪ್ರಾಣ ಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ

ಸಂಪುಟ 15 | ಸಂಚಿಕೆ 3 | ಜನವರಿ 11-17, 2021 | ಪುಟ 16 | ರೂ. 10

https://janashakthi.wordpress.com e-mail : js_weekly@yahoo.com

ಕರ್ನಾಟಕದಲ್ಲಿ ಎಲ್ಲಿದೆ ಸರ್ಕಾರ ?

ಒಂದು ದೇಶ ಒಂದು ಚುನಾವಣೆ:



ಅಪಾಯಕಾರಿ ಘೋಷಣೆ



ರೈತರ ಗಣತಂತ್ರ ಪರೇಡಿಗೆ ಸಿದ್ಧತೆ



ಶ್ರೀಲಂಕಾದ ಅಂತರ್ಯುದ್ಧದ ತಲ್ಲಣಗಳ ಇರಾ ಮದಿಯಾಮ



ಕೋವಿದ್-19 ವ್ಯಾಕ್ಸಿನ್ ನೀತಿ: 'ಹುಸಿ - ದೇಶ ಪ್ರೇಮ' ಮತ್ತು 'ಹಸು - ವಿಜ್ಞಾನ'ಕ್ಕೆ ಬಲಿ?





'ಜಾತಿ ವ್ಯವಸ್ಥೆಯಲ್ಲಿ ಬೆವರು ಹರಿಸದವರಿಗೆ ಮಣೆ'

ನ್ಯಾ. ನಾಗಮೋಹನ ದಾಸ್

ಹಿಂಸಾಚಾರ ಪೀಡಿತರಿಗೆ ಪರಿಹಾರದಲ್ಲಿ ತಾರತಮ್ಯ ಮಾಡಬೇಡಿ –ದಿಲ್ಲಿ ಮುಖ್ಯಮಂತ್ರಿಗಳಿಗೆ ಬೃಂದಾ ಕಾರಟ್ ಪತ್ರ

ಕಳೆದ ವರ್ಷ ಫೆಬ್ರುವರಿ ತಿಂಗಳಲ್ಲಿ ಈಶಾನ್ಯ ದಿಲ್ಲಿಯಲ್ಲಿ ನಡೆದ ಕೋಮುವಾದಿ ಹಿಂಸಾಚಾರದಲ್ಲಿ ಕೊಲ್ಲಲ್ಪಟ್ಟವರ ಕುಟುಂಬಗಳಿಗೆ ದಿಲ್ಲಿ ಸರಕಾರ ಪ್ರಕಟಿಸಿರುವ ಪರಿಹಾರ ಪ್ಯಾಕೇಜಿನಲ್ಲಿ ವಯಸ್ಕರು ಮತ್ತು ಅಪ್ರಾಪ್ತ ವಯಸ್ಕರೆಂದು ತಾರತಮ್ಯ ಮಾಡಲಾಗುತ್ತಿದೆ, ಇದು ನ್ಯಾಯಯುತವಲ್ಲ, ಇದನ್ನು ಸರಿಪಡಿಸಬೇಕು ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಸದಸ್ಯರಾದ ಬೃಂದಾ ಕಾರಟ್ ದಿಲ್ಲಿಯ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರಿಗೆ ಜನವರಿ 6ರಂದು ಬರೆದ ಪತ್ರದಲ್ಲಿ ಆಗ್ರಹಿಸಿದ್ದಾರೆ.

ಹಿಂಸಾಚಾರ ಪೀಡಿತರ ಕುಟುಂಬಗಳವರನ್ನು ಇತ್ತೀಚೆಗೆ ಭೇಟಿ ಮಾಡಿದಾಗ ಎರಡು ಕುಟುಂಬಗಳವರಿಂದ ಈ ತಾರರತಮ್ಯದ ಕುರಿತು ತಿಳಿಯಿತು. ಈ ಪ್ಯಾಕೇಜಿನಲ್ಲಿ ಕೊಲ್ಲಲ್ಪಟ್ಟವರು ವಯಸ್ಕರಾದರೆ 10 ಲಕ್ಷ ರೂ. ಪರಿಹಾರ, ಅಪ್ರಾಪ್ತ ವಯಸ್ಕರಾದರೆ 5 ಲಕ್ಷ ರೂ. ಮಾತ್ರ ಪರಿಹಾರ ಎಂದು ಹೇಳಲಾಗಿದೆ. ಬಹುಶಃ ವಯಸ್ಕರಾದರೆ ಅವರ ಸಾವಿನಿಂದ ಕುಟುಂಬ ಒಬ್ಬ ಅದಾಯ ತರುವ ಸದಸ್ಯನನ್ನು ಕಳೆದುಕೊಂಡಂತಾಗುತ್ತದೆ, ಆದರೆ ಅಪ್ರಾಪ್ತ ವಯಸ್ಕ ಸದಸ್ಯ ಸತ್ತರೆ ಹಾಗಾಗುವದಿಲ್ಲ ಎಂದು ಭಾವಿಸಿರುವಂತಿದೆ. ಅನುಕಂಪವಿಲ್ಲದ ಈ ತಿಳುವಳಿಕೆ ದೋಷಪೂರ್ಣವಾಗಿದೆ ಎಂದು ಬೃಂದಾ ಕಾರಟ್ ಅಭಿಪ್ರಾಯ ಪಟ್ಟಿದ್ದಾರೆ.

ದುರದೃಷ್ಟಶಾತ್ 'ಆದಾಯ ತರುವ ಸದಸ್ಯ' ಎಂಬುದರ ನಿರ್ವಚನೆ ಬಡ ಸ್ವ–ಉದ್ಯೋಗಿ ಕುಟುಂಬಗಳ ವಾಸ್ತವ ಸ್ಥಿತಿಗೆ ಸ್ಪಂದಿಸುತ್ತಿಲ್ಲ. ಇಂತಹ ಕುಟುಂಬಗಳಲ್ಲಿ ಮಕ್ಕಳು ಶಾಲೆಗೆ ಹೋಗುತ್ತಿರುವಾಗಲೇ, ಕುಟುಂಬದ ವೃತ್ತಿಯಲ್ಲಿ ನೆರವಾಗಿವಯಸ್ಕರ ಹೊಣೆಗಳನ್ನು ಹೊರಬೇಕಾಗಿ ಬರುತ್ತದೆ.

ಬೃಂದಾ ಕಾರಟ್ ತಮ್ಮ ಪತ್ರದಲ್ಲಿ ಇಬ್ಬರು ಅಪ್ರಾಪ್ತ ವಯಸ್ಕರ ಉದಾಹರಣೆಗಳನ್ನು ಮುಖ್ಯಮಂತ್ರಿಗಳ ಗಮನಕ್ಕೆ ತಂದಿದ್ದಾರೆ.

ಒಬ್ಬನ ಹೆಸರು ನಿತಿನ್ ಪಾಸ್ವಾನ್, 15 ವರ್ಷದ ಈತ ರಾಮ್ ಸುಗರಕ್ ಅವರ ಮಗ. ಇನ್ನೊಬ್ಬ 17 ವರ್ಷದ ಅಮೀನ್, ಈತ ಶಹಾಬುದ್ದೀನ್ ಎಂಬವರ ಮಗ.

ನಿತಿನ್ ತಂದೆ ಒಂದು ಸಾಮಾನು ಸಾಗಿಸುವ ಕೈಗಾಡಿಯ ಮಾಲಕ. ಮಗ ಶಾಲೆಯ ನಂತರ ಮತ್ತು ಶಾಲಾ ಬಿಡುವಿನ ದಿನಗಳಲ್ಲಿ ಕುಟುಂಬಕ್ಕೆ ಹಣಕಾಸು ನೆರವು ಸಂಪಾದಿಸುತ್ತಿದ್ದ. ಅಮೀನ್ ಒಂದು ಮೋಟಾರ್ ಬೈಕ್ ರಿಪೇರಿ ಅಂಗಡಿಯಲ್ಲಿ ಒಬ್ಬ ಅಪ್ರೆಂಟೀಸ್ ಆಗಿದ್ದ. ಕುಟುಂಬದ ಒಟ್ಟು ಆದಾಯದಲ್ಲಿ ಈತನ ಗಳಿಕೆಯೂ ಸೇರಿತ್ತು. ಆದ್ದರಿಂದ ಈ ಎರಡರಲ್ಲಿಯೂ ಕುಟುಂಬಕ್ಕೆ ಆದಾಯ ನಷ್ಟದ ತಿಳುವಳಿಕೆ ಕೂಡ ಅನ್ವಯವಾಗುತ್ತದೆ ಎಂದು ಬೃಂದಾ ಕಾರಟ್ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಇದಲ್ಲದೆ ದಿಲ್ಲಿ ಸರಕಾರ ಬೆಳೆದ ಮಗ/ಮಗಳು ಭೀಕರ ಹಿಂಸಾಚಾರದಲ್ಲಿ ಪ್ರಾಣ ಕಳಕೊಂಡಾಗ ಅವರ ತಂದೆ–ತಾಯಿಗಳಿಗೆ ಆಗುವ ಅಪಾರ ಮಾನಸಿಕ ಆಘಾತ, ನಷ್ಟವನ್ನು ಕೂಡ ಪರಿಗಣಿಸಬೇಕು. ಇದನ್ನು ಲೆಕ್ಕ ಹಾಕಲು ಸಾಧ್ಯವಿಲ್ಲ. ಸರಕಾರದ ಮತ್ತು ಸಮಾಜದ ಸಹಾನುಭೂತಿಯ ಅಭಿವ್ಯಕ್ತಿಯಾಗಿ ಆ ಕುಟುಂಬಕ್ಕೆ ಒಂದು ನ್ಯಾಯಯುತ ಮೊತ್ತದ ಪರಿಹಾರ ಒದಗಿಸುವುದು ಅಗತ್ಯವಾಗುತ್ತದೆ. ಮೇಲೆ ಹೇಳಿದ ಒಂದು ನಿಶ್ಚಿತ ಆದಾಯವಿಲ್ಲದ ಎರಡೂ ಕುಟುಂಬಗಳ ಸಾಮಾಜಿಕ–ಆರ್ಥಿಕ ಸ್ಥಿತಿ–ಗತಿಯನ್ನು ನೋಡಿದರೆ, 10 ಲಕ್ಷ ರೂ. ಗಳ ಪರಿಹಾರ ಕೊಡುವುದು ನ್ಯಾಯದ ದೃಷ್ಟಿಯಿಂದ ಅಗತ್ಯ ಎಂದು ಬೃಂದಾ ಕಾರಟ್ ತಮ್ಮ ಪತ್ರದಲ್ಲಿ ಹೇಳಿದ್ದಾರೆ.

ಈ ಇಬ್ಬರು ಮಕ್ಕಳ ಸಾವಿನ ಮೊದಲ ವಾರ್ಷಿಕ ಮುಂದಿನ ತಿಂಗಳ ಕೊನೆಯಲ್ಲಿ ಬರಲಿದೆ. "ಈ ನೋವಿನ ಸಂದರ್ಭದಲ್ಲಿ ಈ ಎರಡೂ ಕುಟುಂಬಗಳು ಬಾಕಿ 5 ಕ್ಷ ರೂಪಾಯಿಗಳನ್ನು ಪಡೆಯುವಂತಾದರೆ ಅದು ನಿಮ್ಮ ಸರಕಾರದಿಂದ ನ್ಯಾಯದ ಒಂದು ಮಹತ್ವದ ಸಂದೇಶವಾಗುತ್ತದೆ" ಎಂದು ಬರೆಯುತ್ತ ಬೃಂದಾ ಕಾರಟ್ ಕೇಜ್ರಿವಾಲ್ ಸರಕಾರದಿಂದ ಈ ಕುರಿತಂತೆ ಒಂದು ಸಕಾರಾತ್ಮಕ ಸ್ಪಂದನೆಯನ್ನು ನಿರೀಕ್ಷಿಸಿದ್ದಾರೆ.

ಉತ್ತರಪ್ರದೇಶದಲ್ಲಿ ಮತ್ತೊಂದು ಅತ್ಯಾಚಾರ, ಕೊಲೆ–ಪೋಲೀಸ್ ನಿರ್ಲಕ್ಷ್ಯ ತಕ್ಷಣ ಪ್ರಮುಖ ಕೊಲೆಗಾರನನ್ನು ಬಂಧಿಸಲು ಮಹಿಳಾ ಸಂಘಟನೆಗಳ ಆಗ್ರಹ

ಉತ್ತರ ಪ್ರದೇಶದ ಬದಾಯೂಂನಲ್ಲಿ ಒಬ್ಬ ದೇವಸ್ಥಾನದ ಮಹಂತ ಮತ್ತು ಆತನ ಹಸ್ತಕರು ಜನವರಿ 3ರಂದು ಒಬ್ಬ ಅಂಗನವಾಡಿ ಕಾರ್ಯಕರ್ತೆಯ ಮೇಲೆ ಸಾಮೂಹಿಕ ಅತ್ಯಾಚಾರ, ಚಿತ್ರಹಿಂಸೆ ನಡೆಸಿ ಆಕೆಯನ್ನು ಸಾಯಿಸಿರುವ ಘಟನೆ ವರದಿಯಾಗಿದೆ. ಆಗಾಗ ಅ ದೇವಸ್ಥಾನಕ್ಕೆ ಹೋಗುತ್ತಿದ್ದ ಆಕೆ ಆದಿನ ಅಲ್ಲಿಂದ ಮರಳದಿದ್ದಾಗ ಮನೆಯವರು ಅಕೆಗಾಗಿ ಹುಡುಕಾಟ ಆರಂಭಿಸಿದ್ದರು. ಒಂದು ಕಾರು ಬಂದು ಆಕೆಯ ಅರೆಜೀವ ವಾಗಿದ್ದ ದೇಹವನ್ನಿ ಮನೆಯೆದುರು ಹಾಕಿ ಹೊರಟುಹೋಯಿತು. ಮನೆಯವರು ಪೋಲಿಸ್‌ಗೆ ದೂರುಕೊಡಲು ಹೋದಾಗ ಕಳೆದ ಸಪ್ಟಂಬರ್‌ನಲ್ಲಿ ಹಾಥ್ರಸ್‌ನಲ್ಲಿ ಆದಂತೆ ಪೋಲಿಸರು ಅದನ್ನು ಉಪೇಕ್ಷಿಸಿದರು. ಮರುದಿನವಷ್ಟೇ ಬಂದರು. ಮರಣೋತ್ತರ ಪರೀಕ್ಷೆ ನಡೆಸಿದಾಗ ಆಕೆಯ ದೇಹದ ಮೇಲೆಲ್ಲಾ ಗಂಭೀರ ಗಾಯುಗಳಿದ್ದದ್ದು ಕಂಡು ಬಂತು. ಕೊನೆಗೂ ಪೋಲೀಸರು ಇಬ್ಬರನ್ನು ಬಂಧಿಸಿದ್ದಾರೆ. ಆದರೆ ಮುಖ್ಯ ಅಪರಾಧಿ ಸಿಕ್ಕಿಲ್ಲ, ತಲೆಮರೆಸಿಕೊಂಡಿದ್ದಾನೆ ಎಂದು ವರದಿಯಾಗಿದೆ.

ಈಗ ಅ ಪೋಲಿಸ್ ಠಾಣೆಯ ಮುಖ್ಯಸ್ಥನನ್ನು ತಾತ್ಕಾಲಿಕವಾಗಿ ಕೆಲಸಕ್ಕೆ ಹಾಜರಾಗದಂತೆ ಆದೇಶ ನೀಡಲಾಗಿದೆಯಂತೆ. ಆದರೆ ಇಂತಹ ಹಿಂದಿನ ಪ್ರಕರಣಗಳನ್ನು ನೆನಪಿಸಿಕೊಂಡರೆ ಈ ಅತ್ಯಾಚಾರ ಮತ್ತು ಕೊಲೆಯನ್ನು ಮತ್ತು ಯೋಗಿ ಆದಿತ್ಯನಾಥ ಸರಕಾರದ ಹೀನ ದಾಖಲೆಯನ್ನು ಕೂಡ ಮುಚ್ಚಿ ಹಾಕಲು ಪ್ರಯತ್ನ ನಡೆದಿರುವಂತೆ ಕಾಣುತ್ತದೆ ಎಂದು ಮಹಿಳಾ ಸಂಘಟನೆಗಳು ಇದನ್ನು ಖಂಡಿಸಿವೆ.

ಮಹಿಳೆಯರು ಆಹಾರ ಮತ್ತು ಕೆಲಸದ ನ್ಯಾಯಯುತ ಬೇಡಿಕೆಗಳ ಮೇಲೆ ಶಾಂತಿಯುತ ಪ್ರದರ್ಶನಗಳನ್ನು ಕೂಡ ನಡೆಸಲು ಈ ಸರಕಾರ ಬಿಡದಿರುವ ಸಮಯದಲ್ಲೇ ಮಹಿಳೆಯರ ಮೇಲೆ ಇಂತಹ ಭೀಕರ ಅಪರಾಧಗಳನ್ನು ತಡೆಯಲು ಅದಕ್ಕೆ ಆಗುತ್ತಿಲ್ಲ ಎಂಬುದು ನಾಚಿಕೆಗೇಡಿನ ಸಂಗತಿ ಎಂದು ಅವು ಹೇಳಿವೆ. ಇನ್ನು ತಾನು ಬಹಳ ಧಾರ್ಮಿಕ ಎಂದು ಜಂಭ ಕೊಚ್ಚಿಕೊಳ್ಳುವ ಈ ಆಡಳಿತದಲ್ಲಿ ದೇವಸ್ಥಾನಗಳೂ ಅಪರಾಧ ತಾಣಗಳಾಗುತ್ತಿವೆ, ಮಹಂತರುಗಳೇ ಹೀನಕೃತ್ಯಗಳನ್ನು ಎಸಗುತ್ತಿದ್ದಾರೆ ಎಂಬುದಂತೂ ಇನ್ನಷ್ಟು ನಾಚಿಕೆಗೇಡಿನ ಸಂಗತಿ ಎಂದಿರುವ ಈ ಸಂಘಟನೆಗಳು ಈ ಪ್ರಕರಣದ ಪ್ರಮುಖ ಅಪರಾಧಿಯನ್ನು ಕೂಡಲೇ ಬಂಧಿಸಬೇಕು, ಅ ಕುಟುಂಬಕ್ಕೆ ರಕ್ಷಣೆ ಒದಗಿಸಬೇಕು ಮತ್ತು ಬೇಗನೇ ನ್ಯಾಯ ದೊರಕುವಂತೆ ಪೋಲಿಸ್ ಮತ್ತು ಆಡಳಿತ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಆಗ್ರಹಿಸಿವೆ.

ಬಿಜೆಪಿ ಆಳ್ವಿಕೆಯಲ್ಲಿ ಮಹಿಳೆಯರು ಎದುರಿಸುತ್ತಿರುವ ಅಪಾಯಗಳನ್ನು ಬಯಲಿಗೆಳೆಯುವ ಪ್ರಚಾರ–ಪ್ರಕ್ಷೋಭೆಯನ್ನು ನಡೆಸಬೇಕು ಎಂದು ಅವು ತಮ್ಮ ಘಟಕಗಳಿಗೆ ಕರೆ ನೀಡಿವೆ. ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ, ರಾಷ್ಟ್ರೀಯ ಭಾರತೀಯ ಮಹಿಳಾ ಒಕ್ಕೂಟ, ಅಖಿಲ ಭಾರತ ಪ್ರಗತಿಪರ ಮಹಿಳಾ ಸಂಘ, ಪ್ರಗತಿಶೀಲ ಮಹಿಳಾ ಸಂಘಟನ, ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನ ಮತ್ತು ಅಖಿಲ ಭಾರತ ಅಗ್ರಗಾಮಿ ಮಹಿಳಾ ಸಮಿತಿ ಜಂಟಿಯಗಿ ಈ ಹೇಳಿಕೆಯನ್ನು ನೀಡಿವೆ.

ದ್ವೇಷದ ರಾಜಕೀಯದ ಮೇಲೆ ಪರ್ಯಾಯ ರಾಜಕೀಯದ ಪ್ರತಿ–ದಾಳಿಯನ್ನು ಹೆಚ್ಚಿಸಬೇಕಾಗಿದೆ–ಸೀತಾರಾಮ್ ಯೆಚುರಿ

ಒಂದು ಮತಾಧಾರಿತ ಮತ್ತು ಫ್ಯಾಸಿಸ್ಟ್ ಪ್ರಭುತ್ವವನ್ನು ತರಲು ನಡೆಸಿರುವ ಭಾರತೀಯ ಜನತಾ ಪಕ್ಷದ ದ್ವೇಷ ಮತ್ತು ಹಿಂಸಾಚಾರದ ರಾಜಕೀಯಕ್ಕೆ ಪರ್ಯಾಯ ರಾಜಕೀಯದ ಮೂಲಕ ಪ್ರತಿ–ದಾಳಿ ನಡೆಸುವ ಅಗತ್ಯವಿದೆ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಹೇಳಿದ್ದಾರೆ.

ಪ್ರಧಾನ ಮಂತ್ರಿ ಮೋದಿ ರಾಮಮಂದಿರ ಮತ್ತು ದಿಲ್ಲಿಯ ಸೆಂಟ್ರಲ್ ವಿಸ್ತಾ ಪರಿಯೋಜನೆಯನ್ನು ಒಂದು ಹೊಸ ಪ್ರಭುತ್ವ ವ್ಯವಸ್ಥೆಯ ಲಾಂಛನವನ್ನಾಗಿ ಮಾಡಲು ಪ್ರಯತ್ನಿಸುತ್ತಿದ್ದಾರೆ. ಭಾರತೀಯ ಸಂವಿಧಾನದಲ್ಲಿ ಕಂಡರಿಸಿದ ಪ್ರಭುತ್ವದ ಜಾತ್ಯಾತೀತ ಕಲ್ಯಾಣಕಾರಿ ಲಕ್ಷಣಗಳಿಗೂ ಇದಕ್ಕೂ ಅಜಗಜಾಂತರವಿದೆ ಎಂದು ಅವರು ಬಂಗಾಳೀ ದೈನಿಕ 'ಗಣಶಕ್ತಿ'ಯ 55ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಮಾತಾಡುತ್ತ ಹೇಳಿದರು.

ಒಂದು ಮತಾಧಾರಿತ ಮತ್ತು ಫ್ಯಾಸಿಸ್ಟ್ ಪ್ರಭುತ್ವ ವ್ಯವಸ್ಥೆಯನ್ನು ತರುವ ಮತ್ತು ದ್ವೇಷ ಹಾಗೂ ಹಿಂಸಾಚಾರವನ್ನು ಹರಡಿಸುವ ಮೂಲಕ ತನ್ನದೊಂದು ಸಾಮಂತಗಿರಿಯನ್ನು ಕಟ್ಟುವ ಪ್ರಧಾನಿ ಮೋದಿಯ ಪ್ರಯತ್ನದ ಮೇಲೆ ಪರ್ಯಾಯ ರಾಜಕೀಯದ ಶಕ್ತಿಯ ಆಧಾರದಲ್ಲಿ ಪ್ರತಿಧಾಳಿ ನಡೆಸಬೇಕಾಗಿದೆ ಎಂದು ಅವರು ಹೇಳಿದರು.

ಪಶ್ಚಿಮ ಬಂಗಾಲದ ಮುಂದಿನ ವಿಧಾನಸಭಾ ಚುನಾವಣೆ ಸಮೀಪಿಸುತ್ತಿರುವಾಗ, ಕಾರ್ಪೊರೇಟ್ ಮಾಧ್ಯಮಗಳು ಅದನ್ನು ಕೇವಲ ಬಿಜೆಪಿ v/s ಟಿಎಂಸಿ ಚುನಾವಣೆ ಎಂದೇ ಬಿಂಬಿಸುವ ಪ್ರಯತ್ನವನ್ನು ನಡೆಸಿವೆ. ಆದರೆ ವಾಸ್ತವವಾಗಿ ಇವೆರಡೂ ಒಂದೇ ರೀತಿಯ ಧೋರಣೆಗಳನ್ನು ಹೊಂದಿರುವಂತವು. ರೈತರಿಗೆ ಕನಿಷ್ಟ ಬೆಂಬಲ ಬೆಲೆ ಅಥವ ಕೋಮುವಾದದ ಪ್ರಶ್ನೆಗಳ ಮೇಲೆ ಅವುಗಳ ನಿಲುವುಗಳು ಸುಮಾರಾಗಿ ಒಂದೇ ಆಗಿವೆ. ಆದ್ದರಿಂದ ಪಶ್ಚಿಮ ಬಂಗಾಲದಲ್ಲಿ ಬಿಜೆಪಿಯನ್ನು ಸೋಲಿಸಬೇಕಾದರೆ ಟಿಎಂಸಿ ಯನ್ನೂ ಸೋಲಿಸಬೇಕಾಗುತ್ತದೆ ಎಂದು ಯೆಚುರಿ ಹೇಳಿದರು.

ಕೃಷಿ ಕಾಯ್ದೆಗಳು–ಲೂಟಿಯ ಒಂದು ಮಾರ್ಗ

ರೈತರ ಪ್ರತಿಭಟನೆಗಳ ಬಗ್ಗೆ ಮಾತಾಡುತ್ತ, ಭಾರತದಲ್ಲಿ ಈಗ ಜನಗಳ ಖರೀದಿ ಸಾಮರ್ಥ್ಯವನ್ನು ಹೆಚ್ಚಿಸಬೇಕಾಗಿದೆ, ಆದರೆ ವಾಸ್ತವವಾಗಿ ತದ್ವಿರುದ್ಧವಾದುದನ್ನೇ ಮಾಡಲಾಗುತ್ತಿದೆ ಎಂದು ಅವರು ಹೇಳಿದರು. ಜನಗಳ ಕೈಗಳಲ್ಲಿ ಹಣವನ್ನು ಇಡುವ ಬದಲು ಅವರಿಂದಲೇ ಅದನ್ನು ಲೂಟಿ ಮಾಡಲಾಗುತ್ತಿದೆ. ಇತ್ತೀಚಿನ ಕೃಷಿ ಕಾಯ್ದೆಗಳನ್ನು ಲೂಟಿಯ ಮೂಲಕ ಕಾರ್ಪೊರೇಟ್‌ಗಳ ಕೈಗಳಲ್ಲಿ ಹಣದ ಸಂಗ್ರಹಕ್ಕೆ ದಾರಿ ಮಾಡಿಕೊಡಲಿಕ್ಕಾಗಿ ತರಲಾಗಿದೆ ಎಂದು ಅವರು ಹೇಳಿದರು.

ಸಣ್ಣ ಮತ್ತು ಮಧ್ಯಮ ರೈತರಂತೂ ಈ ಕಾಯ್ದೆಗಳಿಂದ ಸಂಕಟಗಳಿಗೆ ಒಳಗಾಗುತ್ತಾರೆ. ದೊಡ್ಡ ರೈತರು ಕೂಡ ಈ ಕಾಯ್ದೆಗಳಿಂದಾಗಿ ದೊಡ್ಡ ಕಾರ್ಪೊರೇಟ್‌ಗಳ ಮರ್ಜಿಗೆ ಒಳಪಡುತ್ತಾರೆಯಾದ್ದರಿಂದ ಅವರೂ ದಿಗ್ಭ್ರಾಂತರಾಗಿದ್ದಾರೆ. ಇಂತಹ ಸದ್ಯದ ಸನ್ನಿವೇಶದಲ್ಲಿ ಕಾರ್ಮಿಕ–ರೈತ ಮೈತ್ರಿಯನ್ನು ಗಟ್ಟಿಗೊಳಿಸಬೇಕಾದ ಅಗತ್ಯವಿದೆ ಎಂದು ಅವರು ಹೇಳಿದರು.

ರೈತರ ದೃಢನಿರ್ಧಾರದ ಹೋರಾಟಕ್ಕೆ ಕೇಂದ್ರೀಯ ಕಾರ್ಮಿಕ ಸಂಘಗಳ ಸಕ್ರಿಯ ಸೌಹಾರ್ದ

ಕೇಂದ್ರೀಯ ಕಾರ್ಮಿಕ ಸಂಘಗಳು ಮತ್ತು ಅಖಿಲ ಭಾರತ ಒಕ್ಕೂಟಗಳ ಜಂಟಿ ವೇದಿಕೆ ರೈತರ ದೃಢನಿರ್ಧಾರದ ಹೋರಾಟಗಳಿಗೆ ರೈತ ಸಂಘಟನೆಗಳನ್ನು ಅಭಿನಂದಿಸುತ್ತ ಅವರೊಂದಿಗೆ ಕಾರ್ಮಿಕರ ಸಕ್ರಿಯ ಸೌಹಾರ್ದವನ್ನು ಪುನರುಚ್ಚರಿಸಿವೆ. ಈ ಹೋರಾಟದಲ್ಲಿ ಇದುವರೆಗೆ ಹುತಾತ್ಮರಾಗಿರುವ ರೈತ ಸಂಗಾತಿಗಳಿಗೆ ಅವು ಶ್ರದ್ಧಾಂಜಲಿಯನ್ನು ಅರ್ಪಿಸಿವೆ.

ಸಂಯುಕ್ತ ಕಿಸಾನ್ ಮೋರ್ಚಾ **ಜನವರಿ 7ರಂದು ದಿಲ್ಲಿಯ ಗಡಿಯ ಸುತ್ತಲಿನ ಕುಂಡ್ಲಿ–ಮನೇಸರ್–ಪಲ್ವಲ್ ಹೆದ್ದಾರಿಯಲ್ಲಿ ಭವ್ಯ ಟ್ರಾಕ್ಟರ್ ಮೆರವಣಿಗೆಯೊಂದಿಗೆ ದೇಶಾದ್ಯಂತ ಹೋರಾಟವನ್ನು ತೀವ್ರಗೊಳಿಸಿದೆ. ಇದು ಸರಕಾರ ತನ್ನ ಹಠಮಾರಿ ನಿಲುವನ್ನು ಕೈಬಿಡದಿದ್ದರೆ ಜನವರಿ 26 ರಂದು ದಿಲ್ಲಿಯನ್ನು ಪ್ರವೇಶಿಸಿ ನಡೆಸಲಿರುವ 'ರೈತರ ಗಣತಂತ್ರ ಪರೇಡ'ಗೆ ಸಿದ್ಧತೆಯಾಗಿದೆ.** ಇದಕ್ಕೆ ಮೊದಲು ಜನವರಿ 23 ರಿಂದ 25 ರವರೆಗೆ ರಾಜ್ಯಗಳಲ್ಲಿ ಮಹಾಪಡಾವ್ ನಡೆಯಲಿವೆ. ಇವೆಲ್ಲ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸುವಂತೆ ಕಾರ್ಮಿಕ ಸಂಘಗಳ ಜಂಟಿ ವೇದಿಕೆ ತಮ್ಮ ಘಟಕಗಳಿಗೆ ಕರೆ ನೀಡಿದೆ.



ಪಕ್ಕದ ಹರ್ಯಾಣದ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಜನವಾದಿ ಮಹಿಳಾ ಸಮಿತಿಯ ಸದಸ್ಯರು ಜನವರಿ 6 ರಂದು ಟಿಕ್ರಿ ಗಡಿಯಲ್ಲಿ ಕೂತಿರುವ ರೈತ ಹೋರಾಟಗಾರರಿಗೆ ಸೌಹಾರ್ದ ವ್ಯಕ್ತಪಡಿಸಿದರು.

ಸಂಪಾದಕೀಯ

ಕರ್ನಾಟಕದಲ್ಲಿ ಎಲ್ಲಿದೆ ಸರ್ಕಾರ?

ರಾಜ್ಯದಲ್ಲಿ ಅಧಿಕಾರದ ಚುಕ್ಕಾಣಿ ಬಿಜೆಪಿ ಕೈಗೆ ಬಂದ ಮೇಲೆ ರಾಜ್ಯದ ಅಭಿವೃದ್ಧಿ ಕೆಲಸಗಳಿಗೆ ವೇಗ ಸಿಗಲಿದೆ ಎಂದು ಬಿಜೆಪಿ ನಾಯಕರು ಬಿಂಬಿಸಿದ್ದರು. ಆದರೆ ಹಾಗೆ ಆಗಲಿಲ್ಲ. ಬಿಜೆಪಿ ಕೊಟ್ಟ ಮಾತಿಗೆ ತಕ್ಕಂತೆ ನಡೆದುಕೊಳ್ಳುತ್ತದೆ ಎಂಬ ಭಾವನೆ ಜನರಲ್ಲಿ ಈಗ ಉಳಿದುಕೊಂಡಂತೆ ಕಾಣುವುದಿಲ್ಲ. ಬಿಜೆಪಿ ಸರ್ಕಾರಕ್ಕೆ ಸರಳ ಬಹುಮತ ದಕ್ಕಿಸಿಕೊಳ್ಳಲು ಉಪಚುನಾವಣೆಯಲ್ಲಿ ಗೆಲ್ಲುವುದು ಅನಿವಾರ್ಯವಾಗಿತ್ತು. ಹಾಗಾಗಿ ಆಡಳಿತರೂಢರ ಗಮನವು ಸಹಜವಾಗಿಯೇ ಆ ಕಡೆ ಕೇಂದ್ರೀಕೃತವಾಗಿತ್ತು. ಇದರ ಪರಿಣಾಮವಾಗಿ ಅಭಿವೃದ್ಧಿ ಕಾರ್ಯಗಳು ಕಡಗಣನೆಗೆ ಒಳಗಾದವು. ಇದಕ್ಕೂ ಮೊದಲು ಕೊರೋನಾ ತಂದಿಟ್ಟ ಅಡೆತಡೆಗಳು ಅಭಿವೃದ್ಧಿಗೆ ತೊಡರುಗಾಲಾಗಿ ಪರಿಣಮಿಸಿದವು. ಈ ನಡುವೆ ಆಡಳಿತ ಪಕ್ಷದೊಳಗಿನ ಗೊಂದಲ, ಪದೇ ಪದೇ ಮುನ್ನಲೆಗೆ ಬಂದ ನಾಯಕತ್ವ ಬದಲಾವಣೆಯ ಪ್ರಶ್ನೆ, ಸಚಿವ ಸಂಪುಟ ವಿಸ್ತರಣೆಯ ಗೊಂದಲಗಳು ಆಡಳಿತ ಯಂತ್ರವನ್ನೇ ಸ್ತಬ್ಧಗೊಳಿಸುವಂತಾಯಿತು. ಉಪಚುನಾವಣೆಯಲ್ಲಿ ಬಿಜೆಪಿ ಮೇಲುಗೈ ಸಾಧಿಸಿದ್ದು ಮತ್ತು ಗ್ರಾಮ ಪಂಚಾಯತಿಯಲ್ಲಿ ಬಿಜೆಪಿ ಬೆಂಬಲಿತ ಅಭ್ಯರ್ಥಿಗಳೇ ಅಧಿಕ ಸಂಖ್ಯೆಯಲ್ಲಿ ಗೆಲುವು ಸಾಧಿಸಿದ್ದಾರೆ ಎಂಬ ಸ್ವಯಂ ಘೋಷಿತ ಪ್ರಕಟಣೆಯಿಂದ ಸಂತೃಪ್ತರಾದ ಮುಖ್ಯ ಮಂತ್ರಿಯವರು ಮುಂದಿನ ಎರಡೂವರೆ ವರ್ಷ ತಾವೇ ಮುಖ್ಯ ಮಂತ್ರಿ ಎಂದು ತನ್ನ ಬೆನ್ನನ್ನು ತಾನೇ ತಟ್ಟಿಕೊಂಡದ್ದು ರಾಜ್ಯದ ಜನತೆಗೆ ಒಳ್ಳೆಯ ಮನೋರಂಜನೆ ನೀಡಿದ್ದು ಮಾತ್ರ ನಿಜ. ಈಗ ನಾಯಕತ್ವ ಬದಲಾವಣೆಯ ಪ್ರಶ್ನೆ ಬಿಜೆಪಿ ವರಿಷ್ಠರ ಮುಂದಿಲ್ಲವಂತೆ! ಇದು ದೀರ್ಘಕಾಲ ಉಳಿಯಬಹುದಾದ ಭರವಸೆಯೇ ಅಥವ ಅಲ್ಲವೇ ಎಂಬುದನ್ನು ಕಾದುನೋಡಬೇಕು.

ಮುಖ್ಯಮಂತ್ರಿ ಯಡಿಯೂರಪ್ಪರವರಿಗೆ ತನ್ನ ಕುರಿಗಳನ್ನು ತನ್ನ ಕುರಿಹಿಂಡಿನಲ್ಲಿ ಹಿಡಿದಿಡುವುದು ತಲೆನೋವಿನ ಪ್ರಶ್ನೆಯಾಗಿದೆ. ಯಡಿಯೂರಪ್ಪನವರು ಇತ್ತೀಚೆಗೆ ಪ್ರದೇಶವಾರಾಗಿ ಕರೆದ ಬಿಜೆಪಿ ಶಾಸಕರ ಸಭೆಗಳಲ್ಲಿ ಶಾಸಕರು ಈ ಅವಕಾಶವನ್ನು ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಲು ಬಳಸಿಕೊಂಡರಂತೆ. ಯಡಿಯೂರಪ್ಪನವರ ಶಾಸಕರಲ್ಲಿ ಸಾಕಷ್ಟು ಪ್ರಮಾಣದ ಅತೃಪ್ತಿ ತುಂಬಿಕೊಂಡಿದೆ ಎಂಬ ಸತ್ಯ ಬಯಲಿಗೆ ಬಂದಂತಾಗಿದೆ. ತಮ್ಮ ಕ್ಷೇತ್ರಗಳ ಅಭಿವೃದ್ಧಿ ಕೆಲಸಗಳಿಗೆ ಅಗತ್ಯ ಹಣ ದೊರೆಯುತ್ತಿಲ್ಲ ಎಂದು ಶಾಸಕರು ತಮ್ಮ ಗೋಳನ್ನು ತೋಡಿಕೊಂಡರಂತೆ.

ರಾಜ್ಯದಲ್ಲಿ ಇಂದು ಕೊರೋನಾ ದಾಳಿಗೆ ತುತ್ತಾದ ಬಡವರಿಗೆ ಯಾವುದೇ ನೆರವನ್ನು ಸರ್ಕಾರ ನೀಡಲಿಲ್ಲ. ಜನತೆಯನ್ನು ಅಭಿವೃದ್ಧಿಯತ್ತ ಕೊಂಡೊಯ್ಯುವುದು ಒಂದು ಚುನಾಯಿತ ಸರ್ಕಾರದ ಹೊಣೆಗಾರಿಕೆಯಾಗಿದೆ. ಆದರೆ ಅಧಿಕಾರವನ್ನು ತನ್ನ ಹಾಗೂ ತನ್ನವರ ಕೈಯಲ್ಲಿ ಭದ್ರಗೊಳಿಸಲು ಹೆಣಗುವುದು ನ್ಯಾಯವಲ್ಲ. ರಾಜ್ಯದಲ್ಲಿರುವ ಈಗ ಇರುವ ಸರ್ಕಾರ ಒಂದು ಜನಪರ ಸರ್ಕಾರ ಅಲ್ಲವೆ ಅಲ್ಲ. ಜನರ ಸಮಸ್ಯೆಗಳನ್ನು ಬಗೆಹರಿಸುವ ಆಸಕ್ತಿ ಅದಕ್ಕಿಲ್ಲ. ಜನರ ಜೀವನ ನಿರ್ವಹಣೆ ಯಾತನಾಮಯವಾಗಿದೆ. ಜನರ ಕಷ್ಟ ನಷ್ಟಗಳಿಗೆ ಅದು ಸ್ಪಂಧಿಸುವುದಿಲ್ಲ. ಬೆಲೆಗಳ ಏರಿಕೆ, ನಿರುದ್ಯೋಗ, ಜನರ ಆದಾಯದ ಕುಸಿತ ಇವೆಲ್ಲವುಗಳನ್ನು ಮರೆಮಾಚಲಾಗುತ್ತದೆ. ಸಮಾಜದಲ್ಲಿ ದ್ವೇಷವನ್ನು ಬೆಳೆಸಿ, ಪರಸ್ಪರ ಅಪನಂಬಿಕೆಯನ್ನು ಹರಡಿ ಶಾಂತಿಯನ್ನು ಕದಡಲಾಗುತ್ತದೆ. ಇದೊಂದು ಮಾನವ ಸಮಾಜ ಹೌದು. ಆದರೆ ಇದು ಒಂದು ಮಾನವೀಯ ಸಮಾಜವಾಗಿ ಉಳಿದಿಲ್ಲ. ಇಲ್ಲಿ ಅಮಾಯಕರನ್ನು ಜೈಲಿಗೆ ಹಾಕುತ್ತಾರೆ. ಅಪರಾಧಿಗಳನ್ನು ರಾಜಾರೋಷವಾಗಿ ಓಡಾಡಲು ಬಿಡುತ್ತಾರೆ. ಇಲ್ಲಿ ಹಸಿವೆಯಿಂದ ಸಾಯುವವರಿದ್ದಾರೆ. ಇಲ್ಲಿ ತಿಂದು ತೇಗುವವರೂ ಇದ್ದಾರೆ ಇಲ್ಲಿ ಕಣ್ಣಿರುವ ಸರ್ಕಾರ ಇಲ್ಲ; ಕಿವಿ ಕೇಳುವ ಸರ್ಕಾರ ಇದ್ದಂತಿಲ್ಲ. ರಾಜ್ಯದಲ್ಲಿ ಸರ್ಕಾರವೇ ಇಲ್ಲ. ಹುಡುಕಿ ನೋಡಿ, ಇಲ್ಲಿ ಸರ್ಕಾರ ಇದೆಯಾ? ಜನತೆಯತ್ತ ದೃಷ್ಟಿ ಬೀರಡ ಸರ್ಕಾರ ಇದ್ದರೆಷ್ಟು? ಬಿಟ್ಟರೆಷ್ಟು?

ಬೆಂಗಳೂರು ನಗರದಲ್ಲಿರುವ ಅಂಗನವಾಡಿ ಕೇಂದ್ರಗಳ ಬಲವರ್ಧನೆಗಾಗಿ ಒತ್ತಾಯಿಸಿ ಬಿಬಿಎಂಪಿ ಚಲೋ

ಬೆಂಗಳೂರು ನಗರದಲ್ಲಿರುವ ಅಂಗನವಾಡಿ ಕೇಂದ್ರಗಳ ಬಲವರ್ಧನೆಗಾಗಿ ಒತ್ತಾಯಿಸಿ ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘ (ಸಿಐಟಿಯು) ನೇತೃತ್ವದಲ್ಲಿ ಇಂದು ಅಂಗನವಾಡಿ ಕಾರ್ಯಕರ್ತರು ಜನವರಿ 7, 2020 ರಂದು ಬಿಬಿಎಂಪಿ ಚಲೋ ನಡೆಸಿದರು.

ಪ್ರತಿಭಟನೆ ಉದ್ದೇಶಿಸಿ ರಾಜ್ಯ ಅಂಗನವಾಡಿ ನೌಕರರ ಸಂಘಟನೆಯ ರಾಜ್ಯಾಧ್ಯಕ್ಷೆ ಎಸ್. ವರಲಕ್ಷ್ಮೀ ಮಾತನಾಡುತ್ತಾ, ಭಾರತದ 5 ನೇ ದೊಡ್ಡ ಮಹಾನಗರ ಬೆಂಗಳೂರು ವಿಶ್ವದ್ಯಾಂತ ಭಾರತದ ಸಿಲಿಕಾನ್ ವ್ಯಾಲಿ ಎಂದು ಪ್ರಸಿದ್ಧೀ ಪಡೆದಿದೆ. ಉದ್ಯಾನ ನಗರಿಯಾದ ಬೆಂಗಳೂರು ವಿಶ್ವದ ಮಾಹಿತಿ ತಂತ್ರಜ್ಞಾನದ ಉದ್ಯಮಿಗಳ ನೆಚ್ಚಿನ ತಾಣವಾಗಿದೆ. ಆದರೆ ಇಂತಹ ಬೆಂಗಳೂರು ನಗರದ ಇನ್ನೊಂದು ಮುಖದಲ್ಲಿ ಮಕ್ಕಳ ಹಾಗೂ ಮಹಿಳೆಯರ ಅನಿಮಿಯಾ ಮತ್ತು ಅಪೌಷ್ಠಿಕತೆ ಲಿಂಗ ತಾರತಮ್ಯದಂತಹ ಸಮಸ್ಯೆಗಳು ಹೆಚ್ಚುತ್ತಲೇ ಇವೆ. ಈ ಸಮಸ್ಯೆಗಳನ್ನು ತಡಗಟ್ಟಬೇಕಾದರೆ ಐಸಿಡಿಎಸ್ ಯೋಜನೆಯನ್ನು ಪರಿಣಾಮಕಾರಿಯಾಗಿ ಜಾರಿ ಮಾಡಬೇಕಾದ ಅಗತ್ಯವಿದೆ.

ಬೆಂಗಳೂರು ನಗರದಲ್ಲಿ 1.30 ಕೋಟಿ ಜನಸಂಖ್ಯೆ ಇದೆ. ಐಸಿಡಿಎಸ್ ಮಾರ್ಗದರ್ಶಿ ಪ್ರಕಾರ ಒಂದು ಸಾವಿರ ಜನಸಂಖ್ಯೆಗೆ ಒಂದು ಅಂಗನವಾಡಿ ಕೇಂದ್ರವಿರಬೇಕು. ಆದರೆ ಬೆಂಗಳೂರು ನಗರದಲ್ಲಿರುವುದು ಕೇವಲ 1851 ಅಂಗನವಾಡಿ ಕೇಂದ್ರಗಳು ಮಾತ್ರ. ಆದರೆ 6 ವರ್ಷದೊಳಗಿನ ಮಕ್ಕಳ ಸಂಖ್ಯೆ 4.16 ಲಕ್ಷ ಇದೆ, ಐಸಿಡಿಎಸ್ ಯೋಜನೆಗೆ ದಾಖಾಲಾಗಿರುವುದು 2.30 ಲಕ್ಷ ಮಕ್ಕಳು ಮಾತ್ರ ಅಂದರೆ 1.82 ಲಕ್ಷ (46%) ಮಕ್ಕಳು ದಾಖಲಾಗಿಲ್ಲ. ಆದ್ದರಿಂದ ರಾಜಧಾನಿ ಒಂದರಲ್ಲೇ 20 ಸಾವಿರ ಹೆಚ್ಚುವರಿ ಅಂಗನವಾಡಿ ಕೇಂದ್ರಗಳನ್ನು ರಚಿಸಬೇಕಿದೆ. 2018ರ ಕುಟುಂಬ ಸಮೀಕ್ಷೆ ಪ್ರಕಾರ ಅಪೌಷ್ಠಿಕತೆಯ ಮಟ್ಟ 11.204 ಇದೆ. ಎತ್ತರಕ್ಕೆ ತಕ್ಕ ತೂಕವಿಲ್ಲದ ಮಕ್ಕಳ ಸಂಖ್ಯೆ 16,958 ಇದೆ. ವಯಸ್ಸಿಗೆ ತಕ್ಕ ತೂಕವಿಲ್ಲದ ಮಕ್ಕಳ ಸಂಖ್ಯೆ 1396 ಇದೆ. ಇರುವ ಅಂಗನವಾಡಿ ಕೇಂದ್ರಗಳ ಪರಿಸ್ಥಿತಿಯೂ ಚಿಂತಾಜನಕವಾಗಿದೆ. ಎಂದರು.

ಸಂಘಟನೆಯ ರಾಜ್ಯ ಪ್ರಧಾನಕಾರ್ಯದರ್ಶಿ ಎಚ್.ಎಸ್. ಸುನಂದ ಮಾತನಾಡಿ, ಬೆಂಗಳೂರುನಗರದಲ್ಲಿ 2420 ಅಂಗನವಾಡಿ ಕೇಂದ್ರಗಳು ಸದ್ಯಕ್ಕೆ ಕಾರ್ಯನಿರ್ವಹಿಸುತ್ತಿವೆ. ಅದರಲ್ಲಿ 1420 ಕೇಂದ್ರಗಳಿಗೆ ಸ್ವಂತ ಕಟ್ಟಡ ಇಲ್ಲ, 630 ಕೇಂದ್ರಕ್ಕೆ ಅಡುಗೆ ಮನೆ ಇಲ್ಲ , 2171 ಕೇಂದ್ರಕ್ಕೆ ಕೈತೋಟವಿಲ್ಲ, 394 ಕೇಂದ್ರಕ್ಕೆ ಶೌಚಾಲಯವಿಲ್ಲ, 692 ಕಡೆ ನೀರಿನ ವ್ಯವಸ್ಥೆ ಇಲ್ಲ, 657 ಕಡೆ ವಿದ್ಯುತ್ ಸೌಲಭ್ಯ ಇಲ್ಲ, 1501 ಕೇಂದ್ರಕ್ಕೆ ಕಾಂಪೌಡ್ ಇಲ್ಲ, 1966 ಕೇಂದ್ರಗಳಿಗೆ ಆಟದ ಮೈದಾನವಿಲ್ಲ. 964 ಕಡೆ ಫ್ಯಾನ್ ಇಲ್ಲ, ಏನು ಇಲ್ಲದೆ ಮಕ್ಕಳನ್ನು ಹೇಗೆ ಆಕರ್ಷಿಸಬೇಕು, ಬರುವ ಮಕ್ಕಳನ್ನು ಹೇಗೆ ಸುಧಾರಿಸಬೇಕು? ಆದ್ದರಿಂದ ಐಸಿಡಿಎಸ್ ಯೋಜನೆಯನ್ನು ವಿಸ್ತರಿಸಬೇಕು. ಮತ್ತು ಇರುವ ಅಂಗನವಾಡಿ ಕೇಂದ್ರಗಳಿಗೆ ಮೂಲಭೂತ ಸೌಕರ್ಯಗಳನ್ನು ಕೊಡಬೇಕು ಎಂದು ಆಗ್ರಹಿಸಿದರು.

ಸಂಘಟನೆಯ ಬೆಂಗಳೂರು ಜಿಲ್ಲಾಧ್ಯಕ್ಷೆ ಟಿ. ಲೀಲಾವತಿ ಮಾತನಾಡುತ್ತಾ, ಬೆಂಗಳೂರು ನಗರದ ಅಂಗನವಾಡಿ ಕೇಂದ್ರಗಳಲ್ಲಿರುವ ಕಾರ್ಯಕರ್ತೆಯರು ಅತೀವ ಒತ್ತಡದಲ್ಲಿ ಕೆಲಸ ನಿರ್ವಹಿಸಬೇಕಿದೆ. ಹಲವಾರು ಕಡೆ ಸ್ಥಳದ ಕೊರತೆಯಿಂದ ಒಂದೇ ಕಡೆ 2 ಅಂಗನವಾಡಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ, ಮಾತ್ರವಲ್ಲ ಇನ್ನು ಕೆಲವೆಡೆ ಒಂದೇ ಕೇಂದ್ರಕ್ಕೆ ನೂರಾರು ಮಕ್ಕಳು ಮತ್ತು ಫಲಾನುಭವಿಗಳು ಬರುತ್ತಾರೆ. ಇನ್ನೂ ಕೆಲವೆಡೆ ಒಂದು ಕಿ.ಮೀಟರ್‌ಗೆ ಒಂದು ಅಂಗನವಾಡಿ ಕೇಂದ್ರವಿರುವುದು ಇದೆ. ಮಾತ್ರವಲ್ಲ ಒಂದೇ ಸ್ಥಳದಲ್ಲಿ 3 ಪ್ರಾಜೆಕ್ಟ್ ಗಳಿಗೆ ಸೇರಿದ ಅಂಗನವಾಡಿ ಕೇಂದ್ರಗಳಿವೆ. ಇದರಿಂದ ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರು ಮತ್ತು ಫಲಾನುಭವಿಗಳೂ ಕೂಡಾ ಕಛೇರಿಗೆ ಮತ್ತು ಸರ್ಕಲ್ ಸಭೆಗಳಿಗೆ ಹೋಗಿ ಬರುವುದೇ ಒಂದು ದುಸ್ಸಾಹಸವಾಗಿದೆ. ಆದ್ದರಿಂದ ಅಂಗನವಾಡಿ ಪ್ರಾಜೆಕ್ಟ್ ಗಳನ್ನು ಭೌಗೋಳಿಕ ಆಧಾರದಲ್ಲಿ ಮರುವಿಂಗಡನೆ ಮಾಡಬೇಕು. ಇಷ್ಟೆಲ್ಲಾ ಒತ್ತಡದಲ್ಲಿ ಕಾರ್ಯಕರ್ತರು ಕೆಲಸ ನಿರ್ವಹಿಸಬೇಕಾಗಿದೆ. ಸ್ವಂತ ಕಟ್ಟಡಗಳಿಲ್ಲದೆ ಬಾಡಿಗೆಯಲ್ಲಿ ಕೇಂದ್ರ ನಡೆಸಬೇಕಿದೆ. ಆರೇಳು ತಿಂಗಳಾದರೂ ಬಾಡಿಗೆ ಹಣ, ಗ್ಯಾಸ್ ಹಣ ಬಿಡುಗಡೆಯಾಗುವುದಿಲ್ಲ. ಬಾಡಿಗೆ ಹಣ ಬಿಡುಗಡೆಗೆ ಮಾನದಂಡಗಳನ್ನು ಹೇರಲಾಗುತ್ತಿದೆ. ತಿಂಗಳಿಗೆ ಸರಿಯಾಗಿ ಗೌರವಧನವು ಬಿಡುಗಡೆ ಆಗುವುದಿಲ್ಲ. ಇಂತಹ ಸಮಯದಲ್ಲಿ ಬಾಡಿಗೆ ಆಯಾಯ ತಿಂಗಳು ಬರಿಸುವುದು ಕಷ್ಟವಾಗಿದೆ. ಈ ವಿಚಾರವಾಗಿ ಹಲವಾರು ಬಾರಿ ಸರ್ಕಾರಕ್ಕೆ ಮನವಿ ನೀಡಿ ಗಮನಕ್ಕೆ ತರಲಾಗಿದೆ. ಆದರೂ ಸುಧಾರಣೆ ಕಂಡು ಬಂದಿರುವುದಿಲ್ಲ. ಕೂಡಲೆ ಬಿಬಿಎಂಪಿ ವ್ಯಾಪ್ತಿಯ ಅಂಗನವಾಡಿಗಳನ್ನು ಬಲಪಡಿಸಬೇಕು ಎಂದು ಆಗ್ರಹಿಸಿದರು.



ಪ್ರತಿಭಟನೆಯಲ್ಲಿ ಸಂಘಟನೆಯ ಜಿಲ್ಲಾ ಪ್ರಧಾನ ಕಾರ್ಯದರ್ಶಿ ನಳಿನಾಕ್ಷಿ, ಮುಖಂಡರಾದ ರಮಾದೇವಿ ಆರ್, ಟಿ.ರಾಜೇಶ್ವರಿ, ಸುಮಿತ್ರಾ, ನಾಗರತ್ನ ಸೇರಿದಂತೆ ನೂರಕ್ಕು ಹೆಚ್ಚು ಅಂಗನವಾಡಿ ನೌಕರರು ಭಾಗವಹಿಸಿದ್ದರು. ■

ಗೋಹತ್ಯೆ ನಿಷೇಧ ಕಾಯ್ದೆ ರದ್ದುಪಡಿಸಲು ಪ್ರಗತಿಪರ ಸಂಘಟನೆಗಳ ಆಗ್ರಹ



ರಾಜ್ಯದಲ್ಲಿ ನೂತನವಾಗಿ ಹೊರಡಿಸುವ ಗೋ ಹತ್ಯೆ ನಿಷೇದದ ಕಾಯದೆಯ ಸುಗ್ರಿವಾಜ್ಞೆಯನ್ನು ವಾಪಸ್ ಪಡೆಯಬೇಕು ಎಂದು ಒತ್ತಾಯಿಸಿ ಪ್ರಗತಿಪರ ಸಂಘಟನೆಗಳ ನೇತೃತ್ವದಲ್ಲಿ ಗುರುವಾರ ಕೋಲಾರ ನಗರದ ಮೆಕ್ಕೆ ವೃತ್ತದಲ್ಲಿ ಮಾನವ ಸರಪಳಿ ನಡೆಸಿ ಸುಗ್ರಿವಾಜ್ಞೆ ಪ್ರತಿಯನ್ನು ಸುಟ್ಟು ಪ್ರತಿಭಟನೆ ನಡೆಸಿದರು.

ರಾಜ್ಯದಲ್ಲಿ ಜಾನುವಾರು ಹತ್ಯೆ ಪ್ರತಿಭಂದಕ ಮತ್ತು ಸಂರಕ್ಷಣಾ 2020 ಕಾಯ್ದೆಯನ್ನು ಸುಗ್ರಿವಾಜ್ಞೆ ಮೂಲಕ ಜಾರಿ ಮಾಡಲು ಹೊರಟಿರುವುದು ಪ್ರಜಾಪ್ರಭುತ್ವದ ವಿರೋಧಿ ಕ್ರಮವಾಗಿದೆ ಈ ಕಾಯ್ದೆಯಿಂದ ಹೈನುಗಾರಿಕೆಯನ್ನೇ ಜೀವಾಳವಾಗಿಸಿಕೊಂಡಿರುವ ಕುಟುಂಬಗಳ ಆರ್ಥಿಕತೆಯ ಮೇಲೆ ದೊಡ್ಡ ಹೊಡೆತ ಬೀಳಲಿದೆ ಜಿಲ್ಲೆಯಲ್ಲಿ ರೈತರು ಹೈನುಗಾರಿಕೆಯನ್ನು ಉಪಕಸುಬನ್ನಾಗಿಸಿ ಸಾಕಷ್ಟು ಕುಟುಂಬಗಳು ಅವಲಂಭಿಸಿ ಜೀವನ ನಡೆಸುತ್ತಿವೆ ಹೀಗಿರುವಾಗಿ ಅನುಪಯುಕ್ತ ಜಾನುವಾರುಗಳು, ಬಂಜೇತನದ ರಾಸುಗಳು, ಗಂಡು ಕರುಗಳನ್ನು ಮಾರಾಟದಿಂದ ಅಲ್ಪಸ್ವಲ್ಪ ಅರ್ಥಿಕವಾಗಿ ಸಹಾಯವಾಗುತ್ತಿತ್ತು ಇತ್ತೀಚೆಗೆ ರಾಜ್ಯದಲ್ಲಿ ಹೊರಡಿಸಿರುವ ಗೋ ಹತ್ಯೆ ನಿಷೇಧದ ಸುಗ್ರಿವಾಜ್ಞೆಯಿಂದ ರೈತರಿಗೆ ಸಾಕಷ್ಟು ಹೊರೆ ಬೀಳಲಿದೆ ಎಂದು ಅಕ್ರೋಶ ವ್ಯಕ್ತ ಪಡಿಸಿದರು.

ಗೋವಾ ರಾಜ್ಯದಲ್ಲಿ ಬಿಜೆಪಿ ಸರ್ಕಾರವೇ ಆಡಳಿತ ನಡೆಸುತ್ತಿದ್ದು ಅಲ್ಲಿ ಗೋಮಾಂಸ ಕೊರತೆ ಉಂಟಾಗಿ ಗೋವುಗಳು ಮತ್ತು ಗೋಮಾಂಸವನ್ನು ಪೂರೈಸುವಂತೆ ದೇಶದ ಇತರೇ ರಾಜ್ಯಗಳನ್ನು ವಿನಂತಿಸುತ್ತಿದ್ದಾರೆ ಆದರೆ ನಮ್ಮ ರಾಜ್ಯದಲ್ಲಿ ಜನತೆಯ ಸಮಸ್ಯೆಗಳಿಗೆ ಸ್ಪಂದಿಸುವುದು ಬಿಟ್ಟು ಒಂದೇ ಸಮುದಾಯವನ್ನು ಗುರಿಯನ್ನಾಗಿಸಿಕೊಂಡು ಗೋಹತ್ಯೆ ನಿಷೇಧಿಸಿ ರಾಜ್ಯಪಾಲರ ಮೂಲಕ ಸುಗ್ರಿವಾಜ್ಞೆ ಹೊರಡಿಸುವ ಮೂಲಕ ರೈತರ ಅರ್ಥಿಕತೆ ಹೊಡೆತದ ಜೊತೆಗೆ ದಲಿತರು ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಆಹಾರ ಪದ್ಧತಿಯ ಹಕ್ಕಿನ ಮೇಲೆ ದಾಳಿ ನಡೆಸುತ್ತಿದೆ ಎಂದು ಹೇಳಿದರು.

ರೈತರು ಹೈನುಗಾರಿಕೆಯನ್ನು ಬಿಡಬೇಕಾದ ಪರಿಸ್ಥಿತಿಯು ಬರಲಿದೆ. ಈಗಾಗಲೇ ಉತ್ತರಪ್ರದೇಶ, ಮಧ್ಯಪ್ರದೇಶ, ಗುಜರಾತ್ ಮತ್ತಿತರರ ರಾಜ್ಯಗಳಲ್ಲಿ ಇಂತಹ ಕಾಯ್ದೆಯನ್ನು ಜಾರಿ ಮಾಡಿದರಿಂದ ಅಲ್ಲಿನ ರೈತರು ಅನುಪಯುಕ್ತ ಹಸು, ಎಮ್ಮೆಗಳನ್ನು ಬೀದಿಯಲ್ಲಿ ಬಿಟ್ಟಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ರಾಜ್ಯದಲ್ಲಿ ಬಂದರೂ ಆಶ್ಚರ್ಯಪಡಬೇಕಾಗಿಲ್ಲ ಎಂದು ಸರಕಾರದ ಕ್ರಮವನ್ನು ಪ್ರಶ್ನಿಸಿದರು

ಗೋಮಾಂಸವನ್ನು ವಿದೇಶಗಳಿಗೆ ರಫ್ತು ಮಾಡಲು ಕಾರ್ಪೊರೇಟ್ ಕಂಪನಿಗಳು ಗೋವುಗಳನ್ನು ಕಟಾವು ಮಾಡಲು ಅವಕಾಶ ಕಲ್ಪಿಸಿ, ದೇಶೀಯವಾಗಿ ಗೋವುಗಳನ್ನು ಕಟಾವು ಮಾಡಲು ಅವಕಾಶ ನಿರಾಕರಿಸುತ್ತಿರುವುದರ ಹಿಂದೆ ಇವರ ಕೀಳು ಮಟ್ಟದ ರಾಜಕೀಯ ಇದೆ ರೈತರ ಹಿತ ಕಾಯುವ ನೆಪದಲ್ಲಿ ಗೋಹತ್ಯೆ ನಿಷೇದದ ಸುಗ್ರಿವಾಜ್ಞೆ ಹೊರಡಿಸಿರುವ ಬಿಜೆಪಿ ಸರ್ಕಾರವು ಈ ಕೂಡಲೇ ಕಾಯ್ದೆಯನ್ನು ವಾಪಸ್ ಪಡೆಯಬೇಕು ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ರಾಜ್ಯಾದ್ಯಂತ ಉಗ್ರ ಪತ್ರಿಭಟನೆ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಈ ಸಂದರ್ಭದಲ್ಲಿ ಸಿಐಟಿಯು ಮುಖಂಡ ಗಾಂಧಿನಗರ ನಾರಾಯಣಸ್ವಾಮಿ, ನಗರಸಭೆ ಸದಸ್ಯ ಅಂಬರೀಷ್, ಡಿಎಚ್ಎಸ್ ವಕ್ಕಲೇರಿ ರಾಜಪ್ಪ, ರೈತ ಸಂಘಟನೆಯ ಅಬ್ಬಣಿ ಶಿವಪ್ಪ, ರಾಮೇಗೌಡ, ಶ್ರೀನಿವಾಸಗೌಡ ಕೆಪಿಆರ್ ಎಸ್ ಟಿ.ಎಂ.ವೆಂಕಟೇಶ್, ಎನ್ ಎನ್ ಶ್ರೀರಾಮ್, ದಲಿತ ಸಂಘಟನೆಯ ಮುಂಖಡರಾದ ಐಪಲ್ಲಿ ನಾರಾಯಣಸ್ವಾಮಿ, ಹೂಹಳ್ಳಿ ನಾಗೇಶ್ ನಾಗರಾಜ್, ಡಿಎಚ್ಎಸ್ ವಿ.ಅಂಬರೀಷ್ ಅಲ್ಪಸಂಖ್ಯಾತ ಮುಖಂಡರಾದ ಅಲ್ಲಾವುದ್ದೀನ್ ಬಾಬು, ಅಫ್ರಜ್, ಶಾಫಿ, ಅಬ್ದುಲ್, ಖಾಧಿರ್ ಪಾಷ, ಮತ್ತಿತರರು ಉಪಸ್ಥಿತರಿದ್ದರು.

ರಣ ಪ್ರಲಾಪ

ಕವನ

ಯಾಕೆ? ಜರೆಯುವಿರಿ ಕತ್ತು ಕೊಯ್ದಿಹೆನೆಂದು!
ರೈತನ ಶಿರವ ತರಿದೆನೆಂದು!
ಮತ್ತೆ, ರಣಹದ್ದುಗಳ ಗೆಳೆಯನೆಂದು,
ಈತ ರಣಹದ್ದುಗಳ ಗೆಳೆಯನೆಂದು.
ಕೆಡಗು ಕಳೆಯಲು ನಾಳವ ಹರಿದೆ,,,,
ರಕ್ತ ನಾಳವ ಹರಿದೆ..?
ಎಲ್ಲಿಹುದು ತಪ್ಪು!
ಶುದ್ಧಿಯ ವಿರೋಧ ಬೇಕೆ?
ನೋಡಿ! ಅಲ್ಲಿ ಆತನ ಶಿರವಿದೆ!!
ಉಳಿಯಿರಿ ಗಪ್ಪು?

ದೇ(ಶ)ಹದ ನಾಳವ ತರಿದೆನೆ?
ಶತಮಾನಗಳಿಂದೂಡಿದ ಅನ್ನ ನಾಳವನು?
ಹರಿಹರೀ ನಾನು
ಸಂಕುಲ ವಿನಾಶಕನೇ?
ಕೃತಘ್ನನೇ?
ಅಬ್ಬಾ! ಎಂತಹ ಘೋರ ಸುಳ್ಳು!
ಮಾಡಿಹುದು ನಿಮ್ಮನೆಲ್ಲ ಮಳ್ಳು.
ತಿಳಿದಿದೆ ಎಮಗೆ, ನಿಮ್ಮಯ ತಂತ್ರ
ಸುಳ್ಳನ್ನೇ ಹಲವು ಬಾರಿ ಉಸುರಿದರೇ
ನಿಜವಹುದೆಂಬ ಮಂತ್ರ!

ಕೊಟ್ಟಿ ವೈದ್ಯರ ನಂಬಿ ಮೋಸ ಹೋಗದಿರಿ!
ಉಸಿರು ನಿಂತ ಮೇಲೆ ಏನಹುದು ಮರೆಯದಿರಿ!
ಚಿಕಿತ್ಸೆ ತಿಳಿದಿಹೆನೆಂಬ ಮೂಢಗೆ ಬೇಕು, ವಿಶ್ವ
ವಿದ್ಯಾಲಯಗಳ ಪ್ರಮಾಣ ಪತ್ರ!
ಗಾಂಧೀ ನಾಡಲ್ಲಿ ರಕ್ತ ಶುದ್ಧೀಕರಿಸಿದ್ದಕ್ಕೆ
ಅಲ್ಲವೇ, ಸಿಕ್ಕಿದ್ದು ಈ ಭಡ್ತಿ ಸೂತ್ರ!

ಮೂಗು ಇರುವವರೆಗೆ ನೆಗಡಿ ಇರುತ್ತೇ!
ಅದು ಎಲ್ಲರಿಗೂ ಗೊತ್ತು!
ಮೂಗ ತರಿದರೇ ನೆಗಡಿ ಎಲ್ಲಿರುತ್ತೆ ,,,,?
ಹೇಗಿದೆ ನನ್ನ ಹಕಿಕತ್ತು!
ಮೂಗು ಹೋಯಿತೆಂಬ ಪ್ರಲಾಪ ಬೇಡಾ!
ಭದ್ರವಾಗಿರಿಸಲಾಗಿದೆ ಅದನು ಕೂಡಾ!

ವಿರೋಧಕ್ಕಾಗಿ ವಿರೋಧ
ಅವರಿಗದು ಚಟಾ!
ಎಂತಹ ಮೂರ್ಖರು ಇವರು
ವೈದ್ಯರಂತೆ, ಹ್ಹ ಹ್ಹಾ!
ಕೆಡುಗು ಕಳೆಯಲು ಹರಿದ ನಾಳಕೆ
ಸಾವರೆಂಬರು ಎಲ್ಲಿಯ ಧಿಟಾ
ಇದು ಎಲ್ಲಿಯ ಧಿಟಾ?

– ಬಸು ಬಳ್ಳಾರಿ

ಎಂಡೋಸಲ್ಫಾನ್ ಅಂಗವಿಕಲರ ಪುನರ್ವಸತಿ ಕೇಂದ್ರಕ್ಕೆ ಅನುದಾನ ಬಿಡುಗಡೆಗೆ ಆಗ್ರಹಿಸಿ ಸಚಿವ ಬಸವರಾಜ್ ಬೊಮ್ಮಾಯಿಗೆ ಮನವಿ



ಅಂಗವಿಕಲರ ಹಕ್ಕುಗಳ ರಾಷ್ಟೀಯ ವೇದಿಕೆ (NPRD) ನವದೆಹಲಿಗೆ ಸಂಯೋಜಿಸಲ್ಪಟ್ಟ ಕರ್ನಾಟಕ ರಾಜ್ಯ ಅಂಗವಿಕಲರ ಹಾಗೂ ಪಾಲಕರ ಒಕ್ಕೂಟದ ಉಡುಪಿ ಜಿಲ್ಲಾ ಸಮಿತಿ ನೇತೃತ್ವದಲ್ಲಿ ಅಂಗವಿಕಲರ ವಿವಿಧ ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಿ ಜಿಲ್ಲಾಧಿಕಾರಿ ಕಚೇರಿ ಎದುರು ಯಶಸ್ವಿಯಾಗಿ ಜರಗಿದ ಬೃಹತ್ ಪ್ರತಿಭಟನಾ ಧರಣಿ ಮುಷ್ಕರದ ನಂತರದಲ್ಲಿ ಎಂಡೋಪೀಡಿತ ಅಂಗವಿಕಲರಿಗಾಗಿ ನಾಡ, ಸೇನಾಪುರದಲ್ಲಿ ಕಾದಿರಿಸಿದ ಸರಕಾರಿ ಸ್ಥಳ ವಿಸ್ತೀಣ 95.00 ಎಕ್ರೆಯಲ್ಲಿ ಸುಮಾರು 10 ಕೋಟಿ ರೂಪಾಯಿ ವೆಚ್ಚದಲ್ಲಿ ಪುನರ್ವಸತಿ ಕೇಂದ್ರ, ಸುಸಜ್ಜಿತ ಆಸ್ಪತ್ರೆ ಕಟ್ಟಡ ನಿರ್ಮಾಣ ಮಾಡಲು ಉಡುಪಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಕಚೇರಿಯಿಂದ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಹಣ ಬಿಡುಗಡೆ ಸಮಾರಂಭ ಮಾಡಲು ಕೋರಿ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಗೃಹ ಸಚಿವ ಬಸವರಾಜ್ ಬೊಮ್ಮಾಯಿ ರವರನ್ನು ಗೃಹ ಕಚೇರಿಯಲ್ಲಿ ಬೇಟಿ ಮಾಡಿ ಮನವಿ ಸಲ್ಲಿಸಿದ ನಿಯೋಗದಲ್ಲಿ ಕರ್ನಾಟಕ ರಾಜ್ಯ ಅಂಗವಿಕಲರ ಹಾಗೂ ಪಾಲಕರ ಒಕ್ಕೂಟದ ಉಡುಪಿ ಜಿಲ್ಲಾ ಗೌರವಾಧ್ಯಕ್ಷ ವೆಂಕಟೇಶ್ ಕೋಣಿ, ಅಧ್ಯಕ್ಷ ಮಂಜುನಾಥ ಹೆಬ್ಬಾರ್ ಕಾಲ್ತೋಡು, ಗಣಪತಿ ಪೂಜಾರಿ ಅಮಾಸೆಬೈಲ್, ದೇವೇಂದ್ರ ಸುವರ್ಣ ವಡ್ಡರ್ಸೆ, ನಾಗಶ್ರೀ ಬೈಂದೂರು, ಮಮತಾ ಬೆಳ್ವೆ, ಸದಾಶಿವ ಮುದ್ರಾಡಿ, ಹರೀಶ ಕಾರ್ಕಳ, ಪ್ರಕಾಶ ಈದು ಮೊದಲಾದ ಮುಖಂಡರು ಭಾಗವಹಿಸಿದ್ದರು.

ವರದಿ: ವೆಂಕಟೇಶ್ ಕೋಣಿ



ಸಾವಿತ್ರಿಬಾಯಿ ಫುಲೆ ಸ್ಮರಣೆ – ಡಿ.ಹೆಚ್.ಎಸ್. ಸಂಘಟನೆಯಿಂದ ರಾಜ್ಯದಾದ್ಯಂತ ಆಚರಣೆ











ರೈತ, ಕಾರ್ಮಿಕ ವಿರೋಧಿ ಕೇಂದ್ರ ಸರಕಾರದ ವಿರುದ್ಧ ಕಾರ್ಮಿಕರ ಪ್ರತಿಭಟನೆ

ರೈತ ವಿರೋಧಿ ಕೃಷಿ ಕಾಯಿದೆಗಳನ್ನು ಹಾಗು ಜನ ವಿರೋಧಿ ವಿದ್ಯುತ್ ಮಸೂದೆಯನ್ನು ಹಿಂಪಡೆಯಲು ಒತ್ತಾಯಿಸಿ ದೇಶದ ರೈತ ಸಮೂಹವು ನಡೆಸುತ್ತಿರುವ ಹೋರಾಟ ತೀವ್ರವಾಗುತ್ತಿದೆ. ಇದೇ ಸಂದರ್ಭದಲ್ಲಿ ಬಂಡವಾಳಗಾರರ ಪರವಾಗಿರುವ 4 ಕಾರ್ಮಿಕ ಸಂಹಿತೆಗಳನ್ನು ರದ್ದುಗೊಳಿಸಲು ಒತ್ತಾಯಿಸಿ ಹಾಗು ಇತರೆ ಬೇಡಿಕೆಗಳನ್ನು ಒತ್ತಾಯಿಸಿ ರಾಷ್ಟ್ರಾದ್ಯಂತ ಪ್ರತಿಭಟನೆಗಳನ್ನು ನಡೆಸಲು ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ (ಸಿಐಟಿಯು) ಕರೆ ನೀಡಿತ್ತು.

ಅದರ ಭಾಗವಾಗಿ ಈಗಾಗಲೇ ಸಿಐಟಿಯು ರಾಜ್ಯ ಸಮಿತಿ ನೇತೃತ್ವದಲ್ಲಿ ಜನವರಿ 1 ರ ನೂತನ ವರ್ಷದಂದು 962 ಕೇಂದ್ರಗಳಲ್ಲಿ ಸುಮಾರು 21 ಸಾವಿರಕ್ಕಿಂತ ಅಧಿಕ ವಿವಿಧ ವಿಭಾಗದ ಕಾರ್ಮಿಕರು ರೈತ ವಿರೋಧಿ ಹಾಗೂ ಕಾರ್ಮಿಕ ವಿರೋಧಿ ಕಾಯ್ದೆಗಳನ್ನು ಮತ್ತು ವಿದ್ಯುತ್ ಕಾನೂನು ಪ್ರತಿಗಳನ್ನು ತಮ್ಮ ತಮ್ಮ ಕೆಲಸದ ಸ್ಥಳಗಳಲ್ಲಿ ಸಾಮೂಹಿಕವಾಗಿ ಸುಟ್ಟು ತಮ್ಮ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಆದಾಗ್ಯೂ ಬಿಜೆಪಿ ನೇತೃತ್ವದ ಕೇಂದ್ರ ಸರಕಾರ ತನ್ನ ಹಠಮಾರಿ ಧೋರಣೆ ಮುಂದುವರೆಸಿದೆ. ಇದುವರೆಗೂ ಏಳು ಬಾರಿ ಮಾತುಕತೆಗಳನ್ನು ರೈತ ಸಂಘಟನೆಗಳ ಜೊತೆ ನಡೆಸಿದ್ದರೂ ಅದು ಮೂರು ಕೃಷಿ ಮಸೂದೆಗಳನ್ನು ಮಾತ್ರ ವಾಪಸ್ಸ ಪಡೆಯಲು ಸಿದ್ದವಿಲ್ಲ. ಇದರಿಂದ ಸ್ಪಷ್ಟವಾಗುವುದೇನೆಂದರೆ ಮೋದಿ ಸರಕಾರ ರೈತರ ಬೆಳೆಗೆ ಬೆಂಬಲ ಖಾತ್ರಿಯಾದ ಬೆಂಬಲ ಬೆಲೆ ಖಾತ್ರಿಗೊಳಿಸಲು ತಯಾರಿಲ್ಲ ಎನ್ನುವುದು ಹೀಗಾಗಿ ಕೇಂದ್ರ ಸರಕಾರದ ಈ ಗೊಸುಂಬೆತನವನ್ನು ಚೆನ್ನಾಗಿ ಬಲ್ಲ ರೈತರು ತಮ್ಮ ದೇಶವ್ಯಾಪಿ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸಲು ನಿರ್ಧರಿಸಿದ್ದಾರೆ ಅನ್ನದಾತರ ಈ ಹೋರಾಟವನ್ನು ಸಿಐಟಿಯು ಸಂಪೂರ್ಣವಾಗಿ ಬೆಂಬಲಿಸುತ್ತದೆ.

ಅಲ್ಲದೆ "ಕಾರ್ಮಿಕ ಹಕ್ಕುಗಳನ್ನು ಉಳಿಸುತ್ತೇವೆ, ರೈತರ ಬದುಕನ್ನು ರಕ್ಷಿಸುತ್ತೇವೆ–ಕಾರ್ಪೋರೇಟ್ ಹಿಡಿತದಿಂದ ದೇಶವನ್ನು ಕಾಪಾಡುತ್ತೇವೆ." ಎಂಬ ಪ್ರತಿಜ್ಞೆ ಯೊಂದಿಗೆ ರಾಜ್ಯಾದ್ಯಂತ ಪ್ರಮುಖ 10 ಬೇಡಿಕೆಗಳನ್ನು ಹೀಡೆರಿಸಲು ಒತ್ತಾಯಿಸಿ ಪ್ರತಿಭಟನೆ ನಡೆಸಿದ್ದಾರೆ.

ದ.ಕ. :

ರೈತ ಕಾರ್ಮಿಕ ವಿರೋಧಿಯಾದ ಕೃಷಿ ಶಾಸನಗಳು, ಕಾರ್ಮಿಕ ಸಂಹಿತೆಗಳು, ವಿದ್ಯುತ್ ಮಸೂದೆಗಳ ವಾಪಸಾತಿಗಾಗಿ, ಎಲ್ಲಾ ರೀತಿಯ ಖಾಸಗೀಕರಣವನ್ನು ವಿರೋಧಿಸಿ, ನರೇಗಾ ಯೋಜನೆಯ ವಿಸ್ತರಣೆಗಾಗಿ ಮುಂತಾದ ಬೇಡಿಕೆಗಳನ್ನು ಮುಂದಿಟ್ಟು ದೇಶಾದ್ಯಂತ ಕಾರ್ಮಿಕರು ಪ್ರತಿಭಟನೆಗೆ ಕರೆ ನೀಡಿರುವ ಹಿನ್ನೆಲೆಯಲ್ಲಿ ಜನವರಿ 8, 2021 ರಂದು ಮಂಗಳೂರಿನ ಮಿನಿ ವಿಧಾನಸೌಧದ ಎದುರು ಸಿಐಟಿಯು ದ.ಕ. ಜಿಲ್ಲಾ ಸಮಿತಿ ನೇತೃತ್ವದಲ್ಲಿ ಪ್ರತಿಭಟನಾ ಪ್ರದರ್ಶನ ನಡೆಸಿತು.

ರೈತ ಕಾರ್ಮಿಕರ ಬದುಕನ್ನೇ ಸರ್ವನಾಶ ಮಾಡಲು ಪಣ ತೊಟ್ಟಿರುವ ನರೇಂದ್ರ ಮೋದಿ ಸರಕಾರದ ವಿರುದ್ದ ಆಕ್ರೋಶಭರಿತರಾಗಿ ಘೋಷಣೆ ಕೂಗಿದ ಪ್ರತಿಭಟನಾಕಾರರು, ದೇಶದ ಉಳಿವಿಗಾಗಿ ಪ್ರಬಲ ಹೋರಾಟವೊಂದೇ ಅಸ್ತ್ರ ಎಂದು ಕೇಂದ್ರ ಸರಕಾರಕ್ಕೆ ಎಚ್ಚರಿಕೆ ನೀಡಿದರು.

ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದ ಸಿಐಟಿಯು ರಾಜ್ಯ ಉಪಾಧ್ಯಕ್ಷರಾದ ವಸಂತ ಅಚಾರಿಯವರು, "ಜನರಲ್ಲಿದ್ದ ಆಕ್ರೋಶವನ್ನು ಬಂಡವಾಳವನ್ನಾಗಿಸಿದ ದೇಶದ ಆಳುವ ವರ್ಗ, ಎಲ್ಲಾ ಸಮಸ್ಯೆಗಳಿಗೆ ನರೇಂದ್ರ ಮೋದಿ ಉತ್ತರ ಎಂಬಂತೆ ಭ್ರಮೆ ಸ್ರಷ್ಟಿಸಿ, ಒಳ್ಳೆಯ ದಿನಗಳು ಬರಲಿದೆ ಎಂಬ ಸುಳ್ಳಿನ ಕಂತೆಯನ್ನೇ ಸೃಷ್ಟಿಸಿತು. ನಂತರ ಅಧಿಕಾರಕ್ಕೇರಿದ ನರೇಂದ್ರ ಮೋದಿ ಸರಕಾರವು ಕಳೆದ 6 ವರ್ಷಗಳಲ್ಲಿ ರೈತ ಕಾರ್ಮಿಕರು ಸೇರಿದಂತೆ ಜನಸಾಮಾನ್ಯರ ಬದುಕನ್ನೇ ನರಕವನ್ನಾಗಿಸಿತು. ಜೊತೆಗೆ ಅಂಬಾನಿ ಅಧಾನಿಗಳ ಹಿತ ಕಾಯುವ ಮೂಲಕ ತಾನು ಕಾರ್ಪೊರೇಟ್ ಕಂಪೆನಿಗಳ ಏಜೆಂಟ್ ಎಂಬುದನ್ನು ಸಾಬೀತುಪಡಿಸಿತು" ಎಂದು ಕಿಡಿ ಕಾರಿದರು.

ಸಿಐಟಿಯು ಜಿಲ್ಲಾಧ್ಯಕ್ಷರಾದ ಜೆ. ಬಾಲಕೃಷ್ಣ ಶೆಟ್ಟಿಯವರು ಮಾತನಾಡುತ್ತಾ, 'ದೇಶಕ್ಕೆ ಅನ್ನ ನೀಡುವ ರೈತರು ಕಳೆದ 45 ದಿನಗಳಿಂದ ಹೋರಾಟದ ಪಥದಲ್ಲಿದ್ದರೂ, ಅವರ ಬೇಡಿಕೆಗಳಿಗೆ ಸ್ಪಂದಿಸುವ ಎದೆಗಾರಿಕೆ ವಿಶ್ವಗುರು ಎಂದು ತನ್ನನ್ನು ತಾನು ಕರೆಸಿಕೊಳ್ಳುವ ನರೇಂದ್ರ ಮೋದಿಗೆ ಇಲ್ಲವಾಯಿತು. ದೇಶದ ಸಂಸತ್ತಿನಲ್ಲಿ ಚರ್ಚೆ ನಡೆಸದೆ ಸುಗ್ರಿವಾಜ್ಞೆಗಳ ಮೂಲಕ ಕೃಷಿ ಶಾಸನಗಳನ್ನು ಜಾರಿಗೆ ತರಲು ಹೊರಟ ಕೇಂದ್ರ ಸರಕಾರ ನಿಜಕ್ಕೂ ದೇಶದ್ರೋಹಿಯಾಗಿದೆ' ಎಂದರು.

ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ರವರು ಮಾತನಾಡುತ್ತಾ, 'ದೇಶವನ್ನು ಮುನ್ನಡೆಸುವ ತಾಕತ್ತು ಇರುವುದು ಹಾಗೂ ದೇಶದ ನಿಜವಾದ ಆಧಾರಸ್ತಂಭಗಳು ರೈತ ಕಾರ್ಮಿಕರು ಎಂಬುದನ್ನು ಇಡೀ ಸಮಾಜ ಒಪ್ಪಿಕೊಂಡರೆ, ದೇಶವನ್ನಾಳುವ ನರೇಂದ್ರ ಮೋದಿ ಹಾಗೂ ಅವರ ಅಂಧಭಕ್ತರು ಮಾತ್ರ ಅದಾನಿ ಅಂಬಾನಿಯೇ ದೇಶದ ಸರ್ವಸ್ವ ಎಂದು ಬೊಗಳೆ ಬಿಡುತ್ತಿದ್ದಾರೆ. ದೇಶದ ಜನರ ಬದುಕನ್ನು ಬಲಿ ಕೊಟ್ಟು, ಅದಾನಿ ಅಂಬಾನಿಗಳಿಗಾಗಿ ದೇಶದ ಸರ್ವ ಸಂಪತ್ತನ್ನು ಧಾರೆ ಎರೆದು ಕೊಡುವ ದೇಶದ್ರೋಹಿ ಸರಕಾರವನ್ನು ಅತೀ ಶೀಘ್ರದಲ್ಲೇ ಕಿತ್ತೆಸೆಯಬೇಕಾಗಿದೆ' ಎಂದರು.

ದೇಶವ್ಯಾಪಿಯಾಗಿ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಈ ಪ್ರತಿಭಟನೆ ನಡೆದಿದ್ದು, ತುಮಕೂರಿನಲ್ಲಿ ಜಿಲ್ಲಾಧಿಕಾರಿ ಕಚೇರಿಗೆ ಮುತ್ತಿಗೆ ಹಾಕಲು ಪ್ರಯತ್ನ ನಡೆಸಿದ ಸಿಐಟಿಯು ಕಾರ್ಯಕರ್ತರನ್ನು ಬಂಧಿಸಿ ಬಿಡುಗಡೆ ಮಾಡಲಾಯಿತು. ಬೆಂಗಳೂರು, ಮಂಡ್ಯ, ಮೈಸೂರು, ಕೊಡಗು, ಹಾಸನ, ಉತ್ತರ ಕನ್ನಡ, ಉಡುಪಿ, ಕೋಲಾರ, ಕೊಪ್ಪಳ, ಬಳ್ಳಾರಿ, ರಾಯಚೂರು, ಕಲಬುರ್ಗಿ, ದಾವಣಗೆರೆ, ಗದಗ್, ಧಾರವಾಡ ಸೇರಿದಂತೆ ಅನೇಕ ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನೆ ನಡೆದಿದೆ. ■



















ಕೊರೋನಾ ನಂತರದ ಅಂತರಗಳ ಬಗ್ಗೆ ಯೋಚಿಸುತ್ತಾ .. ..



ಎ. ನಾರಾಯಣ

ಒಂದು ರೀತಿಯಲ್ಲಿ ಅಂತರಕ್ಕೊಂದು ಪರ್ಯಾಯ ಪದವೋ ಎಂಬಂತೆ ಎರಗಿದ ಕೊರೋನಾ ಬಿಟ್ಟು ಹೋಗುತ್ತಿರುವುದು ವಿವಿಧ ರೀತಿಯ ಅಂತರಗಳನ್ನೇ. ಮನುಷ್ಯ-ಮನುಷ್ಯ ಮನುಷ್ಯರ ನಡುವೆ ಅಂತರ ಹೆಚ್ಚುವುದು ಒಂದು ಕಡೆ, ಮನುಷ್ಯ ಮತ್ತು ಪ್ರಕೃತಿಯ ನಡುವೆ ಅಂತರ ಹೆಚ್ಚುವುದು ಇನ್ನೊಂದು ಕಡೆ. ತಂತ್ರಜ್ಞಾನ ಸಾಧ್ಯವಾಗಿಸಿದ ಹೊಸ ಪಲ್ಲಟಗಳಿಂದಾಗಿ ಎಲ್ಲಾ ವರ್ಗದ, ಎಲ್ಲಾ ಹಿನ್ನೆಲೆಯ ಜನರೆಲ್ಲಾ ಒಂದೆಡೆ ಕಲೆತು-ಬೆರೆತು ಪರಸ್ಪರ ಅರ್ಥ ಮಾಡಿಕೊಳ್ಳುವ, ಜಾತಿ-ಮತಗಳನ್ನು ಮೀರಿ ಸಾಮಾಜಿಕ ಸಂಬಂಧಗಳನ್ನು ಬೆಳೆಸಿಕೊಳ್ಳುವ ಅವಕಾಶಗಳೆಲ್ಲಾ ಮರೆಯಾಗಲಿವೆ. ಮನುಷ್ಯ ಮನುಷ್ಯನನ್ನು ಅರ್ಥಮಾಡಿಕೊಳ್ಳದೆ ಇದ್ದದ್ದು ಕೊರೋನಾಕ್ಕಿಂತ ಹೆಚ್ಚಿನ ಸಂಕಷ್ಟಗಳನ್ನು ಮಾನವ ಸಮಾಜಕ್ಕೆ ತಂದೊಡ್ಡಿದ್ದು ಎನ್ನುವ ಸತ್ಯ ನಮ್ಮ ಮುಂದಿರುತ್ತಾ ಅಂತರ ಕಾಯ್ದುಕೊಂಡು ಮನುಷ್ಯ ಮನುಷ್ಯನನ್ನು ಅರ್ಥ ಮಾಡಿಕೊಳ್ಳಬೇಕಾದ ದಿನಗಳನ್ನು ಊಹಿಸಿಕೊಳ್ಳಬಹುದು.

ಕೊರೋನಾ ಸಾಂಕ್ರಾಮಿಕ ಯಾವುದೇ ಭೇದವಿಲ್ಲದೆ ಎಲ್ಲರನ್ನೂ ಕಾಡಿತು ಅಂತ ಅಂದುಕೊಂಡಿದ್ದು ಅರ್ಧ ಸತ್ಯ. ಸಾಂಕ್ರಾಮಿಕದ ಭಯ ಎಲ್ಲರನ್ನೂ ಒಂದೇ ಪರಿಯಲ್ಲಿ ಕಾಡಿರಬಹುದು. ಆದರೆ ಸಾಂಕ್ರಾಮಿಕದ ಪರಿಣಾಮ ಎಲ್ಲರ ಮೇಲೂ ಒಂದೇ ರೀತಿ ಅಂದುಕೊಂಡರೆ ತಪ್ಪು. ಪ್ರಪಂಚದ ಚರಿತ್ರೆಯಲ್ಲಿ ಸಾಂಕ್ರಾಮಿಕ ಬಂದು ಹೋದಾಗಲೆಲ್ಲಾ ಅಸಮಾನತೆ ಹೆಚ್ಚಾಗಿದೆ ಎನ್ನುತ್ತವೆ ಅಧ್ಯಯನಗಳು. ಕೊರೋನಾ ನಂತರವೂ ಇದು ಆಗಲಿದೆ ಎಂದು ಅರ್ಥ ಶಾಸ್ತ್ರಜ್ಞರು ಲೆಕ್ಕ ಹಾಕುತ್ತಿದ್ದಾರೆ. ಕೊರೋನಾ ಬರುವ ಕಾಲಕ್ಕೇನೇ ವಿವಿಧ ರೀತಿಯ ಅಸಮಾನತೆಗಳಿಂದ, ವಿಶೇಷವಾಗಿ ಆರ್ಥಿಕ ಅಸಮಾನತೆಯಿಂದ, ಬಸವಳಿದು ಹೋಗಿದ್ದ ಭಾರತೀಯ ಸಮಾಜ ಈಗ ಅಸಮಾನತೆಯ ಇನ್ನೊಂದು ಅಧ್ಯಾಯದ ಹೊಸ್ತಿಲಲ್ಲಿ ಬಂದು ನಿಂತಂತೆ ತೋರುತ್ತದೆ. ಅಸಮಾನತೆ ಎಂದರೆ ಅಂತರ. ಒಂದು ರೀತಿಯಲ್ಲಿ ಅಂತರಕ್ಕೊಂದು ಪರ್ಯಾಯ ಪದವೋ ಎಂಬಂತೆ ಎರಗಿದ ಕೊರೋನಾ ಬಿಟ್ಟು ಹೋಗುತ್ತಿರುವುದು ವಿವಿಧ ರೀತಿಯ ಅಂತರಗಳನ್ನೇ.


ಸಾಂಕ್ರಾಮಿಕದ ತೀವ್ರತೆ ಗಾಢವಾಗಿದ್ದಾಗ, ಪ್ರಪಂಚದ ದೇಶಗಳೆಲ್ಲಾ ಹೆಚ್ಚು ಕಡಿಮೆ ಸ್ಥಬ್ದ ಸ್ಥಿತಿಯಲ್ಲಿದ್ದಾಗ ಭವಿಷ್ಯದ ಬಗ್ಗೆ ಒಂದು ಹೊಸ ಆಶಾವಾದ ಸಣ್ಣಗೆ ಹುಟ್ಟಿಕೊಂಡಿತ್ತು. ಅದು ಒಂದು ರೀತಿಯಲ್ಲಿ ಅಸಮಾನತೆಯನ್ನೂ ಅಲ್ಪಸ್ವಲ್ಪ ತಗ್ಗಿಸುವ ಭರವಸೆಯನ್ನೂ ಹುಟ್ಟಿಸಿತ್ತು. ಅದು ಕೊರೋನಾ ನಂತರದ ಜಗತ್ತು ಕಡಿಮೆ ಕೊಳ್ಳುಬಾಕತನದ ಹೊಸ ಅನುಭೋಗ ಸಂಸ್ಕೃತಿಯನ್ನು ಒಪ್ಪಿಕೊಳ್ಳಬಹುದು ಎನ್ನುವ ಆಶಾವಾದವಾಗಿತ್ತು. ಕೊರೋನಾದ ಆ ಸಂಕಷ್ಟ ದಿನಗಳಲ್ಲಿ ಎಲ್ಲರೂ ಕಡಿಮೆ ವಸ್ತುಗಳನ್ನು ಬಳಸಿಕೊಂಡು, ಪ್ರಕೃತಿಯ ಮೇಲೆ ಕಡಿಮೆ ಹೊರೆಯಾಗಿ, ಇದ್ದದ್ದನ್ನು ಹಂಚಿಕೊಂಡು ಬದುಕಿದಂತೆ ಬದುಕುವ ಹೊಸ ಜೀವನ ಶೈಲಿಯೊಂದರ ಪ್ರಾರಂಭ ಆಗಬಹುದು ಎನ್ನುವ ಲೆಕ್ಕಾಚಾರಗಳು ಕೇಳಿಬಂದಿದ್ದವು. ಈಗ ಅವೆಲ್ಲಾ ಹುಸಿಯಾಗಿವೆ. ಯಾವತ್ತು ಕೊರೋನಾ ಸಂಬಂಧಿತ ನಿರ್ಬಂಧಗಳೆಲ್ಲಾ ಕಡಿಮೆಯಾದವೋ ಅಂದಿನಿಂದ ಮತ್ತೆ ಯಾವತ್ತಿನಂತೆ ಅಪರಿಮಿತ ಉಪಭೋಗದ ಬದುಕು ಪ್ರಾರಂಭವಾಗಿದೆ. ಮತ್ತೆ ಮಾಲ್ ಗಳೆಲ್ಲಾ ಫುಲ್, ಮತ್ತೆ ಪ್ರವಾಸಿತಾಣಗಳಲ್ಲೆಲ್ಲಾ ಜನಸಂದಣಿಯೋ ಜನಸಂದಣಿ, ಮತ್ತೆ ದೇವಸ್ಥಾನಗಳ ಮುಂದೆ ಕೊನೆಯೇ ಇಲ್ಲದ ಸಾಲುಗಳು, ಮತ್ತೆ 'ಹೋಂಸ್ಟೇ' ಗಳೆಲ್ಲ ಪೂರ್ತಿ ಭರ್ತಿ. ಕೊರೋನಾ ಕಾಲದಲ್ಲಿ ಕಡಿಮೆಯಾಗಿದ್ದ ತಲಾ ಕಾರ್ಬನ್ ಫೂಟ್-ಪ್ರಿಂಟ್ ಮತ್ತೆ ಪುಟಿದೇಳುತ್ತಿದೆ.

ಇತ್ತೀಚಿಗೆ ಇಂಡಿಯನ್ ಎಕ್ಸ್ ಪ್ರೆಸ್ ಪತ್ರಿಕೆಯಲ್ಲಿ ಈ ಕುರಿತು ಬಂದ ಲೇಖನವೊಂದರ ಶೀರ್ಷಿಕೆ ಎಲ್ಲವನ್ನೂ ಹೇಳುತ್ತದೆ – A Revenge Return of Consumption After Covid. ಅಂದರೆ ಕೋವಿಡ್ ಮುಗಿದ ಕೂಡಲೇ ತಿಂಗಳಾನುಗಟ್ಟಲೆ ಎಲ್ಲವನ್ನೂ ಕಡಿಮೆ ಬಳಸಿ ನಡೆಸಿದ ನಿಯಂತ್ರಣದ ಬದುಕಿನ ವಿರುದ್ಧ ಸೇಡು ತೀರಿಸಿಕೊಳ್ಳಲೋ ಎಂಬಂತೆ ಹೊಸ ಅನುಭೋಗದ ಅಲೆಯೊಂದು ಪ್ರಾರಂಭವಾಗಿದೆ. ಹಳೆಯ ಅತೀ ಅನುಭೋಗದ ಸಂಸ್ಕೃತಿ ಹೋಗಿ ಹೊಸದೇನೂ ಸೃಷ್ಟಿಯಾಗುತ್ತದೆ ಎನ್ನುವ ಸಾಧ್ಯತೆಗಳೇನೂ ಕಾಣಿಸುತ್ತಿಲ್ಲ. ಮತ್ತೆ ಅದೇ ಹಳೆಯ ರೀತಿಯಲ್ಲಿ ಹೊಸ ಹೊಸ ಬಯಕೆಗಳನ್ನೆಲ್ಲಾ ಸೃಷ್ಟಿಸುತ್ತಾ, ಅವುಗಳನ್ನು ತೀರಿಸಲು ಹೊಸ ಹೊಸ ವಸ್ತುಗಳನ್ನು ಸೃಷ್ಟಿಸಿ ಪೇರಿಸುತ್ತಾ, ಹೊಸ ಹೊಸ ರೀತಿಯಲ್ಲಿ ಪ್ರಕೃತಿಯ ವಿರುದ್ಧ ದಾಳಿ ಮಾಡುತ್ತಾ ಬದುಕುವ ಹಳೆಯ ಅರ್ಥ ಸಂಸ್ಕೃತಿಯ ಹೊಸ ಚಿಗುರುಗಳು ಕಾಣಿಸಿಕೊಳ್ಳುತ್ತಿವೆ. ಆರ್ಥಿಕತೆ ಸೊರಗಿ ಮಲಗಿರುವ ಇಂದಿನ ಸ್ಥಿತಿಯಲ್ಲಿ, ಜನ ಉದ್ಯೋಗಾವಕಾಶಗಳಿಗಾಗಿ ಎದುರು ನೋಡುತ್ತಿರುವ ಈ ಸಂದರ್ಭದಲ್ಲಿ ಮತ್ತೆ ಬೇಡಿಕೆ-ಪೂರೈಕೆ ಸರಪಳಿ ಬಲಿತುಕೊಳ್ಳುತ್ತಿರುವುದು ಅಪ್ಯಾಯಮಾನವಾಗಿ ಕಾಣಿಸಬಹುದು. ಆದರೆ ಇಂತಹ ಅಳತೆಮೀರಿದ ಅನುಭೋಗದ ಸಂಸ್ಕೃತಿಯೇ ಸಾಂಕ್ರಾಮಿಕವನ್ನು ಹೊತ್ತು ತಂದಿರುವುದು ಎನ್ನುವ ಸತ್ಯ ಹೆಚ್ಚು ಕಡಿಮೆ ಮರೆತೇ ಹೋಗಿದೆ. ಮನುಷ್ಯ-ಮನುಷ್ಯ ಮನುಷ್ಯರ ನಡುವೆ ಅಂತರ ಹೆಚ್ಚುವುದು ಒಂದು ಕಡೆ, ಮನುಷ್ಯ ಮತ್ತು ಪ್ರಕೃತಿಯ ನಡುವೆ ಅಂತರ ಹೆಚ್ಚುವುದು ಇನ್ನೊಂದು ಕಡೆ..

ಅದೇ ವೇಳೆಗೆ ಬಹುರಾಷ್ಟ್ರೀಯ ವ್ಯವಹಾರ ಸಲಹಾ ಸಂಸ್ಥೆ ಕೆಪಿಎಂಜಿ ನಡೆಸಿದ ಅಧ್ಯಯನವೊಂದು ಹೊರಗೆಡಹಿರುವ ಕೆಲ ಮಾಹಿತಿಗಳು ಕುತೂಹಲಕಾರಿಯಾಗಿವೆ. ಈ ವರದಿಯ ಪ್ರಕಾರ ಭಾರತದ ಆನ್-ಲೈನ್ ಶಿಕ್ಷಣ ವ್ಯವಹಾರ 2021ರ ಅಂತ್ಯದೊಳಗೆ ಈಗ ಇರುವುದಕ್ಕಿಂತ ಹಲವು ಪಟ್ಟು ಹೆಚ್ಚಾಗಿ ಸುಮಾರು 196 ಕೋಟಿ ಡಾಲರ್ ಗಳಷ್ಟಾಗಲಿದೆ. ಈ ವ್ಯವಹಾರದ ಈಗಿನ ವಾರ್ಷಿಕ ಗಾತ್ರ ಕೇವಲ 24 ಕೋಟಿ ಡಾಲರ್ ಗಳಷ್ಟು. ಅಂದರೆ ಕೊರೋನಾ ಕಾಲದಲ್ಲಿ ಆನ್-ಲೈನ್ ಮೂಲಕವೇ ನಡೆದ ಶೈಕ್ಷಣಿಕ ಚಟುವಟಿಕೆಗಳಲ್ಲಿ ಒಂದು ದೊಡ್ಡ ಪಾಲು ಕೊರೋನಾ ನಂತರವೂ ಆನ್-ಲೈನ್ ಮೂಲಕವೇ ನಡೆಯಲಿದೆ. ತಂತ್ರಜ್ಞಾನ ಶಿಕ್ಷಣ ಕ್ಷೇತ್ರದ ಸ್ವರೂಪವನ್ನೇ ಬದಲಿಸಲಿವೆ. ತರಗತಿಗಳಲ್ಲಿ ಸಹಪಾಠಿಗಳೆಲ್ಲಾ ಸೇರುವುದು, ಅವರ ಮುಂದೆ ಶಿಕ್ಷಕರು ನಿಂತು ಮುಖಾಮುಖಿ ವಿಚಾರ ವಿನಿಮಯ ನಡೆಸುವುದು ಇತ್ಯಾದಿಗಳೆಲ್ಲಾ ನಿಧಾನವಾಗಿ ಯಾಂತ್ರೀಕರಣಗೊಳ್ಳಲಿರುವ ಮುನ್ಸೂಚನೆ ಇದು. ಹಾಗೆಯೇ ಹಲವು ರೀತಿಯ ಬಿಳಿಕಾಲರ್ ಉದ್ಯೋಗಗಳಿಗೆಲ್ಲಾ ಇನ್ನು ಮುಂದೆ ಕಚೇರಿಗೆ ಹೋಗುವ ಪ್ರಮೇಯವಿಲ್ಲ. ದೊಡ್ಡ ದೊಡ್ಡ ಬಹುರಾಷ್ಟ್ರೀಯ ಕಂಪನಿಗಳು ಈಗಾಗಲೇ ತಮ್ಮ ನೌಕರರಿಗೆ ಇನ್ನು ಮುಂದೆ ಶಾಶ್ವತವಾಗಿ ಮನೆಯಿಂದಲೇ ಕೆಲಸ ಮಾಡಿ ಅಂತ ತಿಳಿಸಿವೆ. ಹಳೆಯ ಬಹುಮಹಡಿ ಕಟ್ಟಡಗಳ ಕಚೇರಿಗಳನ್ನು ಖಾಲಿ ಮಾಡಿವೆ. ಆರ್ಥಿಕವಾಗಿ ಇವೆಲ್ಲವುಗಳ ಒಳಿತು ಕೆಡುಕುಗಳ ಬಗ್ಗೆ ಪರ-ವಿರೋಧ ಚರ್ಚೆ ನಡೆಸಬಹುದು.

ಸಾಮಾಜಿಕವಾಗಿ ಯೋಚಿಸಿದರೆ ಒಂದು ವಿಚಾರವಂತೂ ಸತ್ಯ. ತಂತ್ರಜ್ಞಾನ ಸಾಧ್ಯವಾಗಿಸಿದ ಈ ಹೊಸ ಪಲ್ಲಟಗಳಿಂದಾಗಿ ಎಲ್ಲಾ ವರ್ಗದ, ಎಲ್ಲಾ ಹಿನ್ನೆಲೆಯ ಜನರೆಲ್ಲಾ ಒಂದೆಡೆ ಕಲೆತು-ಬೆರೆತು ಪರಸ್ಪರ ಅರ್ಥ ಮಾಡಿಕೊಳ್ಳುವ, ಜಾತಿ-ಮತಗಳನ್ನು ಮೀರಿ ಸಾಮಾಜಿಕ ಸಂಬಂಧಗಳನ್ನು ಬೆಳೆಸಿಕೊಳ್ಳುವ ಅವಕಾಶಗಳೆಲ್ಲಾ ಮರೆಯಾಗಲಿವೆ. ತಂತ್ರಜ್ಞಾನದಿಂದ ಮಾನವ ಕಳಚಿಕೊಳ್ಳಬೇಕಾದ ಸಮಯದಲ್ಲಿ ಕೊರೋನಾ ವೈರಾಣು ಮಾನವನನ್ನು ಇನ್ನಷ್ಟೂ ತಂತ್ರಜ್ಞಾನದ ದಾಸ್ಯಕ್ಕೆ ದೂಡಿದೆ. ಈಗ ಯಾರು ಯಾರನ್ನು ಸಂಧಿಸಬೇಕಿಲ್ಲ. ಯಾರು ಯಾರ ಹತ್ತಿರಾನೂ ಹೋಗಬೇಕಿಲ್ಲ – ಮಾನವ-ಮಾನವ ನಡುವಣ ಸಂಪರ್ಕ ಏನಿದ್ದರೂ ಯಂತ್ರ ಮಾಧ್ಯಮಗಳ ಮೂಲಕ. ಅಂತರ, ಅಂತರ – ಅಂತರದಿಂದಲೇ ಎಲ್ಲವನ್ನೂ ಮಾಡಲು ಹೊಸ ಡಿಜಿಟಲ್ ಪ್ಲಾಟ್ಫಾರ್ಮ್ ಗಳು ಸಿದ್ಧವಾಗಿವೆ. ಝೂಮ್ ಅಂತೆ, ಸ್ಕೈಪ್ ಅಂತೆ, ಗೂಗಲ್ ಮೀಟಿಂಗ್ ಅಂತೆ – ದೇಶಾಂತರದಿಂದ, ಖಂಡಾಂತರದಿಂದ ಎಲ್ಲರನ್ನೂ, ಎಲ್ಲವನ್ನೂ ಸಂಧಿಸಬಹುದು. ತರಗತಿಗಳು ತಂತ್ರಜ್ಞಾನದ ಮೂಲಕ, ವೈದ್ಯ ಮತ್ತು ರೋಗಿಯ ಭೇಟಿ ತಂತ್ರಜ್ಞಾನದ ಮೂಲಕ, ಸ್ನೇಹಿತರ, ಸಂಬಂಧಿಕರ, ಅಷ್ಟೇ ಯಾಕೆ ಕುಟುಂಬ ಸದಸ್ಯರ ಭೇಟಿ ನಡೆಯುವುದು ಡಿಜಿಟಲ್ ಮಧ್ಯಸ್ತಿಕೆಯ ಮೂಲಕ. ಈಗಾಗಲೇ ಅಸ್ತಿತ್ವದಲ್ಲಿದ್ದ ಈ ಸಾಧ್ಯತೆಗಳಿಗೆಲ್ಲಾ ಕೊರೋನಾ ದಾಳಿಯಿಂದಾಗಿ ವಿಶೇಷ ಪ್ರಾಮುಖ್ಯತೆ ಪ್ರಾಪ್ತವಾಗಿಬಿಟ್ಟಿದೆ. ಮನುಷ್ಯರನ್ನು ಹೆಚ್ಚು ಹೆಚ್ಚು ವ್ಯಕ್ತಿ-ಗತಗೊಳಿಸುವ, ಸಮಾಜವಿಮುಖಿಗಳಾಗಿಸುವ ಈ ಬೆಳವಣಿಗೆಗಳಿಂದಾಗಿ ಭಾರತದಂತಹ ಬಹು ಸಂಸ್ಕೃತಿಯ, ಬಹು-ವರ್ಗ ಸಮಾಜದ ಹೊಸ ಸಾಮಾಜೀಕರಣ ಪ್ರಕ್ರಿಯೆ ಹೇಗೆ ಬದಲಾಗಲಿದೆ ಎನ್ನುವುದನ್ನು ಈಗಲೇ ಊಹಿಸಲಾಗದು. ಒಮ್ಮೆ ಯಂತ್ರದ ಮಧ್ಯಸ್ತಿಕೆಯ ಅಂತರಕ್ಕೆ ಒಗ್ಗಿಕೊಂಡರೆ ಅಥವಾ ಈ ಮಧ್ಯಸ್ಥಿಕೆ ಅನಿವಾರ್ಯವಾದರೆ ಮಾನವ ಸಂಬಂಧಗಳು ಯಾವ ರೀತಿ ರೂಪುಗೊಳ್ಳಬಹುದು? ತೀರಾ ಹತ್ತಿರವಾಗಿದ್ದಾಗಲೇ ಪರಸ್ಪರ ಅರ್ಥಮಾಡಿಕೊಳ್ಳದೆ ಇದ್ದ ಮನುಷ್ಯ ಇನ್ನು ತಂತ್ರಜ್ಞಾನ ಮಾಧ್ಯಮದ ಮೂಲಕ ವ್ಯವಹರಿಸುತ್ತಾ ಎಷ್ಟು ಅರ್ಥಮಾಡಿಕೊಳ್ಳಲು ಸಾಧ್ಯ? ಮನುಷ್ಯ ಮನುಷ್ಯನನ್ನು ಅರ್ಥಮಾಡಿಕೊಳ್ಳದೆ ಇದ್ದದ್ದು ಕೊರೋನಾಕ್ಕಿಂತ ಹೆಚ್ಚಿನ ಸಂಕಷ್ಟಗಳನ್ನು ಮಾನವ ಸಮಾಜಕ್ಕೆ ತಂದೊಡ್ಡಿದ್ದು ಎನ್ನುವ ಸತ್ಯ ನಮ್ಮ ಮುಂದಿರುತ್ತಾ ಅಂತರ ಕಾಯ್ದುಕೊಂಡು ಮನುಷ್ಯ ಮನುಷ್ಯನನ್ನು ಅರ್ಥ ಮಾಡಿಕೊಳ್ಳಬೇಕಾದ ದಿನಗಳನ್ನು ಊಹಿಸಿಕೊಳ್ಳಬಹುದು.

ಇಷ್ಟೇ ಅಲ್ಲ. ಇಂತಹದ್ದೊಂದು ಮಹಾದುರಂತಕ್ಕೆ ಕಾಯುತ್ತಿತ್ತೊ ಏನೋ ಎನ್ನುವ ಹಾಗೆ ಭಾರತದಲ್ಲಿ ಸರಕಾರಗಳು – ಕೇಂದ್ರ ಹಾಗೂ ವಿವಿಧ ರಾಜ್ಯ ಸರಕಾರಗಳು – ಇನ್ನಿಲ್ಲ ಎಂಬಂತೆ ಅರ್ಥವ್ಯವಸ್ಥೆಯ ಖಾಸಗೀಕರಣಕ್ಕೆ ಮುಂದಾಗಿವೆ. ಇದ್ದ ಬದ್ದ ಸಾಮಾಜಿಕ ಭದ್ರತೆಯ ವ್ಯವಸ್ಥೆಯನ್ನೂ ಕಿತ್ತೆಸೆಯುತ್ತಿವೆ. ಏನಾಗುತ್ತಿದೆ ಎಂದು ಅರ್ಥಮಾಡಿಕೊಳ್ಳಲೂ ಆಗದಷ್ಟು ವೇಗದಲ್ಲಿ ಎಲ್ಲವೂ ನಡೆದುಹೋಗುತ್ತಿವೆ. ಕಾನೂನುಗಳ ಅನುಮೋದನೆ ಆಗುವುದು ಮಧ್ಯರಾತ್ರಿಯ ಕಾಲದಲ್ಲಿ. ಅಧಿಕಾರಸ್ಥರ ಮತ್ತು ಜನರ ನಡುವಣ ಅಂತರ ಕಡಿಮೆ ಮಾಡುವ ಪ್ರಜಾತಂತ್ರ ಮತ್ತದರ ಮೌಲ್ಯಗಳೆಲ್ಲಾ ಕೆಲಸಕ್ಕೆ ಬರುವುದಿಲ್ಲ; ಮೊದಲು ಸಂಕಷ್ಟ ನಿವಾರಣೆ, ಬದುಕಿ ಉಳಿದರೆ ಆ ನಂತರ ಪ್ರಜಾತಂತ್ರ ಎನ್ನುವ ಸೂತ್ರವೊಂದನ್ನು ಮೌನವಾಗಿ ತೇಲಿಬಿಡಲಾಗಿದೆ. ಕೊರೋನಾ ಬಂದೆರಗಿದ ದಿನದಿಂದೀಚೆಗೆ ಸರಕಾರ, ಪಾರ್ಲಿಮೆಂಟ್, ವಿಧಾನ ಸಭೆ, ಕಾನೂನು, ಕಟ್ಟಳೆ ಮುಂತಾದ ಪಾರಿಭಾಷಿಕ ಪದಗಳನ್ನೇ ಜಗತ್ತು ಮರೆತಿದೆ. ಅದೇನೋ ಪರಿಹಾರ ಪ್ಯಾಕೇಜ್ ಗಳ ಘೋಷಣೆ ಆದಾಗ ಕಾಣಿಸುವುದು ಓದಲೂ ಆಗದ ನೆನಪಿಡಲೂ ಆಗದ ಅಂಕೆ-ಸಂಖ್ಯೆಗಳ ಜಾಲ. ಎಂದಿನಂತೆ ಮತ್ತೆ ಸುಳ್ಳುಗಳು, ಅರ್ಧ ಸತ್ಯಗಳು, ಬುದ್ಧಿ ಮಂಕುಮಾಡುವಂತ ಯಾವುದೋ ಕಟ್ಟುಕತೆ, ಯಾವುದೋ ವೇಷ. ಯಾವುದೋ ಬಣ್ಣ. ಏನೇನೋ ವಿನ್ಯಾಸ. ವಿಧವಿಧದ ಪದಪುಂಜಗಳು. ನಮ್ಮ ಸುತ್ತ ಆವರಿಸಿಕೊಳ್ಳುತ್ತಿರುವುದು ಕೇವಲ ಸತ್ಯೋತ್ತರ ಸ್ಥಿತಿಯಲ್ಲ. ಇದೊಂದು ಅಸಂಗತವಾದ ಮಾದಕ ಸ್ಥಿತಿ. ಯೋಚಿಸಬೇಕು ಎಂದುಕೊಳ್ಳುವವರು ಕೂಡಾ ಯೋಚಿಸಲಾರಂಭಿಸಿದರೆ ಹುಚ್ಚು ಹಿಡಿದು ಹೋದೀತು ಎಂಬ ಭಯದಿಂದ ಯೋಚಿಸುವುದನ್ನೇ ಮರೆತು ಬಿಡುತ್ತಿರುವ ಈ ಸ್ಥಿತಿ. ಮಿದುಳುಗಳು ಬಂಧಿಯಾಗಿವೆ. ಮಿದುಳುಗಳು ಒತ್ತೆ ಇರಿಸಲ್ಪಟ್ಟಿವೆ. ಮಿದುಳುಗಳು ಮಾರಾಟವಾಗಿವೆ. ಸಾಂಕ್ರಾಮಿಕ ಹೊಸತಲ್ಲ. ಲಸಿಕೆ ಹೊಸತಲ್ಲ. ಆರ್ಥಿಕ ಕುಸಿತ-ಹಿಂಜರಿತ ಹೊಸತಲ್ಲ. ಲಸಿಕೆ ಬಂದ ನಂತರ ಸಾಂಕ್ರಾಮಿಕ ತೊಲಗೀತು. ಸಾಂಕ್ರಾಮಿಕ ನಂತರ ಆರ್ಥಿಕತೆ ಸಾವರಿಸಿಕೊಂಡು ಎದ್ದು ನಿಂತೀತು. ಆದರೆ ಒತ್ತೆಯಾಗಿರುವ ಮಿದುಳುಗಳನ್ನು, ಬಂಧಿಯಾಗಿರುವ ಮಿದುಳುಗಳನ್ನು ಮತ್ತು ಮಾರಾಟವಾಗಿರುವ ಮಿದುಳುಗಳನ್ನು ಬಂಧವಿಮೋಚನೆಗೊಳಿಸುವುದು ಹೇಗೆ? ಎಲ್ಲಿದೆ ಲಸಿಕೆ? ■



"ಈ ಯೂಟ್ಯೂಬ್ ವಿಡಿಯೊದಲ್ಲಿ ನೀವು ಒಂಟಿಯಾಗಿ ಹೇಗೆ ಇರಬಹುದು ಎಂದು ಕಲಿಸುತ್ತೇನೆ!"



“ಒಂದು ದೇಶ, ಒಂದು ಚುನಾವಣೆ” ಕರೆಯ ತಾರ್ಕಿಕ ವಿಸ್ತರಣೆ “ಒಂದು ದೇಶ, ಒಬ್ಬ ನಾಯಕ” ಎನ್ನುವುದೇ ಆಗಿದೆ; ಇದು ‘ಭಾರತದಲ್ಲಿ ಪ್ರಜಾಪ್ರಭುತ್ವ ಅತಿಯಾಗಿದೆ’ ಎಂಬ ನೀತಿ ಆಯೋಗದ ಸಿ.ಇ.ಒ.ಮಾತಿಗೆ ಅನುಗುಣವಾಗಿದೆ. ಈ ಕರಾಳ ಪ್ರಜಾಪ್ರಭುತ್ವ-ವಿರೋಧಿ, ಒಕ್ಕೂಟ-ವಿರೋಧಿ ಯತ್ನಗಳ ವಿಷಯದಲ್ಲಿ ಕಾಂಗ್ರೆಸ್ ಪಕ್ಷವು ವಿಶೇಷವಾಗಿ ಎಚ್ಚರ ವಹಿಸಬೇಕು, ಪ್ರಾದೇಶಿಕ ಪಕ್ಷಗಳು, ಅದರಲ್ಲೂ ರಾಜ್ಯಗಳಲ್ಲಿ ಅಧಿಕಾರದಲ್ಲಿರುವ ಪಕ್ಷಗಳು, ಈ ಸರ್ವಾಧಿಕಾರಶಾಹಿ ಯೋಜನೆಯಿಂದ ಬಹಳಷ್ಟನ್ನು ಕಳೆದುಕೊಳ್ಳಲಿವೆ. ಉಳಿದೆಲ್ಲಾ ವಿರೋಧ ಪಕ್ಷಗಳೊಂದಿಗೆ ಅವರೂ ಕೈಜೋಡಿಸಿದರೆ ಬಿಜೆಪಿಯ ಶಾಸನಾತ್ಮಕ ಪದವಂಚನೆಗಳನ್ನು ಸೋಲಿಸಬಹುದು.

ಒಂದು ದೇಶ, ಒಂದು ಚುನಾವಣೆ: ಪ್ರಜಾಪ್ರಭುತ್ವ ಹಾಗೂ ಒಕ್ಕೂಟ ವ್ಯವಸ್ಥೆಗೆ ಅಪಾಯ

ಪ್ರಕಾಶ ಕಾರಟ್



ಸಂವಿಧಾನದ ಮೇಲೆ ಹಾಗೂ ಭಾರತದಲ್ಲಿನ ಸಂಸದೀಯ ಪ್ರಜಾಪ್ರಭುತ್ವದ ಅಡಿಪಾಯದ ಮೇಲೆ ಮತ್ತೊಂದು ಗಂಭೀರ ದಾಳಿ ನಡೆಸಲು ಮೋದಿ ಸರ್ಕಾರ ಹಾಗೂ ಬಿಜೆಪಿ ಸಿದ್ಧತೆ ನಡೆಸಿದೆ.

“ಒಂದು ದೇಶ, ಒಂದು ಚುನಾವಣೆ” ವಿಷಯವನ್ನು ಪ್ರಚಾರ ಮಾಡುವ ಸಲುವಾಗಿ ಡಿಸೆಂಬರ್ 2020ರ ಕೊನೆಯ ವಾರದಲ್ಲಿ ಬಿಜೆಪಿಯು 25 ವೆಬಿನಾರ್‌ಗಳನ್ನು ನಡೆಸಿದೆ. ಪ್ರಧಾನ ಮಂತ್ರಿ, ನರೇಂದ್ರ ಮೋದಿಯವರು ತಮ್ಮ ಎಂದಿನ ಘೋಷಣೆಗಳೊಂದರಲ್ಲಿ “ಒಂದು ದೇಶ, ಒಂದು ಚುನಾವಣೆ”ಯ ಅಗತ್ಯದ ಬಗ್ಗೆ ಮಾತನಾಡಿದ ಹಿನ್ನೆಲೆಯಲ್ಲಿ ಇದು ಬಂದಿದೆ. ಸಂವಿಧಾನ ದಿನವಾದ ನವಂಬರ್ 26ರಂದು ನಡೆದ ಸದನಗಳ ಸಭಾಧ್ಯಕ್ಷರ 80ನೇ ಸಮ್ಮೇಳನದಲ್ಲಿ ಇತ್ತೀಚಿಗೆ ಅಂತಹ ಮಾತನ್ನಾಡಿದ್ದಾರೆ.

ಏಕಕಾಲದಲ್ಲಿ ಲೋಕಸಭಾ ಹಾಗೂ ವಿಧಾನಸಭಾ ಚುನಾವಣೆಗಳ ಅಗತ್ಯತೆಯ ಬಗ್ಗೆ ವ್ಯಾಪಕವಾಗಿ ನಡೆಯುತ್ತಿರುವ ವಾದಗಳ ಕುರಿತು ಆ ಬಿಜೆಪಿ ವೆಬಿನಾರ್‌ಗಳು ಪ್ರತಿಪಾದನೆ ಮಾಡಿವೆ: ಆ ಮೂಲಕ ಬಹಳಷ್ಟು ವೆಚ್ಚವನ್ನು ಉಳಿಸಬಹುದು; ಪದೇ ಪದೇ ನಡೆಯುವ ಚುನಾವಣೆಗಳ ಸಂದರ್ಭದಲ್ಲಿ ಜಾರಿ ಮಾಡುವ ಚುನಾವಣಾ ನೀತಿ ಸಂಹಿತೆಗಳಿಂದಾಗಿ ಅಭಿವೃದ್ಧಿ ಕೆಲಸಗಳಿಗೆ ಅಡ್ಡಿಯಾಗುತ್ತವೆ, ಅಧಿಕಾರಿಗಳ ಗಮನವನ್ನು ಬೇರೆಡೆ ಸೆಳೆಯುತ್ತವೆ, ಇತ್ಯಾದಿ ವಾದಗಳನ್ನು ಮಾಡಲಾಗುತ್ತಿದೆ. ಅಂತಹ ಒಂದು ವೆಬಿನಾರಿನಲ್ಲಿ, ಬಿಜೆಪಿಯ ಪ್ರಧಾನ ಕಾರ್ಯದರ್ಶಿ, ಭೂಪೇಂದ್ರ ಯಾದವ್ ಹೀಗೆ ಹೇಳಿದರು: “ಚುನಾವಣೆಯು ಪ್ರಜಾಪ್ರಭುತ್ವದ ಒಂದು ಸಾಧನವಷ್ಟೆ, ಆದರೆ ಪದೇ ಪದೇ ಚುನಾವಣೆಗಳನ್ನು ಮಾಡುವುದೇ ಪ್ರಜಾಪ್ರಭುತ್ವದ ಉದ್ದೇಶವೆನ್ನುವಂತೆ ತೋರುತ್ತದೆ. ಆಡಳಿತ ಹಿಂದೆ ಬೀಳುತ್ತದೆ.”

ಇದರ ಅಂತರಾರ್ಥ ಏನೆಂದರೆ ಹೆಚ್ಚು ಚುನಾವಣೆಗಳನ್ನು ನಡೆಸುವುದು ಪ್ರಜಾಪ್ರಭುತ್ವಕ್ಕೆ ಒಳ್ಳೆಯದಲ್ಲ, ಅದಕ್ಕೂ ಮುಖ್ಯವಾದದ್ದು ಆಡಳಿತ ಎಂದು. ರೈತರ ಹೋರಾಟಗಳ ಬಗ್ಗೆ ಮಾತನಾಡುತ್ತಾ ನೀತಿ ಆಯೋಗದ ಮುಖ್ಯ ಅಧಿಕಾರಿ(ಸಿಇಒ) ಅಮಿತಾಭ್ ಕಾಂತ್ ಭಾರತದಲ್ಲಿ ಪ್ರಜಾಪ್ರಭುತ್ವ ಅತಿಯಾಗಿದೆ ಎಂಬ ಮಾತಿಗೆ ಅನುಗುಣವಾಗಿದೆ ಇದು. ಸಂದೇಶವು ಹಗಲಿನಷ್ಟೇ ಸ್ಪಷ್ಟವಾಗಿದೆ – “ಒಂದು ದೇಶ, ಒಂದು ಚುನಾವಣೆ” ಕರೆಯ ತಾರ್ಕಿಕ ವಿಸ್ತರಣೆ “ಒಂದು ದೇಶ, ಒಬ್ಬ ನಾಯಕ” ಎನ್ನುವುದೇ ಆಗಿದೆ; ಮತ್ತು “ಅದು ಚರ್ಚೆಯ ವಿಷಯವಲ್ಲ, ಅದೀಗ ಭಾರತದ ಅಗತ್ಯ” ಎಂದು ಆ ನಾಯಕರು ಘೋಷಿಸಿ ಆಗಿದೆ.

ಎಲ್ಲಾ ಮಟ್ಟಗಳಲ್ಲಿನ ಚುನಾವಣೆಗಳನ್ನು ಒಟ್ಟಿಗೇ ನಡೆಸಬೇಕು(ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನೂ ರಾಜ್ಯ ಹಾಗೂ ದೇಶಗಳ ಚುನಾವಣೆಗಳ ಜತೆ ಮಾಡಬೇಕು ಎಂದು ಕೆಲವು ಬಿಜೆಪಿ ನಾಯಕರು ಬಯಸಿದ್ದಾರೆ) ಮತ್ತು ಅದನ್ನು ತರಲು ಅಗತ್ಯವಾದ ಸಾಂವಿಧಾನಿಕ ಬದಲಾವಣೆಗಳು ಸಂಸದೀಯ ಪ್ರಜಾಪ್ರಭುತ್ವದ ಗುಣಲಕ್ಷಣಗಳನ್ನು ಮೂಲಭೂತವಾಗಿ ಬದಲಾಯಿಸುತ್ತವೆ ಮತ್ತು ದೇಶದ ಒಕ್ಕೂಟ ವ್ಯವಸ್ಥೆಯನ್ನೇ ನಾಶಮಾಡುತ್ತವೆ. ಲೋಕಸಭಾ ಹಾಗೂ ರಾಜ್ಯ ವಿಧಾನಸಭಾ ಚುನಾವಣೆಗಳನ್ನು ಒಟ್ಟಿಗೇ ನಡೆಸುವುದೆಂದರೆ ವಿಧಾನಸಭೆಗೆ ಸರ್ಕಾರದ ಸಾಂವಿಧಾನಿಕ ಉತ್ತರದಾಯಿತ್ವವನ್ನು ಕಿತ್ತುಹಾಕುವುದೆಂದೇ ಅರ್ಥ. ಸಂವಿಧಾನದ ಅಡಿಯಲ್ಲಿ, ಒಂದು ಸರ್ಕಾರವು ಅವಿಶ್ವಾಸ ನಿರ್ಣಯದಲ್ಲಿ ಸೋತರೆ, ಅಥವಾ, ಹಣಕಾಸು ಮಸೂದೆ ಮೇಲಿನ ಮತದಾನದಲ್ಲಿ ಸೋತರೆ, ಅದು ರಾಜೀನಾಮೆ ನೀಡಲೇಬೇಕು, ಮತ್ತು ಪರ್ಯಾಯ ಸರ್ಕಾರ ರಚನೆಯಾಗದಿದ್ದರೆ, ಸದನವನ್ನು ವಿಸರ್ಜಿಸಬೇಕು ಮತ್ತು ಮಧ್ಯಂತರ ಚುನಾವಣೆ ನಡೆಸಬೇಕು. ಲೋಕಸಭೆಗಾಗಲೀ ಅಥವಾ ವಿಧಾನಸಭೆಗಾಗಲಿ ಸಂವಿಧಾನದಲ್ಲಿ ನಿಶ್ಚಿತ ಅಧಿಕಾರಾವಧಿಯನ್ನು ಒದಗಿಸಿಲ್ಲ.

ನೀತಿ ಆಯೋಗವು 2017ರ ‘ಚರ್ಚೆಯ ಪ್ರಬಂಧ’ದಲ್ಲಿ ಮತ್ತು 2018ರ ಕಾನೂನು ಆಯೋಗದ ಕರಡು ವರದಿಯಲ್ಲಿ ಕೆಲವು ಪ್ರಸ್ತಾಪಗಳನ್ನು ಮುಂದಿಡಲಾಗಿದೆ. ಅವೆಲ್ಲವುಗಳ ಒಟ್ಟು ತಾತ್ಪರ್ಯ ಹೀಗಿದೆ: ಈಗಿರುವ ಕೆಲವು ರಾಜ್ಯ ವಿಧಾನಸಭೆಗಳ ಅವಧಿಯನ್ನು ಮೊಟಕುಗೊಳಿಸುವುದು, ಅಥವಾ, ಕೆಲವುಗಳ ಅವಧಿಯನ್ನು ವಿಸ್ತರಿಸುವುದು, ಆ ಮೂಲಕ ಅವುಗಳನ್ನು ಲೋಕಸಭಾ ಚುನಾವಣೆಗಳ ಜತೆ ಜೋಡಿಸುವುದು, ಅಥವಾ, ಕೊನೇ ಪಕ್ಷ ಐದು ವರ್ಷಗಳ ಅವಧಿಯಲ್ಲಿ ಕೇವಲ ಎರಡು ರೀತಿಯ ಚುನಾವಣೆಗಳನ್ನು ನಡೆಸುವುದು. ವಿಧಾನಸಭೆಗಳ ಅವಧಿಯನ್ನು ಮೊಟಕುಗೊಳಿಸುವುದಾಗಲೀ ಅಥವಾ ಅದನ್ನು ವಿಸ್ತರಿಸುವುದಾಗಲೀ ನಿಜಕ್ಕೂ ಪ್ರಜಾಪ್ರಭುತ್ವ-ವಿರೋಧಿಯಾಗುತ್ತದೆ ಮತ್ತು ತಮ್ಮ ಶಾಸಕರನ್ನು ಆಯ್ಕೆಮಾಡುವ ಪ್ರಜೆಗಳ ಮೂಲಭೂತ ಹಕ್ಕುಗಳನ್ನು ಉಲ್ಲಂಘಿಸುತ್ತದೆ.

ಸದನದ ಮಧ್ಯಂತರ ವಿಸರ್ಜನೆಯನ್ನು ಮತ್ತು ತದನಂತರದ ಚುನಾವಣೆಗಳನ್ನು ತಪ್ಪಿಸಲು, ನಿಶ್ಚಿತ ಅಧಿಕಾರಾವಧಿ ಎಂಬುದು ಇರಬೇಕು ಎಂದು ಸೂಚಿಸಲಾಗಿದೆ. ಇದರ ಪರಿಣಾಮಗಳು ಅಪಾಯಕಾರಿಯಾಗಿವೆ. ನೀತಿ ಆಯೋಗದ ಪ್ರಬಂಧದಲ್ಲಿನ ಪ್ರಸ್ತಾಪಗಳಲ್ಲಿನ ಒಂದರಲ್ಲಿ, ಲೋಕಸಭಾ ವಿಸರ್ಜನೆಯನ್ನು ತಪ್ಪಿಸಲು ಸಾಧ್ಯವಾಗದಿದ್ದರೆ ಮತ್ತು ಲೋಕಸಭಾದ ಇನ್ನುಳಿದ ಅವಧಿಯು ದೀರ್ಘವಾಗಿಲ್ಲದಿದ್ದರೆ, ಆಗ ರಾಷ್ಟ್ರಾಧ್ಯಕ್ಷರೇ, ತಾವು ನೇಮಿಸಿದ ಸಚಿವ ಮಂಡಳಿಯ ಸಹಾಯ ಹಾಗೂ ಸಲಹೆಯ ಆಧಾರದಲ್ಲಿ, ಮುಂದಿನ ಸದನವನ್ನು ರೂಪಿಸುವವರೆಗೆ ಆಡಳಿತ ನಡೆಸಲು ಸಾಧ್ಯವಾಗುವಂತೆ ಒಂದು ನಿಬಂಧನೆಯನ್ನು ಮಾಡಬೇಕು ಎಂದಿದೆ. ಈ ಅತಿರೇಕದ ಪ್ರಸ್ತಾಪವು ರಾಷ್ಟ್ರಾಧ್ಯಕ್ಷರನ್ನು ಕಾರ್ಯಾಂಗದ ಮುಖ್ಯಸ್ಥರನ್ನಾಗಿ ಮಾಡುತ್ತದೆ. ಇದು ಹಿಂಬಾಗಿಲ ಮೂಲಕ ರಾಷ್ಟ್ರಪತಿಗಳದ್ದೇ ಆಳ್ವಿಕೆಯನ್ನು ತರುವುದಾಗಿದೆ. ಇದೇ ರೀತಿಯ ಧೋರಣೆಯನ್ನು ರಾಜ್ಯ ವಿಧಾನಸಭೆಗಳಿಗೂ ಹೇಳಲಾಗಿದೆ, ಅಲ್ಪಾವಧಿಗೆ ರಾಜ್ಯಪಾಲರು ಕಾರ್ಯಾಂಗವನ್ನು ತಮ್ಮ ವಶಕ್ಕೆ ಪಡೆಯಬಹುದಾಗಿದೆ.

ಸದನದಲ್ಲಿ ಸ್ಥಿರ ಬಹುಮತ ಹೊಂದಿರುವ ಆಳುವ ಪಕ್ಷವು ಸದನವನ್ನು ವಿಸರ್ಜಿಸಲು ಶಿಫಾರಸು ಮಾಡಲು ಸಾಧ್ಯವಿಲ್ಲ ಎನ್ನುವುದು ನಿಶ್ಚಿತ ಅಧಿಕಾರಾವಧಿ ಎಂಬುದರ ನಿಜವಾದ ಅರ್ಥವಾಗಿದೆ. ಲೋಕಸಭೆಯಲ್ಲಿ ಅವಿಶ್ವಾಸ ನಿರ್ಣಯ ಮಂಡಿಸಿದರೆ ಅದರ ಜತೆಯಲ್ಲಿಯೇ ಪರ್ಯಾಯ ಸರ್ಕಾರವನ್ನು ನಡೆಸುವ ಹೊಸ ನಾಯಕನ ಹೆಸರನ್ನು ಸೂಚಿಸುವ ನಿರ್ಣಯವನ್ನೂ ಮಂಡಿಸಬೇಕಾಗುತ್ತದೆ ಎಂದು ಕಾನೂನು ಆಯೋಗದ ವರದಿಯು ಪ್ರಸ್ತಾಪಿಸಿದೆ ಕೂಡ. ಇದನ್ನು “ ಸೃಜನಾತ್ಮಕ ಅವಿಶ್ವಾಸ ಮತ” ಎನ್ನಲಾಗಿದೆ, ಇದರ ಅರ್ಥವೇನೆಂದರೆ, ಸದನದ ಸದಸ್ಯರು ಒಂದು ಸರ್ಕಾರವನ್ನು ಮತದಾನದ ಮೂಲಕ ಸೋಲಿಸಿದರೂ, ಅಲ್ಲಿ ಮತ್ತೊಂದು ಪರ್ಯಾಯ ಸರ್ಕಾರ ಇರಲೇಬೇಕು, ಅಥವಾ, ಮೈತ್ರಿಕೂಟದ ಸರ್ಕಾರವಾದರೂ ಇರಬೇಕು, ಆದರೆ ಅದು ಜನಪ್ರಾತಿನಿಧ್ಯವಿಲ್ಲದ ಜನರ ಆಯ್ಕೆಗೆ ವಿರುದ್ಧವಾದ ಸರ್ಕಾರವಾಗಿರುತ್ತದೆ. ನಿಶ್ಚಿತ ಅಧಿಕಾರಾವಧಿ ಮೂಲಕ ಸ್ಥಿರತೆಗೆ ಆದ್ಯತೆ ನೀಡಲಾಗಿದೆ ಮತ್ತು ಮತದಾರರ ಆಯ್ಕೆಯು ಅಪ್ರಸ್ತುತವಾಗುತ್ತದೆ.

ಅಂತಹ ವ್ಯವಸ್ಥೆಯಲ್ಲಿ ರಾಜ್ಯ ಶಾಸನಸಭೆಗಳು ಹಾಗೂ ರಾಜ್ಯ ಸರ್ಕಾರಗಳ ಮೇಲೆ ಕೇಂದ್ರೀಕೃತ ನಿಯಂತ್ರಣ ಹೇರಲಾಗುತ್ತದೆ. ಸರ್ಕಾರವೊಂದು ತನ್ನ ಬಹುಮತ ಕಳೆದುಕೊಂಡಿರುವಾಗ ಅದನ್ನು ವಿಸರ್ಜಿಸುವ ಅಧಿಕಾರವನ್ನು ಮೊಟಕುಗೊಳಿಸಿದ ನಂತರ ಐದು ವರ್ಷಗಳ ನಿಗದಿತ ಅವಧಿ ಇರುವ ಕಾರಣ ಒಂದು ಪರ್ಯಾಯ ಸರ್ಕಾರವನ್ನು ರಚಿಸಲೇ ಬೇಕಾಗುತ್ತದೆ. ಅಂತಹ ಸರ್ಕಾರವು ರಾಜ್ಯಪಾಲರ ಮರ್ಜಿಯ ಮೇಲೆ ಅವಲಂಬಿತವಾಗಿರುತ್ತದೆ, ಯಾವ ನಾಯಕನನ್ನು ಕರೆದು ಸರ್ಕಾರ ಮಾಡಬೇಕು ಎನ್ನುವುದನ್ನು ಅವರು ತೀರ್ಮಾನಿಸುತ್ತಾರೆ. ನಿಶ್ಚಿತ ಕಾಲಾವಧಿಯು ಶಾಸಕರಿಗೆ, ಚುನಾವಣೆಯನ್ನು ಎದುರಿಸುವ ಯಾವುದೇ ಭಯವಿಲ್ಲದೇ ಸಾರಾಸಗಟಾಗಿ ತಮ್ಮ ನಿಷ್ಠೆ ಬದಲಾಯಿಸುವ ಸ್ವೇಚ್ಛೆಯನ್ನು ನೀಡುತ್ತದೆ,

ಜಗದೀಪ್ ಢಣಕರ್, ಭಗತ್ ಸಿಂಗ್ ಕೋಶ್ಯಾರಿ ಮತ್ತು ಅರಿಫ್ ಮೊಹಮ್ಮದ್ ಖಾನ್ ರಂತಹ ರಾಜ್ಯಪಾಲರಿದ್ದರೆ, ಕೇಂದ್ರ ಸರ್ಕಾರದ ಪಕ್ಷಪಾತದ ಸಾಧನಗಳಾಗಿ ಏನೆಲ್ಲಾ ಅನಾಹುತಗಳನ್ನು ಸೃಷ್ಟಿಸಬಹುದು ಎಂಬುದನ್ನು ಯಾರೂ ಊಹಿಸಬಹುದು.

ಸಂಸತ್ತು ಮತ್ತು ರಾಜ್ಯ ವಿಧಾನಸಭೆಗಳಿಗೆ ಏಕಕಾಲದಲ್ಲಿ ಚುನಾವಣೆಯನ್ನು ನಡೆಸಲು, ಪ್ರಮುಖ ಸಾಂವಿಧಾನಿಕ ಬದಲಾವಣೆಯನ್ನೇ ತರಬೇಕಾಗುತ್ತದೆ. ಸಂವಿಧಾನದ ವಿಧಿ 83 (ಸದನದ ಕಾಲಾವಧಿ), ವಿಧಿ 85(ಲೋಕಸಭಾ ವಿಸರ್ಜನೆ), ವಿಧಿ 172 (ರಾಜ್ಯ ಶಾಸನಸಭೆಗಳ ಕಾಲಾವಧಿ), ವಿಧಿ 174(ರಾಜ್ಯ ವಿಧಾನಸಭೆಗಳ ವಿಸರ್ಜನೆ), ವಿಧಿ 356(ಸಾಂವಿಧಾನಿಕ ಆಡಳಿತದ ವೈಫಲ್ಯ) ಇವುಗಳಲ್ಲದೇ ಜನ ಪ್ರಾತಿನಿಧ್ಯ ಕಾಯಿದೆಗಳಿಗೆ ಹಾಗೂ ಇತರ ನಿಯಮಗಳಿಗೆ ತಿದ್ದುಪಡಿಗಳನ್ನು ತರಬೇಕಾಗುತ್ತದೆ.



ಪ್ರಜಾಪ್ರಭುತ್ವ ಅತಿಯಾಗಿದೆ-ಚಳಿಗಾಲದ ಅಧಿವೇಶನ ಇಲ್ಲ
ವ್ಯಂಗ್ಯಚಿತ್ರ ಕೃಪೆ: ಸತೀಶ ಆಚಾರ್ಯ

ಬಿಜೆಪಿಯು ಸತತವಾಗಿ 2014 ರಿಂದಲೂ ತನ್ನ ಪ್ರಣಾಳಿಕೆಯಲ್ಲಿ “ಒಂದು ದೇಶ, ಒಂದು ಚುನಾವಣೆ” ಚಿಂತನೆಗಳನ್ನು ಪ್ರತಿಪಾದಿಸುತ್ತಲೇ ಬಂದಿದೆ. ಭಾರತದ ರಾಷ್ಟ್ರಾಧ್ಯಕ್ಷರು ಹಾಗೂ ಉಪರಾಷ್ಟ್ರಾಧ್ಯಕ್ಷರು ತಮ್ಮ ಅಧಿಕೃತ ಅಧಿಕಾರದ ವ್ಯಾಪ್ತಿಯಡಿಯಲ್ಲೇ ಈ ಚಿಂತನೆಗಳಿಗೆ ತಮ್ಮ ಸಹಮತ ವ್ಯಕ್ತಪಡಿಸಿದ್ದಾರೆ. ಬಿಜೆಪಿಯ ಪ್ರಸ್ತುತ ಒತ್ತಡ ಹಾಗೂ ಪ್ರಚಾರವು ಈ ನಿಟ್ಟಿನಲ್ಲಿ ಗಂಭೀರ ಪ್ರಯತ್ನ ಮಾಡುತ್ತಿದೆ. ಸಾಂವಿಧಾನಿಕ ತಿದ್ದುಪಡಿಗಳು ಹಾಗೂ ಬದಲಾವಣೆಗಳು ಆಳುವ ಪಕ್ಷದ ಸರ್ವಾಧಿಕಾರಿ ಯತ್ನಕ್ಕೆ ದೊಡ್ಡ ಅಡಚಣೆಯಾಗಲಿದೆ ಎಂಬ ಯೋಚನೆಯು ತಪ್ಪಾಗಿದೆ. ಸಂವಿಧಾನದ ವಿಧಿ 370ನ್ನು ತೊಡೆದುಹಾಕುವಲ್ಲಿ ಹಾಗೂ ಜಮ್ಮು ಮತ್ತು ಕಾಶ್ಮೀರದ ರಾಜ್ಯವನ್ನು ಕಳಚಿಹಾಕುವಲ್ಲಿ ಅವರು ತೋರಿದ ರಾಜಕೀಯ ಧೂರ್ತತನವನ್ನು ನಾವೀಗಾಗಲೇ ಕಂಡಿದ್ದೇವೆ.

ಮುಂದೆಂದಾದರೂ ಮೋದಿ ಸರ್ಕಾರವು ಸಂಸತ್ತಿನಲ್ಲಿ ಅಂತಹ ಒಂದು ಪ್ರಯತ್ನ ಮಾಡಿದಾಗ ವಿರೋಧ ಪಕ್ಷಗಳು ತಿಳಿದೇ ಇರಲಿಲ್ಲ ಎಂದು ಹೇಳುವ ಹಾಗಿಲ್ಲ. ಈ ವಿಷಯದಲ್ಲಿ ಕಾಂಗ್ರೆಸ್ ಪಕ್ಷವು ವಿಶೇಷವಾಗಿ ಎಚ್ಚರ ವಹಿಸಬೇಕು, ಏಕೆಂದರೆ ವಿಧಿ 370 ರ ರದ್ಧತಿ ವಿಚಾರದಲ್ಲಿ ಅದರ ಡೋಲಾಯಮಾನ ಮನಸ್ಥಿತಿಯನ್ನು ಬಿಜೆಪಿಯು ಪೂರ್ಣವಾಗಿ ದುರುಪಯೋಗ ಪಡಿಸಿಕೊಂಡಿದೆ.

ಪ್ರಾದೇಶಿಕ ಪಕ್ಷಗಳು, ಅದರಲ್ಲೂ ರಾಜ್ಯಗಳಲ್ಲಿ ಅಧಿಕಾರದಲ್ಲಿರುವ ಪಕ್ಷಗಳು, “ಒಂದು ದೇಶ, ಒಂದು ಚುನಾವಣೆ”ಯ ಈ ಸರ್ವಾಧಿಕಾರಶಾಹಿ ಯೋಜನೆಯಿಂದ ಬಹಳಷ್ಟನ್ನು ಕಳೆದುಕೊಳ್ಳಲಿವೆ. ರಾಜ್ಯ ಸರ್ಕಾರಗಳಿಗೆ ಈಗಿರುವ ಸೀಮಿತ ಸ್ವಾಯತ್ತತೆಯೂ ಹೋಗಲಿದೆ. ವಿಧಾನಸಭೆಯನ್ನು ವಿಸರ್ಜಿಸುವ ಪ್ರಜಾಸತ್ತಾತ್ಮಕ ನಿಯಮಗಳನ್ನು ಉಪಯೋಗಿಸಿಕೊಳ್ಳುವ, ಅಥವಾ, ವಿಧಾನಸಭೆ ಚುನಾವಣೆಗಳಿಗೆ ರಾಜಕೀಯ ಕಾರ್ಯಸೂಚಿಯನ್ನು ರೂಪಿಸುವ ಹಕ್ಕನ್ನು ಲೋಕಸಭಾ ಚುನಾವಣೆಗೆ ರಾಜ್ಯ ವಿಧಾನಸಭಾ ಚುನಾವಣೆಗಳನ್ನು ತಳಕುಹಾಕುವ ಯತ್ನಗಳ ಮೂಲಕ ಕಳೆದುಕೊಳ್ಳುತ್ತವೆ.

ಒರಿಸ್ಸಾದ ಬಿಜು ಜನತಾ ದಳ, ತೆಲಂಗಾಣದ ಟಿಆರ್‌ಎಸ್ ಮತ್ತು ಆಂಧ್ರ ಪ್ರದೇಶದ ವೈಎಸ್‌ಆರ್‌ಸಿಪಿ ನಂತಹ ಪಕ್ಷಗಳ ಸೋಮಾರಿತನ ಹಾಗೂ ಸಮಯಸಾಧಕತನಗಳಿಂದಾಗಿ ಮೋದಿ ಸರ್ಕಾರಕ್ಕೆ ರಾಜ್ಯಗಳ ಹಕ್ಕುಗಳ ಮೇಲೆ ದಾಳಿಗಳನ್ನು ನಡೆಸಿ ಅವನ್ನು ದಕ್ಕಿಸಿಕೊಳ್ಳುವುದು ಸಾಧ್ಯವಾಗಿದೆ. ಅವುಗಳು ಎಚ್ಚರಗೊಳ್ಳಬೇಕು ಮತ್ತು ಈ ಕರಾಳ ಪ್ರಜಾಪ್ರಭುತ್ವ-ವಿರೋಧಿ, ಒಕ್ಕೂಟ-ವಿರೋಧಿ ಯತ್ನಗಳನ್ನು ವಿರೋಧಿಸಬೇಕು. ಉಳಿದೆಲ್ಲಾ ವಿರೋಧ ಪಕ್ಷಗಳೊಂದಿಗೆ ಅವರೂ ಕೈಜೋಡಿಸಿದರೆ ಬಿಜೆಪಿಯ ಶಾಸನಾತ್ಮಕ ಪದವಂಚನೆಗಳನ್ನು ಸೋಲಿಸಬಹುದು.

ಅನು: ಟಿ. ಸುರೇಂದ್ರ ರಾವ್







೮ನೇ ಸುತ್ತಿನಲ್ಲೂ ಹಟಮಾರಿ ನಿಲುವು-ಜ.15ರಂದು ಮತ್ತೊಂದು ಸುತ್ತು

ಜನವರಿ 26ರ ರೈತರ ಗಣತಂತ್ರ ಪರೇಡ್‌ಗೆ ಜನವರಿ 7ರಂದು ಭವ್ಯ ರಿಹರ್ಸಲ್







ಕೇಂದ್ರ ಸರಕಾರ ರೈತರ ನಡುವಿನ 8ನೇ ಸುತ್ತಿನ ಮಾತುಕತೆಗಳು ಕೂಡ ಏನೂ ಫಲ ನೀಡಿಲ್ಲ. ಸರಕಾರದ ಪರವಾಗಿ ಭಾಗವಹಿಸಿದ್ದ ಮಂತ್ರಿಗಳು ಮತ್ತೆ ಈ ಮೂರು ಕಾಯ್ದೆಗಳಿಗೆ ತಿದ್ದುಪಡಿಯನ್ನು ಪರಿಶೀಲಿಸುವ ಪ್ರಸ್ತಾವದೊಂದಿಗೆ ಮಾತು ಆರಂಭಿಸಿದರು. ಆದರೆ ರೈತರ ಪ್ರತಿನಿಧಿಗಳು, ಈ ಬಗ್ಗೆ ಈಗಾಗಲೇ ಸಾಕಷ್ಟು ಮಾತಾಡಿ ಆಗಿದೆ, ರೈತರ ನಿಲುವನ್ನು ಸ್ಪಷ್ಟಪಡಿಸಲಾಗಿದೆ, ಮತ್ತೆ ಅದನ್ನು ಎತ್ತಬೇಡಿ ಎಂದು ಖಡಾಖಂಡಿತವಾಗಿ ಹೇಳುತ್ತ ಬೇರೇನಾದರೂ ಹೇಳುವುದಿದ್ದರೆ ಹೇಳಿ ಎಂದರು. ತಾವು ಹಲವು ಸಂಘಟನೆಗಳೊಂದಿಗೆ, ಪರಿಣಿತರೊಂದಿಗೆ ಮಾತಾಡಿದ್ದೇವೆ, ಎಲ್ಲರೂ ಇವು ಒಳ್ಳೆಯ ಕಾನೂನುಗಳು ಎಂದಿದ್ದಾರೆ ಎಂದರು. ಹಾಗಿದ್ದರೆ ನೀವು ಅವರೊಡನೆಯೇ ಮಾತಾಡಿ, ನಾವಂತೂ ಇವು ಭಾರತದ ರೈತರಿಗೆ ಮರಣ ಶಾಸನಗಳು ಎಂದು ಮತ್ತೆ ಹೇಳುತ್ತೇವೆ ಎಂದು ರೈತ ಪ್ರತಿನಿಧಿಗಳು ಪ್ರತ್ಯುತ್ತರ ನೀಡಿದರು ಎಂದು ಈ ಮಾತುಕತೆಗಳ ಬಗ್ಗೆ ಹೇಳುತ್ತ ಅಖಿಲ ಭಾರತ ಕಿಸಾನ್ ಸಭಾದ ಪ್ರಧಾನ ಕಾರ್ಯದರ್ಶಿ ಹನ್ನನ್ ಮೊಲ್ಲ ತಿಳಿಸಿದ್ದಾರೆ.

ಜನವರಿ 11 ರಂದು ಸುಪ್ರಿಂ ಕೋರ್ಟ್ ಈ ಬಗ್ಗೆ ವಿಚಾರಣೆ ಆರಂಭಿಸಲಿದೆ, ಆದ್ದರಿಂದ ಮತ್ತೆ ಜನವರಿ 15ರಂದು ಸೇರೋಣ ಎಂದು ಮಂತ್ರಿಗಳು ಹೇಳಿದಾಗ, ನಾವು ಏಳು ತಿಂಗಳಿಂದ ಹೋರಾಟ ಮಾಡುತ್ತಿದ್ದೇವೆ, ಕೋರ್ಟಿಗೆ ಹೋಗುವ ಇರಾದೆ ನಮಗೇನೂ ಇರಲಿಲ್ಲ, ಏಕೆಂದರೆ ಇದು ಸರಕಾರ ಮತ್ತು ರೈತರ ನಡುವಿನ ಪ್ರಶ್ನೆ, ಇದನ್ನು ಪರಿಹರಿಸುವುದು ಸರಕಾರದ ಜವಾಬ್ದಾರಿ, ಆದರೂ ಮಾತುಕತೆಗಳಿಗೆ ನಾವು ಸಿದ್ಧ, ಏಕೆಂದರೆ ಅದರಿಂದಲೇ ಪರಿಹಾರ ಸಾಧ್ಯ, ಆದರೆ ಸಮಸ್ಯೆಯನ್ನು ಪರಿಹರಿಸಬೇಕೆಂಬ ಮನಸ್ಸು ಸರಕಾರಕ್ಕೆ ಇರಬೇಕು ಅಷ್ಟೇ ಎಂದು ರೈತರ ಪ್ರತಿನಿಧಿಗಳು ಹೇಳಿದರು.

ಈ ನಡುವೆ ಮಂತ್ರಿಗಳನ್ನು ಒಂದು ಪ್ರಶ್ನೆ ಕೇಳಲಾಯಿತು. ಈ ಹಿಂದೆ ಕೇಂದ್ರ ಸರಕಾರ ರಾಜ್ಯ ಸರಕಾರಗಳಿಗೆ ಎರಡು ಮಾದರಿ ಮಸೂದೆಗಳನ್ನು ಕಳಿಸಿತ್ತು. ಆದರೆ ಅದಕ್ಕೆ ರಾಜ್ಯಗಳಿಂದ ಸ್ಪಂದನೆ ಬರುವ ಮೊದಲೇ ಇದ್ದಕ್ಕಿದ್ದಂತೆ ಕೊರೊನ ಪಿಡುಗಿನ ನಡುವೆಯೇ ನಡುರಾತ್ರಿಯಲ್ಲಿ ಸುಗ್ರೀವಾಜ್ಞೆ ಹೊರಡಿಸುವ ತುರ್ತಾದರೂ ಏನಿತ್ತು? ಯಾರಿಂದ ಒತ್ತಡ ಇತ್ತು?ಇದಕ್ಕೆ ಅವರಿಂದ ಉತ್ತರವಿರಲಿಲ್ಲ, ಅಥವ ಉತ್ತರ ಕೊಡಲು ಅವರಿಗೆ ನಾಚಿಕೆಯಾಗುತ್ತದೆ ಎಂದು ನಮಗೆ ಗೊತ್ತಿತ್ತು ಎಂದ ಹನ್ನನ್ ಮೊಲ್ಲ 44 ದಿನಗಳಿಂದ ಸೊನ್ನೆ ಡಿಗ್ರಿ ಚಳಿಯಲ್ಲಿ, ಮಳೆಯಲ್ಲಿ ಕುಳಿತಿರುವ ರೈತರ ಬಗ್ಗೆ ಈ ಸರಕಾರಕ್ಕೆ ಮಾನವೀಯ ಭಾವನೆಯೂ ಇದ್ದಂತಿಲ್ಲ, ಆದ್ದರಿಂದ **ರೈತರು ತಮ್ಮ ಹೋರಾಟವನ್ನು ಮುಂದುವರೆಸುತ್ತಾರೆ, ಜನವರಿ 26ರಂದು ದಿಲ್ಲಿಯಲ್ಲೂ, ದೇಶದ ಎಲ್ಲೆಡೆಗಳಲ್ಲೂ ರೈತರ ಗಣತಂತ್ರ ಪರೇಡ್ ನಡೆಸಿ ಇದನ್ನು ಜನರ ಬಳಿಗೆ ಒಯ್ಯುತ್ತಾರೆ** ಎಂದು ಹೇಳಿದರು. ಈಗಾಗಲೇ ವರದಿಯಾಗಿರುವಂತೆ ಸಂಯುಕ್ತ ಕಿಸಾನ್ ಮೋರ್ಚಾ ಜನವರಿ 2ರಂದು ಪ್ರಕಟಿಸಿರುವ ಹೋರಾಟದ ಕಾರ್ಯಕ್ರಮವನ್ನು ಜಾರಿಗೊಳಿಸಲಾಗುತ್ತದೆ ಎಂದು ಅವರು ಹೇಳಿದರು.

ಇದರ ಭಾಗವಾಗಿ ಜನವರಿ 7ರಂದು ಕುಂಡ್ಲಿ–ಮನೇಸರ್–ಪಲ್ವಲ್(ಕೆಎಂಪಿ) ರಸ್ತೆಯಲ್ಲಿ ಒಂದು ಭವ್ಯ ಟ್ರಾಕ್ಟರ್ ರ್‍ಯಾಲಿ ನಡೆಯಿತು. ಇದರಲ್ಲಿ ನೂರಾರು ಟ್ರಾಕ್ಟರುಗಳಲ್ಲಿ ಸಾವಿರಾರು ರೈತರು ಭಾಗವಹಿಸಿದರು. ಮಹಿಳೆಯರೂ ಟ್ರಾಕ್ಟರ್ ಚಾಲನೆ ಮಾಡುತ್ತ ಭಾಗವಹಿಸಿದ್ದು ಗಮನಾರ್ಹವಾಗಿತ್ತು. ಮುಂದಿನ ಹೋರಾಟದ ಕಾರ್ಯಕ್ರಮಗಳು ಹೀಗಿವೆ:

- **ಜನವರಿ 7 ರಿಂದ 20: ದೇಶಾದ್ಯಂತ 'ಜಾಗೃತಿ ಅಭಿಯಾನ' ಪಕ್ವಾಚರಣೆ–ಜಿಲ್ಲಾವಾರು ರ್‍ಯಾಲಿಗಳು, ಪತ್ರಿಕಾಗೋಷ್ಠಿಗಳು ಇತ್ಯಾದಿಗಳ ಮೂಲಕ ರೈತರ ನ್ಯಾಯೋಚಿತ ಬೇಡಿಕೆಗಳನ್ನು ಜನಜನಿತಗೊಳಿಸುವುದು**
- **ಜನವರಿ 18: ಮಹಿಳಾ ರೈತರ ದಿನಾಚರಣೆ**
- **ಜನವರಿ 23 –ನೇತಾಜಿ ಜನ್ಮದಿನದಂದು ಆಝಾದ್ ಹಿಂದ್ ರೈತ ದಿನಾಚರಣೆ**
- **ಜನವರಿ 26: ದಿಲ್ಲಿಯಲ್ಲಿ ಗಣತಂತ್ರ ಪರೇಡ್ ನಂತರ 'ರೈತ ಗಣತಂತ್ರ ಪರೇಡ್'. ದೇಶದ ಎಲ್ಲ ರಾಜ್ಯಗಳಲ್ಲೂ ಇಂತಹುದೇ ರೈತ ಪರೇಡ್‌ಗಳು**

ಇದಲ್ಲದೆ ಆಳುವ ಪಕ್ಷ ಬಿಜೆಪಿಯ ಎನ್.ಡಿ.ಎ..ಮಿತ್ರರು ಅದನ್ನು ತ್ಯಜಿಸುವಂತೆ ಒತ್ತಾಯಿಸುವ ಮತಪ್ರದರ್ಶನಗಳು ಮುಂದುವರೆಯುತ್ತವೆ, ಈಗಾಗಲೇ ನಿರ್ಧರಿಸಿರುವ ಅದಾನಿ/ಅಂಬಾನಿ ಉತ್ಪನ್ನಗಳು ಮತ್ತು ಸೇವೆಗಳ ಬಹಿಷ್ಕಾರ ಮತ್ತು ಟೋಲ್‌ಮುಕ್ತ ಸಂಚಾರದ ಕಾರ್ಯಕ್ರಮಗಳೂ ಮುಂದುವರೆಯುತ್ತವೆ ಎಂದು ಸಂಯುಕ್ತ ಕಿಸಾನ್ ಮೋರ್ಚಾದ ಮುಖಂಡರು ಹೇಳಿದ್ದಾರೆ.

ಇದಕ್ಕೆ ಮೊದಲು ಜನವರಿ 1ರಂದು ದಿಲ್ಲಿಯ ಗಡಿಗಳಲ್ಲಿ ಇರುವ ರೈತರೊಡನೆ, ಮತ್ತು ದೇಶಾದ್ಯಂತ "ರೈತರನ್ನು ಉಳಿಸಿ–ದೇಶ ಉಳಿಸಿ" ಪ್ರತಿಜ್ಞಾ ದಿನಾಚರಣೆ ವ್ಯಾಪಕವಾಗಿ ನಡೆದಿವೆ, ಕಾರ್ಮಿಕ ಸಂಘಟನೆಗಳು ಮತ್ತು ಇತರ ಜನವಿಭಾಗಗಳವರೂ ಇದರಲ್ಲಿ ಭಾಗವಹಿಸಿದರು ಎಂಬ ವರದಿಗಳು ಬಂದಿವೆ.



ಕೋವಿಡ್–19 ಲಸಿಕೆಯ ಸುತ್ತ ಪ್ರಶ್ನೆಗಳ ಹುತ್ತ

ಏಕೆ? ಏನು? ಎಷ್ಟು? ಯಾವಾಗ? ಹೇಗೆ?



ಕೋವಿಡ್–19 ಕುರಿತು ಮೊದಲಿನಿಂದಲೂ ವಾಸ್ತವಕ್ಕೆ ದೂರವಾದ ಅತಿರಂಜಿತ ನಿಲುವುಗಳನ್ನು ತಾಳಿರುವ ಸರಕಾರ ಮತ್ತು ಮಾಧ್ಯಮಗಳು ಲಸಿಕೆ ಕುರಿತು ಸಹ ಎಲ್ಲ ಸಮಸ್ಯೆಗಳು ಪರಿಹಾರವಾದವು ಎಂಬಂತೆ ವರ್ತಿಸುತ್ತಿವೆ. ಆದರೆ ಲಸಿಕೆಯ ಸುತ್ತ ಪ್ರಶ್ನೆಗಳ ಹುತ್ತವೇ ಇದೆ. ಈ ಕುರಿತು ವಾಸ್ತವವನ್ನು ವಿಶ್ಲೇಷಿಸುವ ಲೇಖನ ಸರಣಿ ಇದು. ಈ ಪ್ರಶ್ನೆಗಳಿಗೆ ವಾಸ್ತವ ನೆಲೆಯಲ್ಲಿ ಉತ್ತರ ಕೊಡುವ ಪ್ರಯತ್ನವಿದು. ಹಿಂದಿನ ಹಲವಾರು ರಾಷ್ಟ್ರೀಯ ಲಸಿಕಾ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಅನುಭವವಿರುವ, ಆ ದೃಷ್ಟಿಯಿಂದ ಕೋವಿಡ್–19 ಲಸಿಕಾ ಕಾರ್ಯಕ್ರಮದ ಬೆಳವಣಿಗೆಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿರುವ – ಡಾ| ಕೆ. ಸುಶೀಲಾ ಅವರು ಇದನ್ನು ಬರೆದಿದ್ದಾರೆ.

ಭಾಗ–1 ರಲ್ಲಿ ದೇಹ ರಕ್ಷಣಾ ವ್ಯವಸ್ಥೆಯ ಕುರಿತು ತಿಳಿಸಿ, ಅದರ ಆಧಾರದ ಮೇಲೆ ಲಸಿಕೆಯ ವಿಜ್ಞಾನವನ್ನು ಈಗಾಗಲೇ ವಿವರಿಸಿದ್ದಾರೆ. ಭಾಗ 2 ರಲ್ಲಿ ಲಸಿಕೆಯ ಅಭಿವೃದ್ಧಿಯ ಪ್ರಸಕ್ತ ಸ್ಥಿತಿ, ಲಸಿಕೆಯ ಒಟ್ಟು ಅಗತ್ಯ ಎಷ್ಟು? ಸದ್ಯಕ್ಕೆ ಲಭ್ಯವಾಗಬಹುದಾದ ಲಸಿಕೆ ಎಷ್ಟು ಎಂಬುದರ ಬಗ್ಗೆ ವಿವರಿಸಿದ್ದಾರೆ. ಭಾಗ –3 ರಲ್ಲಿ ಲಸಿಕೆಯ ವೆಚ್ಚ, ಸಾಗಾಣಿಕೆ ಹಾಗೂ ಲಸಿಕೆ ಯಾರಿಗೆ, ಯಾವಾಗ, ಹೇಗೆ? ಎಂಬ ಪ್ರಶ್ನೆಗಳಿಗೆ ಉತ್ತರಿಸಲಾಗಿದೆ. ಈ ಕೊನೆಯ ಭಾಗದಲ್ಲಿ ಲಸಿಕೆ ಕಾರ್ಯಕ್ರಮಕ್ಕೆ ಎದುರಾಗುವ ಸಮಸ್ಯೆಗಳ ಕುರಿತು ತಿಳಿಸಿದ್ದಾರೆ.

ಈಗಿರುವ ಮಾಹಿತಿಯಂತೆ ಎರಡನೇ ಲಸಿಕೆ ಪಡೆದ 14 ದಿನಗಳ ನಂತರ, ಫಲಾನುಭವಿಗಳಲ್ಲಿ ರೋಗನರೋಧಕ ಶಕ್ತಿ ಕಾಣಿಸಿಕೊಳ್ಳುತ್ತದೆ. ಈ ಕಾಯಿಲೆ ರೋಗಲಕ್ಷಣ ಸಹಿತ ಮತ್ತು ರೋಗ ಲಕ್ಷಣ ರಹಿತ ಜನರಿಂದ ಅತ್ಯಂತ ಕ್ಷಿಪ್ರವಾಗಿ, ಸುಲಭದಲ್ಲಿ ಇತರರಿಗೆ ಹರಡುತ್ತದೆ. ಹಾಗಾಗಿ ಈ ಲಸಿಕೆಯನ್ನು ಇತರ ಲಸಿಕೆಗಳನ್ನು ನೀಡುವಂತೆ, ಅಂಗನವಾಡಿ, ಶಾಲೆ ಹಾಗೂ ನಿರ್ದಿಷ್ಟ 'ಬೂತ್'ಗಳಲ್ಲಿ ಫಲಾನುಭವಿಗಳನ್ನು ಗುಂಪು ಸೇರಿಸಿ ನೀಡುವುದು ಅಪಾಯ. ಈಗಾಗಲೇ ಸಮಯಾಭಾವ ಮತ್ತು ಕಾರ್ಯಕರ್ತರ ಕೊರತೆ ಇರುವಾಗ, ಮನೆ ಮನೆಗೆ ತೆರಳಿ ನೀಡುವುದು ಸಾಧ್ಯವೇ? ಹಾಗೂ ಒಂದೇ ಮನೆಯಲ್ಲಿ ಬೇರೆ ಬೇರೆ ಆದ್ಯತೆ ಇರುವ ಸದಸ್ಯರಿರುವಾಗ ಇವರೆಲ್ಲರಿಗೆ ಒಂದೇ ಬಾರಿ ನೀಡುವುದು ಅಸಾಧ್ಯ. ಹೀಗಾಗಿ ಒಂದೇ ಮನೆಗೆ ಹಲವು ಬಾರಿಯ ಭೇಟಿಯ ಅವಶ್ಯಕತೆ ಇದೆ.

ಅದಾಗಲೇ ಕೊವಿಡ್ ಬಂದವರಿಗೆ ಲಸಿಕೆ ನೀಡಬೇಕೆ? ಬೇಡವಾದರೆ ಎಷ್ಟು ಕಾಲ? ಇಷ್ಟೊಂದು ಸಂಖ್ಯೆಯ ಲಸಿಕೆ ನೀಡಲು ಬೇಕಾದ ಸಿರಿಂಜ್ ಹಾಗೂ ಸೂಜಿಗಳನ್ನು ಪೂರೈಸಲು ಸಾಧ್ಯವೆ?

ಬಿಲಿಯಗಟ್ಟಲೆ ಜನರಿಗೆ ಲಸಿಕೆ ನೀಡುವಾಗ ಹಲವಾರು ಹೊಸ ತೊಂದರೆ ಫಲಾನುಭಾವಿಗಳಲ್ಲಿ ಕಾಣಿಸಿಕೊಳ್ಳಬಹುದು. ಅತ್ಯಂತ ಕನಿಷ್ಟ ಪ್ರಮಾಣದಲ್ಲಿ ಗಂಭೀರ ತೊಂದರೆಯೂ ಕಾಣಿಸಿಕೊಳ್ಳಬಹುದು. ಈಗ ಅದನ್ನು ತತ್‌ಕ್ಷಣ ಗುರುತಿಸಿ ಸೂಕ್ತ ಚಿಕಿತ್ಸೆ ನೀಡದಿದ್ದರೆ ಮಿಂಚಿನ ವೇಗದಲ್ಲಿ ಸತ್ಯ, ಮತ್ತು ಸುಳ್ಳುಗಳನ್ನು ಪ್ರಪಂಚದಲ್ಲೆಡೆ ಹರಡಲು ಸಾಧ್ಯವಿರುವ ಈ ಕಾಲದಲ್ಲಿ ಲಸಿಕಾ ಕಾರ್ಯಕ್ರಮಕ್ಕೆ ಹಿನ್ನಡೆಯಾಗುವ ಸಂಭವ ಹೆಚ್ಚು.

ಆರ್ಥಿಕ, ರಾಜಕೀಯ, ಧಾರ್ಮಿಕ ಹಾಗೂ ವಿಜ್ಞಾನ ವಿರೋಧಿ ಹಲವು ಸಂಘಟನೆಗಳು ಈಗಾಗಲೇ ಕೊವಿಡ್–19 ಕಾಯಿಲೆಯೇ ಸುಳ್ಳು. ಇದಕ್ಕೆ ಲಸಿಕೆ ಬೇಕಾಗಿಲ್ಲ ಎನ್ನುವ ಪ್ರಚಾರ ಭರದಿಂದ ಸಾಗಿಸುತ್ತಿದ್ದಾರೆ. ಹೀಗಾಗಿ ಲಸಿಕೆಗೆ ಅರ್ಹ ಫಲಾನುಭವಿಗಳೂ ದೊಡ್ಡ ಪ್ರಮಾಣದಲ್ಲಿ ಈ ಲಸಿಕೆಯ ಪ್ರಯೋಜನ ಪಡೆಯಲು ಹಿಂಜರಿಯುವುದು ಸಾಧ್ಯ.

ಲಸಿಕಾ ಕಾರ್ಯಕ್ರಮಕ್ಕೆ ಸಿಬ್ಬಂದಿ

ಈ ಕಾರ್ಯಕ್ರಮಕ್ಕೆ ಅಗತ್ಯವಿರುವ ಬೃಹತ್ ಪ್ರಮಾಣದ ಲಸಿಕೆಯನ್ನು ಶೀತಲ ಸರಪಳಿಯ ಮೂಲಕ ಕಾಪಾಡುತ್ತ ವಿವಿಧೆಡೆಗೆ ಸಾಗಿಸಲು, ಸಂಗ್ರಹಿಸಲು ಮುಂದೆ ಫಲಾನುಭವಿಗಳಿಗೆ ಇಂಜಕ್ಸನ್ ಮೂಲಕ ನೀಡಲು, ಲಸಿಕೆಯಿಂದ ಬರಬಹುದಾದ ಚಿಕ್ಕಪುಟ್ಟ ತೊಂದರೆಗಳನ್ನು ಗುರುತಿಸಿ ಸೂಕ್ತ ಚಿಕಿತ್ಸೆ ನೀಡಲು, ಅಪ್ಪಿತಪ್ಪಿ ಗಂಭೀರ ತೊಂದರೆ ಬಂದಲ್ಲಿ ತೆಗೆದುಕೊಳ್ಳಬೇಕಾದ ಸೂಕ್ತ ಕ್ರಮಗಳ ಅರಿವಿನ ಬಗ್ಗೆ ಸೂಕ್ತ ತರಬೇತಿ ಪಡೆದ ಅಪಾರ ಸಂಖ್ಯೆಯ ಕಾರ್ಯಕರ್ತರ ಪಡೆ ಈ ಲಸಿಕಾ ಕಾರ್ಯಕ್ರಮ ಸಫಲವಾಗಿ ನೆರವೇರಲು ಅವಶ್ಯಕ. ಈಗಾಗಲೇ ಕೊವಿಡ್–19ರ ಹೋರಾಟದಿಂದ ಬಳಲಿರುವ ಸರ್ಕಾರಿ ಹಾಗೂ ಖಾಸಗಿ ವೈದ್ಯಕೀಯ ಸೇವೆಯ ಕಾರ್ಯಕರ್ತರು ಈ ಹೊರೆಯನ್ನು ಎಷ್ಟು ಸಮರ್ಥವಾಗಿ ನೆರವೇರಿಸಲು ಸಾಧ್ಯವೆಂದು ಕಾಲವೇ ತಿಳಿಸಬೇಕು. ಇವರೆಲ್ಲರಿಗೆ ತರಬೇತಿಗೆ ಕಾಲಾವಕಾಶ ಬೇಕು.

ಲಸಿಕೆಯ ವಿತರಣೆಯಲ್ಲಿ ಭ್ರಷ್ಟಾಚಾರ ನಡೆಯದೇ?

ಲಸಿಕೆ ಎಲ್ಲರಿಗೂ ಲಭ್ಯವಾಗಲೂ 2–3 ವರ್ಷವಾದರೂ ಬೇಕು. ಅಲ್ಲಿಯ ತನಕ ಕೊವಿಡ್ ಭಯದಿಂದ ಕಾಯಲು ಸಾಧ್ಯವಾಗದ ಉಳ್ಳವರನೇತರು ಈ ಲಸಿಕೆಯ ಲಭ್ಯತೆಗಾಗಿ ಅಡ್ಡದಾರಿ ಹಿಡಿಯಬಹುದು. ಎಲ್ಲವೂ ವ್ಯಾಪಾರೀಕರಣವಾಗಿರುವ, ಭ್ರಷ್ಟಾಚಾರ, ಕಾಳಸಂತೆ ಕಾಳಧನಗಳ ವ್ಯವಹಾರಗಳನ್ನು ಗೌರವಪೂರ್ಣವಾಗಿ ಸ್ವೀಕರಿಸುವ ನಮ್ಮ ಸಮಾಜದಲ್ಲಿ ಈ ಭ್ರಷ್ಟಾಚಾರ ತಡೆಗಟ್ಟುವುದು ಕಷ್ಟ.

ಎಲ್ಲಾ ಆರೋಗ್ಯ ಕಾರ್ಯಕರ್ತರು ಈ ಲಸಿಕಾ ಕಾರ್ಯಕ್ರಮದಲ್ಲಿ ತೊಡಗಿಕೊಂಡಿದ್ದರೆ ಉಳಿದ ರಾಷ್ಟ್ರೀಯ ಯೋಜನೆಗಳ ಅನುಷ್ಟಾನದ ಪಾಡೇನು? ಇತರ ವೈದ್ಯಕೀಯ ಸೇವೆಯ ಗತಿ ಏನು? ಹೀಗಾಗಿ ಇತರ ಕಾಯಿಲೆಗಳಿಂದಾಗುವ ಸಾವು ನೋವಿನ ಪ್ರಮಾಣ ಅಧಿಕವಾಗುವುದು ಸಹಜ.

ಈ ಲಸಿಕಾ ಕಾರ್ಯಕ್ರಮ ಅತ್ಯಂತ ದುಬಾರಿ ಕಾರ್ಯಕ್ರಮ. ಈಗಾಗಲೇ ಆರ್ಥಿಕವಾಗಿ ಬಹಳಷ್ಟು ಬಳಲಿರುವ ಸರ್ಕಾರ ಇದಕ್ಕಾಗಿ ಸಾವಿರ, ಸಾವಿರ ಕೋಟಿ ರೂ. ಹಣ ವ್ಯಯಿಸಬಲ್ಲುದೆ?

ಈಗಾಗಲೇ ಕೊವಿಡ್–19 ರ ಹೋರಾಟದಲ್ಲಿ

ಪುಟ 10 ನೋಡಿ

ಕೊವಿಡ್–19 ವ್ಯಾಕ್ಸೀನ್ ನೀತಿ: 'ಹುಸಿ–ದೇಶಪ್ರೇಮ' ಮತ್ತು 'ಹಸು–ವಿಜ್ಞಾನ'ಕ್ಕೆ ಬಲಿ?



ವ್ಯಂಗ್ಯಚಿತ್ರ ಕೃಪೆ: ಸುರೇಂದ್ರನ್, ದಿ ಹಿಂದು

"ಕೋವಿಡ್–19 ಲಸಿಕೆಯ ಸುತ್ತ ಪ್ರಶ್ನೆಗಳ ಹುತ್ತ" ಎಂಬ ಈ ಲೇಖನ ಸರಣಿ 3 ವಾರಗಳ ಹಿಂದೆ ಬರೆದಿದ್ದು ಈ ನಡುವೆ ಕೇಂದ್ರ ಸರಕಾರದ ಕೊವಿದ್–19 ವ್ಯಾಕ್ಸೀನ್ ನೀತಿ ತುಂಡು ತುಂಡಾಗಿ ರೂಪುಗೊಳ್ಳಲಾರಂಭಿಸಿದೆ. ಈ ಲೇಖನ ಸರಣಿಯಲ್ಲಿ ನಿರೀಕ್ಷಿಸಿದಂತೆ ಎದುರಾಗಬೇಕಾದ ಎಲ್ಲ ಸಮಸ್ಯೆಗಳನ್ನು ಎದುರಿಸಲು ವಾಸ್ತವಿಕ ನೆಲೆಯ ಮೇಲೆ ವೈಜ್ಞಾನಿಕ ಕ್ರಮಗಳನ್ನು ಹೊಂದಿರುವ ಸಮಗ್ರ ಯೋಜನೆ ಕಂಡು ಬರುತ್ತಿಲ್ಲ. ಕೊವಿದ್–19 ಬಿಕ್ಕಟ್ಟನ್ನು ಎದುರಿಸುವಲ್ಲಿ ಮೊದಲಿನಿಂದಲೂ ಇದ್ದಂತೆ ಅದನ್ನು ರಾಜಕೀಯ ಉದ್ದೇಶಗಳಿಗೆ ಹೇಗೆ ಬಳಸಿಕೊಳ್ಳಬಹುದು ಎಂಬುದೇ ಪ್ರಧಾನವಾಗುತ್ತಿದೆ. ಇಂತಹ ಪ್ರಯತ್ನದಲ್ಲಿ ಬಿಕ್ಕಟ್ಟನ್ನು ಇನ್ನಷ್ಟು ತೀವ್ರವಾಗಿಸುವ ಅಪಾಯವಿದ್ದೇ ಇದೆ. ಜೊತೆಗೆ ಮೋದಿ ಸರಕಾರದ ಸ್ಥಾಯಿ ನೀತಿಗಳಾದ 'ಹುಸಿ–ದೇಶಪ್ರೇಮ' ಮತ್ತು 'ಹಸು–ವಿಜ್ಞಾನ'ಗಳಿಗೆ ಅದು ಹಿಂದಿನಂತೆ ಬಲಿಯಾಗುತ್ತಿರುವಂತೆ ಕಂಡು ಬರುತ್ತಿದೆ.

ವಸಂತರಾಜ ಎನ್.ಕೆ.

ಬಿಹಾರ ಚುನಾವಣೆಯಲ್ಲಿ ಎನ್.ಡಿ.ಎ ಅಧಿಕಾರಕ್ಕೆ ಬಂದರೆ ಕೊವಿದ್–19 ವ್ಯಾಕ್ಸೀನನ್ನು ಬಿಹಾರದಲ್ಲಿ ಉಚಿತವಾಗಿ ಕೊಡಲಾಗುತ್ತದೆ ಎಂದು ಬಿಜೆಪಿ ಘೋಷಿಸಿತ್ತು. ಹಾಗಾದರೆ ವ್ಯಾಕ್ಸೀನ್ ಬೆಲೆ ಕುರಿತು ನೀತಿ ಎನ್.ಡಿ.ಎ–ಬಿಜೆಪಿ ಮತ್ತು ವಿರೋಧ ಪಕ್ಷಗಳ ಆಳ್ವಿಕೆಯ ರಾಜ್ಯಗಳಲ್ಲಿ ಭಿನ್ನವಾಗಿರುತ್ತದೆಯೆ ಎಂಬ ಪ್ರಶ್ನೆಗೆ ಸ್ಪಷ್ಟೀಕರಣ ಕೊಡುವ ಬದಲು ಇನ್ನಷ್ಟು ಗೊಂದಲ ಸೃಷ್ಟಿಸಲಾಗಿದೆ. ಬಿಜೆಪಿ ಮತ್ತು ಸರಕಾರದ ವಿವಿಧ ವಕ್ತಾರರು ವ್ಯಾಕ್ಸೀನ್ ಬೆಲೆ ನೀತಿಯ ಕುರಿತು ಭಿನ್ನವಾದ ಹೇಳಿಕೆಗಳನ್ನು ನೀಡುತ್ತಾ ಬಂದಿದ್ದಾರೆ. ಒಬ್ಬರು ವ್ಯಾಕ್ಸೀನ್ ಉಚಿತವಾಗಿರುತ್ತದೆ ಎಂದು ಹೇಳಿದರೆ, ಇನ್ನೊಬ್ಬರು ಈ ನಿರ್ಣಯವನ್ನು ರಾಜ್ಯಗಳಿಗೆ ಬಿಡಲಾಗುವುದು ಎಂದು ಅಪ್ಪಣೆ ಕೊಡಿಸಿದ್ದಾರೆ. ಹಾಗಾದರೆ ರಾಜ್ಯಗಳಿಗೆ ಕೇಂದ್ರ ಉಚಿತವಾಗಿ ವಿತರಣೆ ಮಾಡುವುದೇ ಅಥವಾ ಯಾವ ಬೆಲೆಯಲ್ಲಿ ಕೊಡುವುದು ಎಂಬುದನ್ನು ತಿಳಿಸಿಲ್ಲ. ವ್ಯಾಕ್ಸೀನ್ ಖರೀದಿ, ಸಾಗಾಣಿಕೆ, ಶೇಖರಣೆ, ವಿತರಣೆ, ಫಲಾನುಭವಿಗಳ ಗುರುತಿಸುವಿಕೆ ಇತ್ಯಾದಿ ಜವಾಬ್ದಾರಿಗಳನ್ನು ಮತ್ತು ಅದರ ವೆಚ್ಚವನ್ನು ಕೇಂದ್ರ ಅಥವಾ ರಾಜ್ಯ ಸರಕಾರಗಳಲ್ಲಿ ಯಾವುವು ಹೇಗೆ ನಿಭಾಯಿಸುವುದು ಎಂಬುದು ಇನ್ನೂ ಸ್ಪಷ್ಟವಿಲ್ಲ. ಮೋದಿ ಸರಕಾರದ ಹಿಂದಿನ ಕೊವಿದ್–19 (ಲಾಕ್ ಡೌನ್ ತಂದ ವಲಸೆ, ನಷ್ಟ, ಪರಿಹಾರ ಇತ್ಯಾದಿ) ಸಮಸ್ಯೆಗಳ ನಿರ್ವಹಣೆಗಳ ಅನುಭವದ ಆಧಾರದ ಮೇಲೆ ಹೇಳುವುದಾದರೆ, ವ್ಯಾಕ್ಸಿನ್ ನಲ್ಲೂ ಎಲ್ಲ ನೀತಿ ನಿರ್ಣಯಗಳನ್ನು ಕೇಂದ್ರೀಕರಿಸಿ ಅದರ ಜಾರಿಯ ವೆಚ್ಚ, ಸವಾಲು, ಜವಾಬ್ದಾರಿಗಳನ್ನು ರಾಜ್ಯ ಸರಕಾರಗಳ ಮೇಲೆ ಹೊರಿಸುವ ಸಾಧ್ಯತೆಯೇ ಹೆಚ್ಚು. ಈಗಾಗಲೇ ಪ್ರತಿ ಹೊಸ ಕೇಂದ್ರದ ನೀತಿ/ಕ್ರಮಗಳಿಂದ ಸಂಪನ್ಮೂಲಗಳನ್ನು ಕಳೆದುಕೊಳ್ಳುತ್ತಾ ಹೆಚ್ಚೆಚ್ಚು ಜವಾಬ್ದಾರಿಯನ್ನು ಮಾತ್ರ ಹೊರಿಸಲಾಗಿರುವ ರಾಜ್ಯ ಸರಕಾರಗಳು ಇವನ್ನು ನಿಭಾಯಿಸಬಲ್ಲವೇ ಎಂಬುದು ಜನತೆಯ ಜೀವನ್ಮರಣದ ಪ್ರಶ್ನೆಯಾಗಿದೆ.

ವ್ಯಾಕ್ಸೀನ್ ಯಾರಿಗೆ ಆದ್ಯತೆಯಲ್ಲಿ ಕೊಡಲಾಗುವುದು ಎಂಬುದರ ಕುರಿತು ಮಾತ್ರ (ಅದು ಸಹಜ ಮತ್ತು ಸರ್ವವಿದಿತವಾಗಿದ್ದರೂ) ಸ್ಥೂಲ ನೀತಿಯನ್ನು ನಿರ್ಧರಿಸಲಾಗಿದೆ. ಮೊದಲನೆಯ ಆದ್ಯತೆಯನ್ನು ಸಹಜವಾಗಿಯೇ ಕೊವಿದ್–10 ಚಿಕಿತ್ಸೆಯಲ್ಲಿ ತೊಡಗಿರುವ ವೈದ್ಯರು, ನರ್ಸುಗಳು, ಮುಂತಾದ ಮುಂಚೂಣಿ ಆರೋಗ್ಯ ಸಿಬ್ಬಂದಿಗಳಿಗೆ ಕೊಡಲಾಗಿದೆ. ಎರಡನೆಯ ಆದ್ಯತೆಯನ್ನು ಪೋಲಿಸ್, ವಿದ್ಯುತ್, ಜಲನಿರ್ವಹಣೆ ಇತ್ಯಾದಿ ಅಗತ್ಯ ಸೇವಾ ಸಿಬ್ಬಂದಿ, ಸರಕಾರಿ ಮತ್ತು ಸ್ಥಳೀಯ ಆಡಳಿತದ ನೌಕರರು ಇತ್ಯಾದಿ ಸಾರ್ವಜನಿಕ ಸೇವೆಯಲ್ಲಿ ತೊಡಗಿರುವ ಸಿಬ್ಬಂದಿಗೆ ಕೊಡಲಾಗಿದೆ. ಮೂರನೆಯ ಆದ್ಯತೆಯನ್ನು 50 ವರ್ಷ ಮೇಲ್ಪಟ್ಟ ಹೃದಯ–ಶ್ವಾಸಕೋಶ ಸಂಬಂಧಿ ಮತ್ತಿತರ ತೀವ್ರ ಕಾಯಿಲೆಗಳಿಂದ ಬಳಲುತ್ತಿರುವವರಿಗೆ ಕೊಡಲಾಗಿದೆ. ಈ ಮೂರು ಆದ್ಯತೆಗಳ ವ್ಯಾಪ್ತಿಯಲ್ಲಿ ಸುಮಾರು 3 ಕೋಟಿ ಜನ ಬರುತ್ತಾರೆ ಮತ್ತು ಇಷ್ಟು ವ್ಯಾಕ್ಸೀನ್ ಖರೀದಿಗೆ ಯೋಜಿಸಲಾಗಿದೆ ಎನ್ನಲಾಗಿದೆ. ಮೊದಲನೆಯ ಎರಡನೆಯ ಆದ್ಯತೆಯ ಜನರನ್ನು ಗುರುತಿಸುವುದು ಕಷ್ಟದ ಕೆಲಸವಲ್ಲ. ಆದರೆ ಮೂರನೆಯ ಆದ್ಯತೆಯ (50 ವರ್ಷ ಮೇಲ್ಪಟ್ಟ ತೀವ್ರ ಕಾಯಿಲೆಗಳಿಂದ ಬಳಲುತ್ತಿರುವ) ಜನರ ಗುರುತಿಸುವಿಕೆ ಅಷ್ಟೇನೂ ಸುಲಭವಲ್ಲ. ಇದಕ್ಕೆ ಯಾವ ಕ್ರಮಗಳನ್ನು ಯಾರು ತೆಗೆದುಕೊಳ್ಳುವುದು ಎಂಬುದು ಸ್ಪಷ್ಟವಿಲ್ಲ. ಇನ್ನು ವ್ಯಾಕ್ಸೀನ್ ಈ ಜನರಿಗೆ (ವಿಶೇಷವಾಗಿ ಮೂರನೆಯ ಆದ್ಯತೆಯವರಿಗೆ) ಉಚಿತವಾಗಿರುತ್ತದೆಯೆ ಕಡ್ಡಾಯವಾಗಿರುತ್ತದೆಯೆ ಎಂಬುದೂ ಇನ್ನೂ ಸ್ಪಷ್ಟವಿಲ್ಲ.

ಈ ನಡುವೆ ಫೈಝರ್, ಮೊಡರ್ನಾ, ಆಕ್ಸಫರ್ಡ್–ಆಸ್ಟ್ರಾಜೆನೆಕಾ ವ್ಯಾಕ್ಸೀನುಗಳಲ್ಲಿ ಎಲ್ಲ ಅಥವಾ ಕೆಲವಕ್ಕೆ ಯು.ಎಸ್, ಯು.ಕೆ., ಜರ್ಮನಿ, ಮತ್ತಿತರ ದೇಶಗಳಲ್ಲಿ ತುರ್ತು ಬಳಕೆಗೆ ಆಯಾ ಔಷಧಿ ನಿಯಂತ್ರಣ ಸಂಸ್ಥೆಗಳು ಅನುಮತಿ ನೀಡಿವೆ. ಭಾರತದಲ್ಲೂ ಮೊದಲು ಆಕ್ಸಫರ್ಡ್–ಆಸ್ಟ್ರಾಜೆನೆಕಾದ 'ಕೊವಿದ್–ಶೀಲ್ಡ್' ಮತ್ತು

ಪುಟ 10 ನೋಡಿ

ಕೊವಿದ್-19 ವ್ಯಾಕ್ಸೀನ್ ನೀತಿ:'ಹುಸಿ-ದೇಶಪ್ರೇಮ' ಮತ್ತು 'ಹಸು-ವಿಜ್ಞಾನ'ಕ್ಕೆ ಬಲಿ?

ಪುಟ 9 ರಿಂದ

ಆ ಮೇಲೆ ಭಾರತ್ ಬಯೋಟೆಕ್ ನ 'ಕೊವ್ಯಾಕ್ಸೀನ್' ವ್ಯಾಕ್ಸೀನುಗಳ ತುರ್ತು ಬಳಕೆಗೆ ಸಿ.ಡಿ.ಎಸ್.ಸಿ.ಓ (ಕೇಂದ್ರೀಯ ಔಷಧಿ ಮಾನಕ ನಿಯಂತ್ರಣ ಸಂಸ್ಥೆ) ಅನುಮತಿ ನೀಡಿದೆ. ಆಕ್ಸಫರ್ಡ್-ಆಸ್ಟ್ರಾಜೆನೆಕಾ ಪುಣೆಯಲ್ಲಿರುವ ಸೆರಂ ಇನ್ಸ್ಟಿಟ್ಯೂಟ್ ಜೊತೆ ವಿಶ್ವವ್ಯಾಪಿ ಮಾರುಕಟ್ಟೆಗೆ ವ್ಯಾಕ್ಸೀನ್ ಉತ್ಪಾದನೆಯ ಕರಾರು ಹೊಂದಿದೆ. ಹೈದರಾಬಾದಿನಲ್ಲಿರುವ ಭಾರತ್ ಬಯೋಟೆಕ್, ಐ.ಸಿ.ಎಂ.ಆರ್ (ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ) ಮತ್ತು ಎನ್.ಐ.ವಿ (ನೇಶನಲ್ ಇನ್ಸ್ಟಿಟ್ಯೂಟ್ ಆಫ್ ವೈರಾಲಜಿ) ಗಳೊಂದಿಗೆ ಸಹಕಾರದಲ್ಲಿ ಇರುವ 'ಭಾರತೀಯ' ಪ್ರಯತ್ನ. ಆದರೆ ಭಾರತ ಸರಕಾರ ಮತ್ತು ಅನುಮತಿ ನೀಡುವ ಸಂಸ್ಥೆ ಅನುಮತಿ ನೀಡಿಕೆಯನ್ನು ನಿಭಾಯಿಸಿದ ರೀತಿ ವ್ಯಾಪಕ ಟೀಕೆ ಮತ್ತು ಆತಂಕಕ್ಕೆ ಒಳಗಾಗಿದೆ. ಮೊದಲಿಗೆ ಆಕ್ಸಫರ್ಡ್-ಆಸ್ಟ್ರಾಜೆನೆಕಾ-ಸೆರಂ ಇನ್ಸ್ಟಿಟ್ಯೂಟ್ ನ 'ಕೊವಿದ್-ಶೀಲ್ಡ್' ಗೆ ತುರ್ತು ಬಳಕೆಗೆ ಅನುಮತಿ ನೀಡಲಾಯಿತು. ಆ ನಂತರ ಬಿಜೆಪಿ-ಪರ ಭಾರತ್ ಬಯೋಟೆಕ್ ಅವರನ್ನು 'ಸ್ವದೇಶೀ' ಪೈಪೋಟಿಯನ್ನು ಸಹಿಸದವರು ಎಂದು ಟೀಕಿಸಿದರು.

ಭಾರತದ ಸಾಂಕ್ರಾಮಿಕ ವಿಜ್ಞಾನ ಪರಿಣತರು, ವಿಜ್ಞಾನಿ ಸಮುದಾಯ ಮತ್ತು ಬಿಜಿವಿಎಸ್-ಎ.ಐ.ಪಿ.ಎಸ್.ಎನ್ ನಂತಹ ಜನವಿಜ್ಞಾನ ಸಂಘಟನೆಗಳು ಎರಡೂ ತುರ್ತು ಬಳಕೆಗೆ ಅನುಮತಿ ನೀಡಿದ್ದನ್ನು ಹಲವು ಕಾರಣಗಳಿಗಾಗಿ ಪ್ರಶ್ನಿಸಿದವು. ಮೊದಲನೆಯದಾಗಿ, ಎರಡೂ ನಿರ್ಣಯಗಳಲ್ಲಿ ಆಯಾ ಸಂಸ್ಥೆಗಳು ತಮ್ಮ ವ್ಯಾಕ್ಸೀನ್ ಪ್ರಯೋಗಗಳಲ್ಲಿ ಸಲ್ಲಿಸಲಾದ ಮಾಹಿತಿ/ದತ್ತಾಂಶಗಳನ್ನು ಸಾರ್ವಜನಿಕಗೊಳಿಸಿಲ್ಲ. ಅಗತ್ಯವಾದ ಪಾರದರ್ಶಕತೆಯನ್ನು ತೋರಿಸಿಲ್ಲ. ಆಕ್ಸಫರ್ಡ್-ಆಸ್ಟ್ರಾಜೆನೆಕಾ-ಸೆರಂ ಇನ್ಸ್ಟಿಟ್ಯೂಟ್ ನ 'ಕೊವಿದ್-ಶೀಲ್ಡ್' ಯು.ಕೆ, ಯು.ಎಸ್ ಗಳಲ್ಲಿ ಮೂರನೇ ಹಂತದ ಪರಿಣಾಮಕಾರಿತನದ ಮಾಹಿತಿ/ದತ್ತಾಂಶಗಳನ್ನು ಸಲ್ಲಿಸಿದ್ದರೂ, ಅದು ಭಾರತದಲ್ಲಿ ಮಾಡಲಾದ ಇಂತಹ ಮಾಹಿತಿ/ದತ್ತಾಂಶಗಳನ್ನು ಸಲ್ಲಿಸಿದೆಯೇ ಎಂಬ ಪ್ರಶ್ನೆಗೆ ಸಿ.ಡಿ.ಎಸ್.ಸಿ.ಓ ಮೌನ ವಹಿಸಿದೆ. ಎರಡನೆಯದಾಗಿ, ಭಾರತ್ ಬಯೋಟೆಕ್ ವ್ಯಾಕ್ಸೀನನ್ನು 'ಕ್ಲಿನಿಕಲ್ ಟ್ರಯಲ್ ಮೋಡ್' ನಲ್ಲಿ ಸಾಮೂಹಿಕ ಬಳಕೆಗೆ ಅನುಮತಿ ನೀಡಿದ್ದರ ಅರ್ಥಹೀನತೆಯನ್ನು ಎತ್ತಿ ತೋರಿಸಿದ್ದಾರೆ. ಪರಿಣಾಮಕಾರಿತನದ ಕುರಿತು ಖಾತ್ರಿ ಪಡಿಸಿಕೊಳ್ಳದೆ ಮುಂಚೂಣಿ ವೈದ್ಯಕೀಯ ಸಿಬ್ಬಂದಿಯನ್ನು 'ಪ್ರಯೋಗ ಪಶು'ಗಳಾಗಿ ಬಳಸಿಕೊಳ್ಳಲಾಗುತ್ತಿದೆಯೇ ಎಂದು ಅವರು ಪ್ರಶ್ನಿಸಿದ್ದಾರೆ. ಮೂರನೆಯದಾಗಿ, ಸಿ.ಡಿ.ಎಸ್.ಸಿ.ಓ ನಂತಹ ವೈಜ್ಞಾನಿಕ ಸಂಸ್ಥೆಗಳು ಸರಕಾರದ ಒತ್ತಡದಲ್ಲಿ ತಮ್ಮ ನಿಯಮಗಳನ್ನು ಉಲ್ಲಂಘಿಸಿ ಇಂತಹ ನಿರ್ಣಯ ಕೈಗೊಳ್ಳುವುದು, ಆಳುವ ಪಕ್ಷ ತನ್ನ ಟ್ರೋಲ್ ಪಡೆಗಳನ್ನು 'ವ್ಯಾಕ್ಸೀನ್ ರಾಷ್ಟ್ರವಾದ' ಉದ್ರೇಕಿಸಿ ಇಂತಹ ಒತ್ತಡವನ್ನು ರಾಜಕೀಯ ಉದ್ದೇಶಗಳಿಗಾಗಿ ಹೇರುವುದು, ಎರಡೂ ಅಪಾಯಕಾರಿ ಮತ್ತು ಆತಂಕಕಾರಿಯಾಗಿದೆ. ಮಾಹಿತಿ/ದತ್ತಾಂಶಗಳ ಆಧಾರದ ಮೇಲೆ ವೈಜ್ಞಾನಿಕವಾಗಿ ನಿರ್ಣಯ ತೆಗೆದುಕೊಳ್ಳದಿರುವುದು ಸಾಮೂಹಿಕ ವ್ಯಾಕ್ಸೀನ್ ಕಾರ್ಯಕ್ರಮದ ಸಮಗ್ರ ವೈಜ್ಞಾನಿಕ ನಿರ್ವಹಣೆಯ ಕುರಿತು ಗಂಭೀರ ಅನುಮಾನಗಳನ್ನು ಸೃಷ್ಟಿಸಿದೆ.

ಕೊನೆಯದಾಗಿ, ಇದು ಪರಿಣಾಮಕಾರಿ ವ್ಯಾಕ್ಸೀನನ್ನು ಸ್ವದೇಶಿಯಾಗಿ ಸಂಶೋಧಿಸುವುದರಲ್ಲಿ ಮತ್ತು ನಿಜವಾದ ಆತ್ಮನಿರ್ಭರತೆಯನ್ನು (ಅಥವಾ ಸ್ವಾವಲಂಬನೆ) ಕೊವಿದ್ ವ್ಯಾಕ್ಸೀನಿನಲ್ಲಿ ಸಾಧಿಸುವುದರಲ್ಲಿ ಮೋದಿ ಸರಕಾರದ ವೈಫಲ್ಯವನ್ನು ಮುಚ್ಚಿಕೊಳ್ಳಲು ಮಾಡಲಾಗುತ್ತಿದೆ ಎಂದೂ ಟೀಕಿಸಲಾಗಿದೆ. ಖ್ಯಾತ ಸಾಂಕ್ರಾಮಿಕ ಪರಿಣತರಾದ ಜೇಕಬ್ ಜಾನ್ ಮತ್ತು ಎಂ.ಎಸ್.ಶೇಷಾದ್ರಿ ಭಾರತಕ್ಕೆ ಹಲವು ಸಕಾರಾತ್ಮಕ ಅಂಶಗಳಿದ್ದರೂ ಸರಕಾರದ ಸಕಾಲಿಕ ನಾಯಕತ್ವದ ಅಭಾವದಿಂದಾಗಿ 'ವ್ಯಾಕ್ಸೀನ್ ಓಟ'ದಲ್ಲಿ ಭಾರತ ಹಿಂದೆ ಬಿದ್ದಿದೆ. ಭಾರತ ಸರಕಾರ ಚೀನಾ ರಶ್ಯಾಗಳಲ್ಲಿ ಮಾಡಿದಂತೆ ಒಂದು 'ರಾಷ್ಟ್ರೀಯ ಮಿಶನ್' ವಿಧಾನದಲ್ಲಿ ನಿರ್ವಹಿಸಿದ್ದರೆ, ಭಾರತ ಮೊದಲ ಸ್ಥಾನದಲ್ಲಿ ಇರುತ್ತಿತ್ತು ಎಂದು ಒಂದು ಲೇಖನದಲ್ಲಿ (ದಿ ಹಿಂದೂ ಜನವರಿ 3, 2021) ಅವರು ಅಭಿಪ್ರಾಯ ಪಟ್ಟಿದ್ದಾರೆ. ಅಭಿವೃದ್ಧ ಬಯೋಟೆಕ್ನೊಲಜಿ ಪ್ರಯೋಗಾಲಯಗಳು, ಸಮರ್ಥ ವೈಜ್ಞಾನಿಕ ನಾಯಕತ್ವ, ಬೃಹತ್ ಮುಂಚೂಣಿ ಸಾಮೂಹಿಕ ವ್ಯಾಕ್ಸೀನ್ ಉತ್ಪಾದನಾ ಸ್ಥಾವರಗಳು ಅಲ್ಲದೆ ಎರಡು ಜಾಗತಿಕ ಕೊವಿದ್ ಸಂಸ್ಥೆಗಳ (ಗ್ಲೋಬಲ್ ಪ್ಯಾಂಡೆಮಿಕ್ ಪ್ರಿಪೇರ್ಡ್ ನೆಸ್ ಬೋರ್ಡ್ ಮತ್ತು ಕೋಲಿಶನ್ ಫಾರ್ ಎಪಿಡೆಮಿಕ್ ಪ್ರಿಪೇರ್ಡ್ ನೆಸ್ ಇನ್ನೋವೇಶನ್ಸ್) ಸದಸ್ಯತ್ವ-ಇವು ಭಾರತ ಹೊಂದಿದ್ದ ಸಕಾರಾತ್ಮಕ ಅಂಶಗಳು ಎಂದು ಅವರು ಗುರುತಿಸಿದ್ದಾರೆ. 'ರಾಷ್ಟ್ರೀಯ ಮಿಶನ್' ವಿಧಾನದಲ್ಲಿ ನಿರ್ವಹಿಸದ ಮೋದಿ ಸರಕಾರದ ವೈಫಲ್ಯದ ನಡುವೆಯೂ, ಎರಡು ಖಾಸಗಿ ಕಂಪನಿಗಳ ಪ್ರಯತ್ನದಿಂದ ಭಾರತ ಜಾಗತಿಕ ವ್ಯಾಕ್ಸೀನ್ ಭೂಪಟದಲ್ಲಿ ಉಳಿಯುವಂತಾಯಿತು. ಆದರೆ ಅವುಗಳ ಸೀಮಿತ ಸಂಪನ್ಮೂಲಗಳಿಂದ ಈ ಓಟ ಗೆಲ್ಲಲು ಸಾಧ್ಯವಾಗಲಿಲ್ಲ. ಈ ವೈಫಲ್ಯ ಯಾಕಾಯಿತು ಎಂದು ಸರಕಾರದ ನೀತಿ ನಿರ್ಧಾರಕರು, ವೈಜ್ಞಾನಿಕ ಸಂಸ್ಥೆಗಳು ಆತ್ಮಾವಲೋಕನ ಮಾಡಿಕೊಳ್ಳಬೇಕು ಎಂದು ಅವರು ಅಭಿಪ್ರಾಯ ಪಟ್ಟಿದ್ದಾರೆ.

ಇದರರ್ಥ ಆಕ್ಸಫರ್ಡ್-ಆಸ್ಟ್ರಾಜೆನೆಕಾ-ಸೆರಂ ಇನ್ಸ್ಟಿಟ್ಯೂಟ್ ನ 'ಕೊವಿದ್-ಶೀಲ್ಡ್' ಆಗಲಿ ಅಥವಾ ಭಾರತ್ ಬಯೋಟೆಕ್ ನ 'ಕೊವ್ಯಾಕ್ಸೀನ್' ಆಗಲಿ ಕೊವಿದ್ ಪರಿಣಾಕಾರಿತನದಲ್ಲಿ ಹಿಂದೆ ಬೀಳಬಹುದು ಎಂಬ ಅನುಮಾನವಲ್ಲ. ಆದರೆ ಕೋಟ್ಯಾಂತರ ಜನರ ಜೀವನ್ಮರಣದ ಪ್ರಶ್ನೆಯಾಗಿರುವ ವ್ಯಾಕ್ಸೀನಿನ ಪರಿಣಾಮಕಾರಿತನ ಮಾಹಿತಿ/ದತ್ತಾಂಶಗಳ ಆಧಾರದ ಮೇಲೆ ವೈಜ್ಞಾನಿಕವಾಗಿ ತೆಗೆದುಕೊಳ್ಳಬೇಕು. ಇದರಲ್ಲಿ 'ದೇಶಪ್ರೇಮ' ವಾಗಲಿ ಅಥವಾ ರಾಜಕೀಯ ಸಿದ್ಧಾಂತದ ಒತ್ತಡವಾಗಲಿ ಇರಬಾರದು. ಔಷಧಿ ಅನುಮತಿ ಕೊಡುವ ಮತ್ತು ಇತರ ಸಾರ್ವಜನಿಕ ಸರಕಾರಿ ಸಂಸ್ಥೆಗಳು ವೈಜ್ಞಾನಿಕವಾಗಿ ಮತ್ತು ಪಾರದರ್ಶಕವಾಗಿ ಇರಬೇಕು ಎಂಬುದಷ್ಟೇ ಮುಖ್ಯ ಕಾಳಜಿ. ಆದರೆ ಸಾಮೂಹಿಕ ಕೊವಿಡ್ ವ್ಯಾಕ್ಸೀನ್ ಕಾರ್ಯಕ್ರಮದ ವಿವರಗಳನ್ನು ರೂಪಿಸುವ ಸಿ.ಡಿ.ಎಸ್.ಸಿ.ಓ ಮತ್ತು ಇತರ ವೈಜ್ಞಾನಿಕ ಸಂಸ್ಥೆಗಳಿಂದ ಬರುತ್ತಿರುವ "ಸುದ್ದಿಗಳು" ಆತಂಕಕಾರಿಯಾಗಿವೆ. ಉದಾಹರಣೆಗೆ ಆಕ್ಸಫರ್ಡ್-ಆಸ್ಟ್ರಾಜೆನೆಕಾ ವ್ಯಾಕ್ಸೀನ್ ನ ಎರಡನೆಯ ಡೋಸನ್ನು ಒಂದು ತಿಂಗಳ ಅಂತರದಲ್ಲಿ ಕೊಟ್ಟರೆ ಅತ್ಯಂತ ಪರಿಣಾಮಕಾರಿ ಎನ್ನಲಾಗಿದೆ. ಆದರೆ ಯು.ಕೆ ಅದನ್ನು ಮೂರು ತಿಂಗಳ ಅಂತರದಲ್ಲಿ ಕೊಡಲು ನಿರ್ಧರಿಸಿದೆ. ಯು.ಕೆ ಯಲ್ಲಿ ಹೊಸ ಕೊವಿದ್ ಪ್ರಕರಣಗಳು ಸ್ಫೋಟಗೊಂಡ ತುರ್ತು ಪರಿಸ್ಥಿತಿ ಇರುವುದರಿಂದ ಹೆಚ್ಚಿನ ಜನರಿಗೆ ಮೊದಲ ಡೋಸ್ ಕೊಡುವುದಕ್ಕೆ ಆದ್ಯತೆ ಕೊಡಲಾಗುತ್ತಿದೆ ಎಂಬ ಕಾರಣವನ್ನು ಇದಕ್ಕೆ ಕೊಡಲಾಗಿದೆ. ಆದರೆ ಭಾರತದಲ್ಲಿ ಹೊಸ ಕೊವಿದ್ ಪ್ರಕರಣಗಳು ಕಡಿಮೆಯಾಗುತ್ತಿದ್ದು ಅಂತಹ ಯಾವುದೇ ತುರ್ತು ಇಲ್ಲ. ಆದರೆ ಇಲ್ಲೂ ಪ್ರಾಯೋಗಿಕ ಕಾರಣಗಳಿಗಾಗಿ ಮೂರು ತಿಂಗಳ ಅಂತರದಲ್ಲಿ ಕೊಡಲು ನಿರ್ಧರಿಸಲಾಗಿದೆ ಎಂದು ಹೇಳಲಾಗುತ್ತಿದೆ. ಇದು ಆತಂಕಕಾರಿ ಸುದ್ದಿ. ಇಂತಹ ನಿರ್ಣಯಗಳನ್ನು ಸರಕಾರ, ಆಡಳಿತ ತೆಗೆದುಕೊಂಡು ವೈಜ್ಞಾನಿಕ ಸಂಸ್ಥೆಗಳಿಗೆ ನಿರ್ದೇಶನ ಕೊಡಲಾಗುತ್ತಿದೆ ಎಂಬ ಗುಮಾನಿ ಇದೆ. ಸಾಮೂಹಿಕ ಕೊವಿಡ್ ವ್ಯಾಕ್ಸೀನ್ ಕಾರ್ಯಕ್ರಮವು ಅತ್ಯಂತ ಸಂಕೀರ್ಣ ಕಾರ್ಯಕ್ರಮ. ಮೋದಿ ಸರಕಾರ ಲಾಕ್ ಡೌನ್ ನಿಂದ ಆರಂಭಿಸಿ ಕೊವಿದ್ ಪರಿಸ್ಥಿತಿಯನ್ನು ಅತ್ಯಂತ ಅವೈಜ್ಞಾನಿಕವಾಗಿ ನಿಭಾಯಿಸಿದೆ. ತಟ್ಟೆ ಬಟ್ಟಲು ಬಾರಿಸುವ, ದೀಪ ಉರಿಸಿ ಕೊವಿದ್ ಓಡಿಸುವ 'ಹಸು ವಿಜ್ಞಾನ' (ಹಸು ಆಕ್ಸಿಜನ್ ಬಿಡುತ್ತದೆ, ದನದ ಮೂತ್ರ ಎಲ್ಲ ಕಾಯಿಲೆಗಳನ್ನು ವಾಸಿ ಮಾಡುವ ದಿವ್ಯ ಔಷಧ, ಕೊವಿದ್ ಗೆ ಆಯುರ್ವೇದದಲ್ಲಿ ಔಷಧಿ ಇದೆ ಇತ್ಯಾದಿ) ಗಳನ್ನು ಈಗಾಗಲೇ ನೋಡಿದ್ದೇವೆ. 'ಹುಸಿ ದೇಶಪ್ರೇಮ', 'ಹಸು ವಿಜ್ಞಾನ' ಮತ್ತು ಎಲ್ಲವನ್ನೂ ರಾಜಕೀಯ ಉದ್ದೇಶಗಳಿಗೆ ತಿರುಚುವ ಪ್ರವೃತ್ತಿಗೆ ಕಡಿವಾಣ ಹಾಕದಿದ್ದರೆ, ಅತ್ಯಂತ ಸಂಕೀರ್ಣವಾದ ಸಾಮೂಹಿಕ ಕೊವಿಡ್ ವ್ಯಾಕ್ಸೀನ್ ಕಾರ್ಯಕ್ರಮ ಅಪಾಯಕಾರಿ ವೈಫಲ್ಯದತ್ತ ಹೆಜ್ಜೆಯಿಡುತ್ತದೆ. ಇದನ್ನು ತಡೆಯಲು ವಿಜ್ಞಾನಿ ಸಮುದಾಯ, ಜನವಿಜ್ಞಾನ ಚಳುವಳಿಗಳು, ಜನಸಂಘಟನೆಗಳು, ರಾಜ್ಯ ಸರಕಾರಗಳು ಸಾಮೂಹಿಕ ಕೊವಿಡ್ ವ್ಯಾಕ್ಸೀನ್ ಕಾರ್ಯಕ್ರಮದ ವಿವರಗಳಿಗೆ ಮತ್ತು ಪಾರದರ್ಶಕತೆಗೆ ಒತ್ತಾಯಿಸಬೇಕಾಗಿದೆ. ಅವನ್ನು ಜಾಗ್ರತೆಯಿಂದ ಪರಿಶೀಲಿಸಲಾಗಿದೆ. ಅದನ್ನು 'ಹುಸಿ ದೇಶಪ್ರೇಮ', 'ಹಸು ವಿಜ್ಞಾನ' ಪೀಡಿತ ಸರಕಾರ ಮತ್ತು ಆಳುವ ಪಕ್ಷದ ಮರ್ಜಿಗೆ ಬಿಡಲು ಸಾಧ್ಯವಿಲ್ಲ.

ನನ್ನಾಣೆ! ನಾನು ನಿಮಗೆ ಓಟು ಹಾಕಲ್ಲ!

ವ್ಯಂಗ್ಯಚಿತ್ರ ಕೃಪೆ: ಸತೀಶ ಆಚಾರ್ಯ





ನಾನು ಯಾವುದೇ ಲಸಿಕೆಯನ್ನು ನಂಬುತ್ತೇನೆ, ಎಲ್ಲ ರಾಜಕಾರಣಿಗಳು ನನಗಿಂತ ಮೊದಲು ತಗೊಂಡರೆ ಮಾತ್ರ!

ವ್ಯಂಗ್ಯಚಿತ್ರ ಕೃಪೆ: ಅಲೋಕ್ ನಿರಂತರ್

ಕೋವಿಡ್-19 ಲಸಿಕೆಯ ಸುತ್ತ ಪ್ರಶ್ನೆಗಳ ಹುತ್ತ

ಪುಟ 9 ರಿಂದ

ಉಪಯೋಗಿಸಿದ ಪಿಪಿಇ ಮುಂತಾದ ವಿಲೇವಾರಿ ಮಾಡಲು ಸಾಧ್ಯವಾಗದ ತ್ಯಾಜ್ಯದಿಂದ ಪೃಥ್ವಿ ತುಂಬಿದೆ. ಈ ಲಸಿಕಾ ಕಾರ್ಯಕ್ರಮದಿಂದ ಉಂಟಾಗುವ ಇನ್ನಷ್ಟು ತ್ಯಾಜ್ಯಗಳ ಸೂಕ್ತ ವಿಲೇವಾರಿಯ ಬಗ್ಗೆ ಸಂಬಂಧಪಟ್ಟವರು ಯೋಚಿಸುತ್ತಿದ್ದಾರೆಯೆ?

ಪೃಥ್ವಿ ಕೇಳುತಿಹಳು_
ನನ್ನ ನೆಲ ಜಲ ವಾಯುಮಂಡಲವೆಲ್ಲಾ,
ತ್ಯಾಜದಿಂದ ತುಂಬಿರುವೆ,
ನನ್ನ ವಾಸಕ್ಕಿಲ್ಲಿ ಸ್ಥಳವಿನ್ನು ಉಳಿದಿಲ್ಲಾ,
ಎಲ್ಲಿ ಹೋಗುವೆ ನೀ ಓ ಮಾನವಾ ।

ಕೊನೆಯ ಮಾತು:

ಹೇಳಿದ ಹತ್ತು ಹಲವು ಸಮಸ್ಯೆಗಳನ್ನು ಸೂಕ್ತ ರೀತಿಯಲ್ಲಿ ಬಗೆಹರಿಸಿ ಈ ಮಹಾನ್ ಲಸಿಕಾ ಕಾರ್ಯಕ್ರಮದ ಅನುಷ್ಟಾನದಲ್ಲಿ ನಮ್ಮ ಸರ್ಕಾರಗಳು ಸಫಲತೆಯನ್ನು ಪಡೆಯಲಿ ಎಂದು ಹಾರೈಸೋಣ. ಹಾಗೂ ಈ ಕಾರ್ಯದಲ್ಲಿ ಸಫಲತೆಗೆ ಎಲ್ಲಾ ನಾಗರಿಕರೂ ತಮ್ಮಿಂದಾಗುವ ಎಲ್ಲಾ ಸಹಕಾರ ನೀಡೋಣ.

ಇಂದು ನಮ್ಮ ದೇಶವೂ ಸೇರಿ ಪ್ರಪಂಚದ ಹತ್ತು ಹಲವು ದೇಶಗಳ ಹಲವು ಔಷಧೀಯ ಕಂಪೆನಿಗಳಲ್ಲಿ ಈಗ ಬಂದಿರುವ ಲಸಿಕೆಗಿಂತಲೂ ಉತ್ತಮವಾದ ಲಸಿಕೆಯ ಲಭ್ಯತೆಗೆ ಪ್ರಯೋಗಗಳೂ ನಡೆಯುತ್ತಿದೆ. ಇವುಗಳಲ್ಲಿ ಲಸಿಕೆಯನ್ನು ಫಲಾನುಭವಿಗಳ ಮೂಗು, ಬಾಯಿಗಳ ಮೂಲಕ ಸ್ಪ್ರೇ (ಚಿಮುಕಿಸು) ಮೂಡುವುದೂ ಒಂದು ವಿಧಾನ. ಇದರಲ್ಲಿ ಸಫಲತೆ ಪಡೆದರೆ ಲಸಿಕಾ ಕಾರ್ಯಕ್ರಮದ ಅನುಷ್ಟಾನ ಬಹಳಷ್ಟು ಸುಲಭವಾಗುವುದು.

ಯಾವುದೇ ಉಷ್ಣತೆಯಲ್ಲಿ ತನ್ನ ಸಾಮರ್ಥ್ಯ ಕಾಪಾಡಿಕೊಂಡು ಬರುವ, ಸುಲಭ'ದಲ್ಲಿ ಫಲಾನುಭವಿಗಳಿಗೆ ನೀಡಲು ಸಾಧ್ಯವಾಗುವಂತಹ, ಪ್ರಥಮ ಲಸಿಕಾ ಪ್ರಯೋಗದಲ್ಲೇ ದೇಹಕ್ಕೆ ಶೀಘ್ರ, ಸಮರ್ಥ ಹಾಗೂ ಧೀರ್ಘಕಾಲ ದೇಹದಲ್ಲೇ ಉಳಿಯುವಂತಹ ರೋಗ ನಿರೋಧಕ ಶಕ್ತಿ ನೀಡುವ, ಪಡೆದವರ ದೇಹದಲ್ಲಿ ಯಾವುದೇ ಅಹಿತಕರ ಸಮಸ್ಯೆ ಉಂಟು ಮಾಡದ, ಅಗ್ಗದ ಬೆಲೆಯ, ಸಾಗಣೆ, ಸಂಗ್ರಹಣೆ ವಿತರಣೆ ಸುಲಭದಲ್ಲಿ ಸಾಧ್ಯವಾಗುವಂತಹ ಒಂದು ಪರಿಪೂರ್ಣತೆಗೆ ಸನಿಹ ಬರುವ ಲಸಿಕೆ ಈ ಕೋವಿಡ್-19 ಮಹಾಸೋಂಕನ್ನು ತಡೆಗಟ್ಟಲು ಅವಿಷ್ಕಾರಗೊಳ್ಳಲಿ ಎಂದು ಆಶಿಸೋಣ.

ಕಾರ್ಮಿಕ ವರ್ಗದ ಚಳುವಳಿಯ ಬೆಳವಣಿಗೆಯ ಹಾದಿಯಲ್ಲಿ



ಗ್ರೇಟ್ ಬ್ರಿಟನ್ನಿನ ರಾಯಲ್ ಕಮಿಷನ್ ಆನ್ ಲೇಬರ್ ಗೆ ಸಲ್ಲಿಸಿದ ಹೇಳಿಕೆಗಳು, ಅವುಗಳ ಲಕ್ಷಣಗಳು ಏನೇ ಇರಲಿ, ಈ ಅವಧಿಯಲ್ಲಿ ಮುಷ್ಕರಗಳು ಸಾಕಷ್ಟು ವ್ಯಾಪಕವಾಗಿ ಸಂಭವಿಸಿವೆ ಎಂದು ಸ್ಪಷ್ಟವಾಗಿ ಸೂಚಿಸುತ್ತವೆ. ಆಧುನಿಕ ಶೈಲಿಯಲ್ಲಿಲ್ಲದಿದ್ದರೂ ಮತ್ತು ಅದು ಎಷ್ಟೇ ಸಡಿಲವಾಗಿ ಮತ್ತು ತಾತ್ಕಾಲಿಕವಾಗಿದ್ದರೂ ಆ ಆರಂಭಿಕ ಅವಧಿಯಲ್ಲಿ ಶೋಷ'ಣೆಯ ತೀವ್ರತೆಗೆ ವಿರುದ್ಧವಾಗಿ ಕಾರ್ಮಿಕರು ಆಗಾಗ್ಗೆ ಎದ್ದು ನಿಂತರು ಎಂಬ ಅಂಶವನ್ನು ಅಲ್ಲಗಳೆಯುವಂತಿಲ್ಲ. ಮತ್ತೊಂದು ಗಮನಾರ್ಹ ಲಕ್ಷಣವೆಂದರೆ ಮುಷ್ಕರಗಳು ಬ್ರಿಟಿಷ್ ಒಡೆತನದ ಮತ್ತು ಭಾರತದ ಸ್ವಾಮ್ಯದ ಕೈಗಾರಿಕೆಗಳೆರಡರಲ್ಲೂ ಸಂಭವಿಸಿದವು. ಬ್ರಿಟಿಷ್ ಮತ್ತು ಭಾರತದ ಕೈಗಾರಿಕೋದ್ಯಮಿಗಳ ನಡುವಿನ ವಿವಿಧ ರೀತಿಯ ಹಿತಾಸಕ್ತಿಗಳ ಘರ್ಷಣೆಗಳ ಹೊರತಾಗಿಯೂ, ಭಾರತದ ಕಾರ್ಮಿಕರ ನಿರ್ದಯ ಶೋಷಣೆಗೆ ಸಂಬಂಧಿಸಿದಂತೆ, ಈ ಎರಡು ಪರಸ್ಪರ ಸ್ಪರ್ಧೆಯಲ್ಲಿದ್ದ ಗುಂಪುಗಳು ಸಂಪೂರ್ಣವಾಗಿ ಒಂದಾಗಿದ್ದವು.

ಮೂಲ ಲೇಖಕರು: ಸುಕೋಮಲ್ ಸೇನ್ ಸಂಗ್ರಹ-ಅನುವಾದ: ಸಿ.ಆರ್. ಶಾನಭಾಗ

ಕಾರ್ಮಿಕರ ನಿಜವಾದ ಹೋರಾಟಗಳು, ಅಲ್ಲಲ್ಲಿ ಪ್ರತ್ಯೇಕ ಮತ್ತು ಚದುರಿದ ಹಾಗಿದ್ದರೂ ಸಹ, ಹತ್ತೊಂಬತ್ತನೇ ಶತಮಾನದ ದ್ವಿತೀಯಾರ್ಧದ ಆರಂಭದಿಂದಲೇ ಸಿಡಿದುಬರಲು ಪ್ರಾರಂಭಿಸಿದವು. ನಿಜ, ಕಾರ್ಮಿಕರ ನೋವುಗಳು ಮತ್ತು ಶೋಷಣೆಯನ್ನು ಕಂಡು ಅದರ ವಿರುದ್ಧ ದನಿ ಎತ್ತಿದ ಬುದ್ಧಿಜೀವಿಗಳ ಒಂದು ವಿಭಾಗದ ಪ್ರಯತ್ನಗಳಿಂದಾಗಿ ಕಾರ್ಮಿಕರ ನಡುವೆ 'ಪ್ರಾಥಮಿಕ ಶಿಕ್ಷಣ ಹರಡಿದ್ದು ಇದಕ್ಕೆ ದಾರಿ ಮಾಡಿ ಕೊಟ್ಟಿತು. ಈ ಹೋರಾಟಗಳ ಹಿಂದೆ ಯಾವುದೇ ಸಂಘಗಳು ಅಥವಾ ಯಾವುದೇ ಸಂಘಟಿತ ಪ್ರಯತ್ನಗಳು ಗಮನಾರ್ಹವಾಗಿ ಇರಲಿಲ್ಲ. ಅಂತಿಮವಾಗಿ ಕೈಗಾರಿಕಾ ಕಾರ್ಮಿಕರಾಗಿ ಬದಲಾದ ಬಡ ರೈತರು ಮತ್ತು ಕೃಷಿ ಕಾರ್ಮಿಕರ ಮನಸ್ಸಿನಲ್ಲಿ ಸುಪ್ತವಾಗಿದ್ದ ಬಂಡಾಯದ ಪ್ರವೃತ್ತಿ, ಆಧುನಿಕ ಕಾರ್ಖಾನೆಗಳಲ್ಲಿ ಬಂಡವಾಳಶಾಹಿ ಶೋಷಣೆಯ ವಿರುದ್ಧ ಪ್ರತಿರೋಧದ ಕೃತ್ಯಗಳಿಗೆ ಅವರನ್ನು ಪ್ರೇರೇಪಿಸಿತು. ಕಾರ್ಖಾನೆಗಳಲ್ಲಿ ಸಾಮೂಹಿಕ ಕೆಲಸವು ಅವರಲ್ಲಿ ಪರಸ್ಪರ ಸಹಾನುಭೂತಿಯನ್ನು ಉಂಟುಮಾಡಿತು. ವಿಭಿನ್ನ ಹಿನ್ನೆಲೆಗಳ ಕಾರ್ಮಿಕರಲ್ಲಿ ಐಕ್ಯತೆಯ ಬೆಳವಣಿಗೆಯು ಇದಕ್ಕೆ ನೆರವಾಯಿತು.

ಆರಂಭಿಕ ಅವಧಿಯಲ್ಲಿನ ಕಾರ್ಮಿಕರು, ದಲ್ಲಾಳಿಯ ಮೇಲೆ ಅವಲಂಬಿತರಾಗಿದ್ದರು, ಅವರು ಸಾಮಾನ್ಯ ನಿಯಮದಂತೆ, ಕಾರ್ಮಿಕರನ್ನು ತಮ್ಮ ಜಾತಿ-ಬಾಂಧವರೊಳಗಿಂದ, ಆಗಾಗ್ಗೆ ತಮ್ಮ ಹಳ್ಳಿಗಳಿಂದ ನೇಮಿಸಿಕೊಳ್ಳುತ್ತಿದ್ದರು. ಈ 'ದಲ್ಲಾಳಿಗಳು' ಕಾರ್ಖಾನೆಗಳ ಉದ್ಯೋಗಿಗಳಾಗಿದ್ದರು, ಮತ್ತು ಕಾರ್ಮಿಕರಿಂದ ಹಲವು ರೀತಿಯ ಕಮಿಶನ್ ವಸೂಲಿ ಮಾಡುವ ಮೂಲಕವೂ ಹಣವನ್ನು ಸಂಪಾದಿಸಿದರು. ದಲ್ಲಾಳಿಗಳ ಅಡಿಯಲ್ಲಿದ್ದ ಕಾರ್ಮಿಕರ ಗುಂಪು ತೊಂದರೆ ಮತ್ತು ಸಂಕಟಗಳ ಸಮಯದಲ್ಲಿ ಒಟ್ಟಿಗೆ ನಿಲ್ಲುವ ಸಡಿಲವಾದ ವೃತ್ತಿಪರ ಭ್ರಾತೃತ್ವದಿಂದ ಬಂಧಿಸಲ್ಪಟ್ಟಿದ್ದವು.

ಈ ದಲ್ಲಾಳಿಗಳು ಬಹುತೇಕ ಭ್ರಷ್ಟ ಮತ್ತು ದುಷ್ಟರಾಗಿದ್ದರು. ಆಡಳಿತಗಾರರ ಮತ್ತು ಈ ದಲ್ಲಾಳಿಗಳ ನಡುವಿನ ಹಿತಾಸಕ್ತಿಗಳ ಸಂಘರ್ಷ ಅವರನ್ನು ವಜಾಗೊಳಿಸಲು ಅಥವಾ ಇತರ ಕೆಲವು ಶಿಕ್ಷೆಗಳನ್ನು ವಿಧಿಸಲು ಕಾರಣವಾಗುತ್ತಿದ್ದವು. ಅಂತಹ ಘಟನೆಯಲ್ಲಿ ಮಾಲಿಕರು ದಲ್ಲಾಳಿಗಳ ಅಡಿಯಲ್ಲಿದ್ದ ಕಾರ್ಮಿಕರ ಇಡೀ ಗುಂಪಿಗೆ ಕೆಲಸವನ್ನು ನರಾಕರಿಸುವ ಸಾಧ್ಯತೆಗಳಿದ್ದವು. ವೈಯಕ್ತಿಕ ಸಂಬಂಧಗಳಲ್ಲದೆ, ಉದ್ಯೋಗದ ಸುರಕ್ಷತೆ, ಬಡ್ತಿ ಇತ್ಯಾದಿಗಳಿಗಾಗಿ ಕೆಲಸಗಾರರು ದಲ್ಲಾಳಿಗಳ ಮೇಲೆ ಅವಲಂಬಿಸಿದ್ದುದು ಸಹ ಅಂತಹ ಗುಂಪು ಕ್ರಮಕ್ಕೆ ಕಾರಣವಾಗಿತ್ತು. ಆದರೆ ಇದಿಷ್ಟೇ ಆರಂಭಿಕ ಅವಧಿಯಲ್ಲಿ ನಡೆದ ಮುಷ್ಕರಗಳ ಕಾರಣಗಳನ್ನು ಸಂಪೂರ್ಣವಾಗಿ ವಿವರಿಸುವುದಿಲ್ಲ. ಹೆಚ್ಚಿನ ಸಂದರ್ಭಗಳಲ್ಲಿ, ಕಾರ್ಮಿಕರು ತಮ್ಮದೇ ಆದ ಬೇಡಿಕೆಗಳ ಆಧಾರದ ಮೇಲೆ ಸ್ವಯಂಪ್ರೇರಿತವಾಗಿ ಮುಷ್ಕರ ಮತ್ತು ಇತರ ಚಟುವಟಿಕೆಗಳಿಗೆ ಸೇರಿಕೊಂಡರು.

ಆದರೆ ನಿಸ್ಸಂದೇಹವಾಗಿ, ಆ ಅವಧಿಯ ಮುಷ್ಕರಗಳ ಸ್ವರೂಪವು ಸಂಘಟಿತ ಟ್ರೇಡ್ ಯೂನಿಯನ್ ಚಳವಳಿಯ ಅವಧಿಯ ಮುಷ್ಕರಗಳಿಗಿಂತ ಭಿನ್ನವಾಗಿತ್ತು. ಆ ಆರಂಭಿಕ ಮುಷ್ಕರಗಳ ಗುಣಲಕ್ಷಣಗಳನ್ನು ವಿವರಿಸುತ್ತಾ, ಡಿ. ಹೆಚ್. ಬ್ಯೂಕ್ಯಾನನ್ ಹೀಗೆ ಹೇಳುತ್ತಾರೆ: "ಮೊದಲಿನಿಂದಲೂ ಕೆಲಸ ಮಾಡಲು ನಿರಾಕರಿಸಿದ, ಸಡಿಲವಾಗಿ ಸಂಘಟಿತವಾಗಿದ್ದ ಉದಾಹರಣೆಗಳು ಇದ್ದವು.' ಮುಷ್ಕರಗಳು ಸಂಪೂರ್ಣವಾಗಿ ಅಲ್ಪಾವಧಿಯವು, ಹೆಚ್ಚೆಂದರೆ ಒಂದು ಅಥವಾ ಎರಡು ದಿನಗಳದ್ದಾಗಿದ್ದವು.. ಕೆಲವೊಮ್ಮೆ, ಯಾವುದೇ ವಿಳಯದ ಬಗ್ಗೆ ಇಡೀ ಕಾರ್ಖಾನೆ ಮುಷ್ಕರ ನಡೆಸುತ್ತಿದ್ದಿಲ್ಲ,, ಆದರೆ ಕೆಲವು ವಿಭಾಗಗಳು ಮಾತ್ರ ಮಾಡುತ್ತಿದ್ದವು. ಅಂತಹ ಅಸ್ತವ್ಯಸ್ತವಾಗಿರುವ ಲಕ್ಷಣವು ಮುಷ್ಕರಗಳನ್ನು ದೀರ್ಘಕಾಲ ಮುಂದುವರೆಸಲು, ಅಥವಾ ನಿರ್ಣಾಯಕವಾಗಿಸಲು ಬಿಡಲಿಲ್ಲ. ಇದರ ಪರಿಣಾಮವಾಗಿ, ಕಾರ್ಮಿಕರ ಪ್ರತಿರೋಧದ ಹೊರತಾಗಿಯೂ, ಮಾಲೀಕರು ಅವರ ಸಮಸ್ಯೆಗಳನ್ನು ಬಗೆಹರಿಸುವ ಮನಸ್ಥಿತಿಯಲ್ಲಿರಲಿಲ್ಲ. ಇದಲ್ಲದೆ, ಕಾರ್ಮಿಕರ ಮನೋಭಾವವೂ ಸ್ವಲ್ಪ ಭಿನ್ನವಾಗಿತ್ತು. ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಿದ್ದರೂ, ಕೈಗಾರಿಕಾ ಕಾರ್ಮಿಕರ ಹೊಸ ಜೀವನ ವಿಧಾನಕ್ಕೆ ಅವರು ಇನ್ನೂ ಒಗ್ಗಿಕೊಂಡಿರಲಿಲ್ಲ. ವಿಶೇಷವಾಗಿ ಕಡಿಮೆ ವೇತನ ಮತ್ತು ದೀರ್ಘಾವಧಿಯ ಕೆಲಸದ ಕಾರಣದಿಂದ, ಅವರು ಇದನ್ನು ಇನ್ನೂ ಶಾಶ್ವತ ವೃತ್ತಿಯೆಂದು ಒಪ್ಪಿಕೊಳ್ಳುವುದರಿಂದ ಹಿಂಜರಿಯುತ್ತಿದ್ದರು, ಗ್ರಾಮೀಣ ಜೀವನದ ಅವರ ಹಳೆಯ ಅಭ್ಯಾಸ ಮತ್ತು ಒಂದು ತುಂಡು ಭೂಮಿಯ ಆಮಿಷಗಳು ಅವರನ್ನು ಮತ್ತೆ ಹಳ್ಳಿಗಳಿಗೆ ಕರೆಯುತ್ತಿದ್ದವು. ಆದ್ದರಿಂದ, ಅಮಾನವೀಯ ಶೋಷಣೆಯ ವಿರುದ್ಧ ಅಲ್ಪಾವಧಿಯ ಪ್ರತಿರೋಧದ ನಂತರ ಕೈಗಾರಿಕಾ ಕೇಂದ್ರಗಳನ್ನು ಬಿಟ್ಟು ಸ್ಥಳೀಯ ಹಳ್ಳಿಗಳಿಗೆ ಆಗಾಗ್ಗೆ ಹಿಂದಿರುಗುವುದು ಅವರಲ್ಲಿ ಅನೇಕರಿಗೆ ಅಭ್ಯಾಸವಾಗಿತ್ತು."

ಆರಂಭಿಕ ಹಂತದಲ್ಲಿ, ಅತಿಯಾದ ದೀರ್ಘಾವಧಿಯ ಕೆಲಸ ಮತ್ತು ಶೋಚನೀಯ ನಿಕೃಷ್ಟ ವೇತನಗಳು ಕಾರ್ಮಿಕರನ್ನು ಹೆಚ್ಚು ಗಾಯಗೊಳಿಸಿದ ತ್ರಿಶೂಲದ ಎರಡು ಮುಳ್ಳುಗಳಾಗಿದ್ದವು, ಬಾಲ ಕಾರ್ಮಿಕರ ಉದ್ಯೋಗಕ್ಕೆ ಸಂಬಂಧಿಸಿದಂತೆ ಭಾರತದ ಮೊದಲ ಫ್ಯಾಕ್ಟರಿ ಕಾಯ್ದೆ ವಿಧಿಸಿದ ನಿರ್ಬಂಧಗಳು ಜಾರಿಯಾಗಲಿಲ್ಲ. ಒಂದು ವಾರದಲ್ಲಿ ಒಂದು ದಿನದ ಕಡ್ಡಾಯ ರಜಾ ಕೋರಿ ಎನ್.ಎಂ.ಲೋಖಂಡೆ ಬಾಂಬೆಯಲ್ಲಿ ಕಾರ್ಮಿಕರ ಸಭೆ ಆಯೋಜಿಸಿದರು. ಈ ಬೇಡಿಕೆ ಬಹುತೇಕ ಎಲ್ಲಾ ಕೈಗಾರಿಕಾ ಕೇಂದ್ರಗಳಲ್ಲಿ ಅಶಾಂತಿಯ ಕಾರಣವಾಯಿತು. 1890 ರ ಸೆಪ್ಟೆಂಬರ್ 25 ರಂದು ಭಾರತ ಸರ್ಕಾರ ಕಾರ್ಖಾನೆ ಕಾರ್ಮಿಕ ಆಯೋಗವನ್ನು ನೇಮಿಸುವ ಆದೇಶಗಳನ್ನು ಹೊರಡಿಸಿತು. ಈ ಆಯೋಗದಲ್ಲಿ ಬಾಂಬೆಯ ಎಸ್.ಎಸ್.ಬೆಂಗಾಲೀ ಮತ್ತು ಎನ್.ಎಂ.ಲೋಖಂಡೆ, ಕಲ್ಕತ್ತಾದ ಬಾಬು ರಸಿಕ್ ಲಾಲ್ ಘೋಳ್ ಮತ್ತು ಕಾನ್ಪುರ್ ಉಣ್ಣೆ ಮಿಲ್‌ನ ಫೋರ್‌ಮ್ಯಾನ್ ಫ್ರಮ್ಜಿ ಮೆಕೆಂಜಿ, ನಾಲ್ಕು ಭಾರತೀಯ ಸದಸ್ಯರಾಗಿದ್ದರು.

ಈ ಆಯೋಗದ ಶಿಫಾರಸು 1891 ರ ಫ್ಯಾಕ್ಟರಿ ಕಾಯ್ದೆ ಶಾಸನಕ್ಕೆ ಕಾರಣವಾಯಿತು. ಈ ಕಾಯಿದೆಯ ಮುಖ್ಯ ನಿಬಂಧನೆಗಳು ಹೀಗಿದ್ದವು: 9 ರಿಂದ 14 ವರ್ಷದೊಳಗಿನ ಬಾಲ ಕಾರ್ಮಿಕರಿಗೆ ದೈನಂದಿನ 9 ಗಂಟೆಗಳ ಕೆಲಸವನ್ನು ನಿಗದಿಪಡಿಸುವುದು, ಮಹಿಳಾ ಕಾರ್ಮಿಕರಿಗೆ 11 ಗಂಟೆಗಳ ಕೆಲಸ, ಪ್ರತಿದಿನ ಅರ್ಧ-ಗಂಟೆ ಊಟದ ಬಿಡುವು ಮತ್ತು ವಾರದಲ್ಲಿ ಒಂದು ದಿನದ ಕಡ್ಡಾಯ ರಜಾ-ವಿರಾಮ. ಆದರೆ ಗಮನಾರ್ಹವಾಗಿ, ಈ ಕಾಯ್ದೆಯು ಸಹ ಪುರುಷ ಕಾರ್ಮಿಕರ ಕೆಲಸದ ಸಮಯವನ್ನು ನಿಗದಿಪಡಿಸಲಿಲ್ಲ. ಬದಲಿಗೆ ಆಯೋಗದ ಮಾತಿನಲ್ಲಿ ಹೇಳುವುದಾದರೆ, ಈ ವಿಷಯದಲ್ಲಿ ಪ್ರಭುತ್ವದ ಹಸ್ತಕ್ಷೇಪಕ್ಕೆ ಕರೆ ನೀಡುವ ಯಾವುದೇ ಷರತ್ತುಗಳನ್ನು ಕಲ್ಪಿಸಲು ಸಾಧ್ಯವಾಗಲಿಲ್ಲ. [10] ಇದಲ್ಲದೆ, ಈ ಕಾಯಿದೆಯ ನಿಬಂಧನೆಗಳನ್ನು ಹೆಚ್ಚಿನ ಸಂದರ್ಭಗಳಲ್ಲಿ ಪ್ರಾಯೋಗಿಕವಾಗಿ ನಿರ್ಲಕ್ಷಿಸಲಾಯಿತು. ಎರಡು ದಶಕಗಳ ದೀರ್ಘ ಸಮಯದ ನಂತರ, ಪುರುಷ ಕಾರ್ಮಿಕರ ಕೆಲಸದ ಸಮಯವನ್ನು ಸೀಮಿತಗೊಳಿಸಲು ಶಿಫಾರಸು ಮಾಡಲಾಯಿತು. 1911 ರ ಭಾರತ ಫ್ಯಾಕ್ಟರಿ ಕಾಯ್ದೆಯು ಹತ್ತಿ ಗಿರಣಿ ಕಾರ್ಮಿಕರ ಕೆಲಸದ ಸಮಯವನ್ನು ದಿನಕ್ಕೆ 12 ಗಂಟೆಗಳೆಂದು ನಿಗದಿಪಡಿಸಿತು.

ಕರುಣಾಜನಕವಾದ ನಿಕೃಷ್ಟ ವೇತನವು ಕಾರ್ಮಿಕರಲ್ಲಿ ವ್ಯಾಪಕ ಅಸಮಾಧಾನವನ್ನು ಉಂಟುಮಾಡಿತು. ಆದರೆ ನಾಚಿಕೆಯಿಲ್ಲದ ಕಠೋರ ವಸಾಹತುಶಾಹಿ ಸರ್ಕಾರವು ಕನಿಷ್ಟ ಈ ಪ್ರಶ್ನೆಯನ್ನು ಪರಿಶೀಲಿಸಲು ಸಹ ಯಾವುದೇ ಸಮಿತಿ ಅಥವಾ ಆಯೋಗವನ್ನು ನೇಮಿಸುವ ಬಗ್ಗೆ ಯೋಚಿಸಲಿಲ್ಲ. ಮತ್ತು ಸ್ಪರ್ಧೆಗೆ ಇಳಿದಂತೆ ಬ್ರಿಟಿಷ್ ಮತ್ತು ಭಾರತೀಯ ಮಾಲೀಕರಿಬ್ಬರೂ ಕಾರ್ಮಿಕರಿಗೆ ಸಾಧ್ಯವಾದಷ್ಟು ಕಡಿಮೆ ವೇತನವನ್ನು ನೀಡುವ ಮೂಲಕ ಗರಿಷ್ಟ ಲಾಭವನ್ನು ಗಳಿಸಿದರು. ಆದ್ದರಿಂದ ಈ ಪರಿಸ್ಥಿತಿಯಲ್ಲಿ, ಕಾರ್ಮಿಕರ ಹೋರಾಟಗಳ ಮೊದಲ ಕುದಿ ಮುಖ್ಯವಾಗಿ ಎರಡು ಮೂಲಭೂತ ಬೇಡಿಕೆಗಳ ಸುತ್ತ ಕೇಂದ್ರೀಕರಿಸಿತ್ತು -ಕೆಲಸದ ಅವಧಿವನ್ನು ಕಡಿಮೆ ಮಾಡುವುದು ಮತ್ತು ವೇತನ ಹೆಚ್ಚಳ.

ವಿವಿಧ ಮೂಲಗಳಿಂದ ಇಲ್ಲಿಯವರೆಗೆ ಲಭ್ಯವಿರುವ ಸಂಗತಿಗಳು ಭಾರತದ ಕೈಗಾರಿಕಾ ಕಾರ್ಮಿಕರ ಮೊದಲ ಮುಷ್ಕರವು ಹೊಸದಾಗಿ ಪರಿಚಯಿಸಲಾದ ರೈಲ್ವೆಯಲ್ಲಿ ಸಂಭವಿಸಿತು ಎಂದು ತೋರಿಸುತ್ತವೆ. ಏಪ್ರಿಲ್-ಮೇ 1862 ರಲ್ಲಿ ಹೌರಾ ರೈಲ್ವೆ ನಿಲ್ದಾಣದ 1200 ಕಾರ್ಮಿಕರು ದಿನಕ್ಕೆ 8 ಗಂಟೆಗಳ ಕೆಲಸದ ಬೇಡಿಕೆಯ ಮೇರೆಗೆ ಈ ಮುಷ್ಕರದಲ್ಲಿ ಪಾಲ್ಗೊಂಡರು. ಭಾರತದಲ್ಲಿ ರೈಲ್ವೆಗಳನ್ನು ಮೊದಲು ಪರಿಚಯಿಸಿದ್ದು 1853 ರಲ್ಲಿ ಮಾತ್ರ ಎಂಬುದನ್ನು ನೆನಪಿನಲ್ಲಿಟ್ಟುಕೊಂಡು, ಉದ್ಯಮ ಪ್ರಾರಂಭವಾದ 8 ಅಥವಾ 9 ವರ್ಷಗಳಲ್ಲಿಯೇ ರೈಲ್ವೆ ಕಾರ್ಮಿಕರ ಒಂದು ವಿಭಾಗದ ಈ ಮುಷ್ಕರವು ದೊಡ್ಡ ಮೆಚ್ಚುಗೆಯನ್ನು ಉಂಟುಮಾಡದಿರಲು ಸಾಧ್ಯವಿಲ್ಲ. ಇದಲ್ಲದೆ, ಚಿಕಾಗೊ ಕಾರ್ಮಿಕರ ಮೇ-ದಿನದ ಗಮನಾರ್ಹ ಘಟನೆಗೆ 24 ವರ್ಷಗಳ ಮುಂಚಿತವಾಗಿಯೇ 'ದಿನಕ್ಕೆ 8 ಗಂಟೆಗಳ 'ಕೆಲಸಕ್ಕಾಗಿ ನಡೆದ ಭಾರತದ ಕಾರ್ಮಿಕರ ತುಕಡಿಯ ಈ ಮುಷ್ಕರವು ಒಂದು ದೊಡ್ಡ ಐತಿಹಾಸಿಕ ಆಸಕ್ತಿಯ ಘಟನೆಯಾಗಿದೆ.

ಕಲ್ಕತ್ತಾದಿಂದ ಪ್ರಕಟವಾಗುತ್ತಿದ್ದ ಬಂಗಾಳಿ ವಾರಪತ್ರಿಕೆಯಾದ ಸೊಂಪ್ರಕಾಶ್ ಮುಷ್ಕರದ ಬಗ್ಗೆ ಈ ಕೆಳಗಿನ ಸುದ್ದಿಗಳನ್ನು ಪ್ರಕಟಿಸಿತು.

"ಇತ್ತೀಚೆಗೆ ಹೌರಾ ರೈಲ್ವೆ ನಿಲ್ದಾಣದ 1200 ಕಾರ್ಮಿಕರು ಮುಷ್ಕರ ಹೂಡಿದ್ದಾರೆ. ಲೋಕೋಮೋಟಿವ್ ವಿಭಾಗದ ಈ ಕಾರ್ಮಿಕರು ದಿನಕ್ಕೆ 8 ಗಂಟೆಗಳ ಕಾಲ ಮಾತ್ರ ಕೆಲಸ ಮಾಡುತ್ತೇವೆ ಎಂದು ಹೇಳುತ್ತಾರೆ. ಆದರೆ ಅವರು 10 ಗಂಟೆಗಳ ಕಾಲ ಕೆಲಸ ಮಾಡಬೇಕಾಗಿದೆ. ಕೆಲವು ದಿನಗಳಿಂದ ಕೆಲಸ ನಿಲ್ಲಿಸಲಾಗಿದೆ. ರೈಲ್ವೆ ಕಂಪನಿ ಕಾರ್ಮಿಕರ ಬೇಡಿಕೆಯನ್ನು ಪೂರೈಸಬೇಕು, ಇಲ್ಲದಿದ್ದರೆ ಕೆಲಸಗಾರರು ಕೆಲಸ ಪ್ರಾರಂಭಿಸುವದಿಲ್ಲ."

ಆದಾಗ್ಯೂ, ಈ ಮುಷ್ಕರವನ್ನು ಭಾರತದ ಕಾರ್ಮಿಕ ವರ್ಗದ ಹೆಚ್ಚು ಸಂಘಟಿತ ಮತ್ತು ವರ್ಗ-ಪ್ರಜ್ಞೆಯ ಕಾರ್ಯಕ್ಷಮತೆಯ ಉದಾಹರಣೆಯೆಂದು ಭಾವಿಸಬಾರದು. ಅದು ನಡೆದಿದ್ದು, ಭಾರತದ ಶ್ರಮಜೀವಿಗಳ ಸಂಪೂರ್ಣ ಶೈಶವಾವಸ್ಥೆಯಲ್ಲಿ. ಸಂಘಟನೆ ಮತ್ತು ಪ್ರಜ್ಞೆ ಎರಡಕ್ಕೂ ಸಂಬಂಧಿಸಿದಂತೆ, ಆ ಅವಧಿಯ ತಪ್ಪಿಸಲಾಗದ ನ್ಯೂನತೆಯೊಂದಿಗೆ ಇದು ನಡೆಯಿತು.

ಈ ಮುಷ್ಕರಕ್ಕೆ ಮುಂಚಿತವಾಗಿ, ಕಲ್ಕತ್ತಾದಲ್ಲಿ 1823 ರಲ್ಲಿ ಪಲ್ಲಕ್ಕಿ-ಹೊರುವವರು ಮತ್ತು 1853 ರಲ್ಲಿ ನದಿ ಸಾರಿಗೆ ಪೋರ್ಟರ್‌ಗಳು ಕೆಲಸ ನಿಲ್ಲಿಸಿದ್ದರು. ತರುವಾಯ 1862ರ ಸೆಪ್ಟೆಂಬರ್‌ನಲ್ಲಿ, ಕಲ್ಕತ್ತಾದ ಎತ್ತು-ಬಂಡಿಗಳನ್ನು ಹೊಡೆಯುವವರು ಕೆಲಸವನ್ನು ನಿಲ್ಲಿಸಿದ್ದರು. ಅಂತೆಯೇ, ಬಾಂಬೆ ಮುನ್ಸಿಪಲ್ ಕಾರ್ಪೊರೇಶನ್‌ನ ಅಡಿಯಲ್ಲಿ ಮಾಂಸ ಮಾರಾಟಗಾರರು 1866 ರಲ್ಲಿ ಕೆಲಸವನ್ನು ನಿಲ್ಲಿಸಿದ್ದರು. ಅಹಮದಾಬಾದ್‌ನಲ್ಲಿ ಟೈಲರ್‌ಗಳು ಮತ್ತು ಇಟ್ಟಿಗೆ-ಗೂಡಿನ ಕಾರ್ಮಿಕರು 1873 ರಲ್ಲಿ ಕೆಲಸವನ್ನು ನಿಲ್ಲಿಸಿದರು. ಆದರೆ ವಿವಿಧ ವೃತ್ತಿಗಳಲ್ಲಿ ದುಡಿಯುವವರ ಈ ಎಲ್ಲಾ ಕೆಲಸದ ನಿಲುಗಡೆಯನ್ನು 1862 ರ ರೈಲ್ವೆ ಕಂಪನಿ ಕಾರ್ಮಿಕರ ಮುಷ್ಕರದಂತಹ ಆಧುನಿಕ ಕೈಗಾರಿಕೆ ಕಾರ್ಮಿಕರ ಮುಷ್ಕರದೊಂದಿಗೆ ಹೋಲಿಕೆ ಮಾಡುವ ಗೊಂದಲಕ್ಕೆ ಇಳಿಯಬಾರದು.

ಇದರ ನಂತರ, 1877 ರಲ್ಲಿ ನಾಗ್ಪುರದ ಎಂಪ್ರೆಸ್ ಗಿರಣಿಗಳ ನೇಕಾರರಿಂದ ವೇತನ ದರಗಳ ಕುರಿತು ಮತ್ತೊಂದು ದೊಡ್ಡ ಮುಷ್ಕರ ಸಂಭವಿಸಿತು. ಆದರೆ ಈ ಮುಷ್ಕರ ಕುರಿತು ಹೆಚ್ಚಿನ ವಿವರಗಳು ಲಭ್ಯವಿಲ್ಲ.

ಲಭ್ಯವಿರುವ ದಾಖಲೆಗಳ ಪ್ರಕಾರ 1880 ರಿಂದ ಶತಮಾನದ ಅಂತ್ಯದವರೆಗೆ ಮುಷ್ಕರಗಳು ಆಗಾಗ್ಗೆ

ಪುಟ 14 ನೋಡಿ

ಇಲ್ಲಿಯವರೆಗೆ ಲಭ್ಯವಿರುವ ಸಂಗತಿಗಳು ಭಾರತದ ಕೈಗಾರಿಕಾ ಕಾರ್ಮಿಕರ ಮೊದಲ ಮುಷ್ಕರವು ಹೊಸದಾಗಿ ಪರಿಚಯಿಸಲಾದ ರೈಲ್ವೆಯಲ್ಲಿ ಸಂಭವಿಸಿತು ಎಂದು ತೋರಿಸುತ್ತವೆ. ಏಪ್ರಿಲ್-ಮೇ 1862 ರಲ್ಲಿ ಹೌರಾ ರೈಲ್ವೆ ನಿಲ್ದಾಣದ 1200 ಕಾರ್ಮಿಕರು ದಿನಕ್ಕೆ 8 ಗಂಟೆಗಳ ಕೆಲಸದ ಬೇಡಿಕೆಯ ಮೇರೆಗೆ ಈ ಮುಷ್ಕರದಲ್ಲಿ ಪಾಲ್ಗೊಂಡರು. ಚಿಕಾಗೊ ಕಾರ್ಮಿಕರ ಮೇ-ದಿನದ ಹೋರಾಟದ 24 ವರ್ಷಗಳ ಮುಂಚಿತವಾಗಿಯೇ 8 ಗಂಟೆಗಳ ಕೆಲಸಕ್ಕಾಗಿ ನಡೆದ ಭಾರತದ ಕಾರ್ಮಿಕರ ತುಕಡಿಯ ಈ ಮುಷ್ಕರವು ಒಂದು ದೊಡ್ಡ ಐತಿಹಾಸಿಕ ಆಸಕ್ತಿಯ ಘಟನೆಯಾಗಿದೆ.



ನಿರುದ್ಯೋಗದಲ್ಲಿ ತೀವ್ರ ಏರಿಕೆ, ವ್ಯಾಪಾರ ಕೊರತೆಯಲ್ಲೂ ಏರಿಕೆ-ಜಿಡಿಪಿಯಲ್ಲಿ ಭಾರೀ ಇಳಿಕೆ

2020 ಕೊನೆಗೊಳ್ಳುತ್ತಿದ್ದಂತೆ ದೇಶದಲ್ಲಿ ನಿರುದ್ಯೋಗದ ದರ 9.1ಶೇ.ಕ್ಕೆ ಏರಿದೆ. ಇದು ಕಳೆದ ಆರು ತಿಂಗಳಲ್ಲೇ ಅತಿ ಹೆಚ್ಚು ಎಂದು ಉದ್ಯೋಗ-ನಿರುದ್ಯೋಗದ ಬಗ್ಗೆ ಮತ್ತು ಒಟ್ಟಾರೆಯಾಗಿ ದೇಶದ ಆರ್ಥಿಕ ಚಟುವಟಿಕೆಗಳ ಬಗ್ಗೆ ನಿರಂತರ ವೀಕ್ಷಣೆ ನಡೆಸುವ ಸಂಸ್ಥೆ ಸಿ.ಎಂ.ಐ.ಇ. ಹೇಳಿದೆ. ನವಂಬರ್ ತಿಂಗಳಲ್ಲಿ ಇದು 6.5ಶೇ. ಇತ್ತು, ಅಂದರೆ ನಿರುದ್ಯೋಗದಲ್ಲಿ ತೀವ್ರ ಏರಿಕೆ ಆಗಿದೆ.

ಈ ಏರಿಕೆ ಕಳೆದ ಆರು ತಿಂಗಳಲ್ಲೇ ಅತಿ ಹೆಚ್ಚು ಎನ್ನಲಾಗಿದೆ. ಜೂನ್ 2020ರಲ್ಲಿ ಲಾಕ್‌ಡೌನಿನ ಪರಿಣಾಮವಾಗಿ ಇದು 10.99ಶೇ.,.ಕ್ಕೆ ಏರಿತು. ಆಮೇಲೆ ಇಳಿಯುತ್ತ ಬಂತು. ಈಗ, ಪ್ರಧಾನಿಗಳು ಸೇರಿದಂತೆ ಆಳುವ ಮಂದಿ ದೇಶದ ಆರ್ಥಿಕ ವ್ಯವಸ್ಥೆ ನಿರೀಕ್ಷಿಸಿದ್ದಕ್ಕಿಂತ ವೇಗವಾಗಿ ಸುಧಾರಿಸುತ್ತಿದೆ ಎಂದಿರುವ ಬೆನ್ನಲ್ಲೇ ಈ ಅಂಕಿ-ಅಂಶ ಪ್ರಕಟವಾಗಿದೆ.

ಡಿಸೆಂಬರಿನಲ್ಲಿ ನಿರುದ್ಯೋಗಿಗಳ ಸಂಖ್ಯೆ 3.87 ಕೋಟಿಗೇರಿದೆ. ನವಂಬರಿನಲ್ಲಿ ಇದು 2.74 ಕೋಟಿ ಇತ್ತು. ಈ ಒಂದು ತಿಂಗಳಲ್ಲಿ ಉದ್ಯೋಗಾಕಾಂಕ್ಷಿಗಳ ಸಂಖ್ಯೆ ಏರಿದೆ, ಆದರೆ ಉದ್ಯೋಗಗಳ ಸಂಖ್ಯೆ 39.36 ಕೋಟಿಯಿಂದ 38.88 ಕೋಟಿಗೆ ಇಳಿದಿದೆ.

ವ್ಯಾಪಾರ ಕೊರತೆಯಲ್ಲೂ ಏರಿಕೆ

ಆಮದುಗಳು 7 ಶೇ.ದಷ್ಟು ಹೆಚ್ಚಿ, ರಫ್ತುಗಳು 1ಶೇ.ದಷ್ಟು ಇಳಿದಿದ್ದರಿಂದಾಗಿ ಕಳೆದ ಡಿಸೆಂಬರ್(2019)ನಲ್ಲಿ 12.5 ಬಿಲಿಯ ಡಾಲರುಗಳಷ್ಟಿದ್ದ ಭಾರತದ ವ್ಯಾಪಾರ ಕೊರತೆ ಈ ಡಿಸೆಂಬರ್ 2020ರಲ್ಲಿ 15.7 ಬಿಲಿಯ ಡಾಲರುಗಳಿಗೆ ಏರಿದೆ. ಅಂದರೆ 26ಶೇ.ದಷ್ಟು.

ಗಮನಿಸಬೇಕಾದ ಸಂಗತಿಯೆಂದರೆ ಇದು ದೇಶದೊಳಗೆ ಸತತವಾಗಿ ಏರುಬೆಲೆಗಳನ್ನು ಕಾಣುತ್ತಿರುವ ಪೆಟ್ರೋಲಿಯಂ ಉತ್ಪನ್ನಗಳ ಆಮದಿನಿಂದಲ್ಲ, ವಾಸ್ತವವಾಗಿ ಅದು ಆಮದು ಪ್ರಮಾಣ ಅತಿ ಹೆಚ್ಚಿನ ಪ್ರಮಾಣದಲ್ಲಿ ಇಳಿದಿರುವ ಸರಕಾಗಿದೆ. ಆಮದುಗಳು ಹೆಚ್ಚಲು ಕಾರಣ ಮುಖ್ಯವಾಗಿ ಚಿನ್ನದ ಆಮದಿನಲ್ಲಿ ಅಗಿರುವ ವಿಪರೀತ ಹೆಚ್ಚಳ, 82ಶೇ. ದಷ್ಟು.(ಹಿಂದುಸ್ತಾನ್ ಟೈಮ್ಸ್, ಜನವರಿ2)

ಇದರ ಅರ್ಥ ಸೂಪರ್ ಶ್ರೀಮಂತರು ತಮ್ಮ ಸೂಪರ್ ಲಾಭಗಳನ್ನು ಉತ್ಪಾದಕ ಪ್ರಕ್ರಿಯೆಗಳಲ್ಲಿ ತೊಡಗಿಸುತ್ತಿಲ್ಲ, ಬದಲಿಗೆ ಅವನ್ನು ಚಿನ್ನದ ರೂಪದಲ್ಲಿ ಪೇರಿಸಿಡುತ್ತಿದ್ದಾರೆ. ಕಾರಣ ಸ್ಪಷ್ಟ. ಜನಸಾಮಾನ್ಯರ ಖರೀದಿ ಸಾಮರ್ಥ್ಯ ಇಳಿದಿರುವುದರಿಂದ ಉತ್ಪಾದಿಸಿದ ಸರಕುಗಳಿಗೆ ದೇಶದೊಳಗೆ ಬೇಡಿಕೆ ಬಹಳಷ್ಟು ಇಳಿದಿರುವ ಪರಿಸ್ಥಿತಿ ಇದೆ. ಆದರೂ ಸರಕಾರದ ಇವಿವಿಧ ಉತ್ತೇಜನಾ ಪ್ಯಾಕೇಜುಗಳ ಮುಖ್ಯ ಫಲಾನುಭವಿಗಳು ಈ ಮಂದಿಯೇ!

ಜಿಡಿಪಿ ಬೆಳವಣಿಗೆ ದರ (–)7.7ಶೇ.

ಜನವರಿ 7ರಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿ(ಎನ್‌ಎಸ್.ಒ.) 2020–21ರಲ್ಲಿ ಜಿಡಿಪಿ(ಒಟ್ಟು ಆಂತರಿಕ ಉತ್ಪನ್ನ) ಬೆಳವಣಿಗೆಯ ಮೊದಲ ಮುಂಗಡ ಅಂದಾಜು ಅಂಕೆ-ಸಂಖ್ಯೆಗಳನ್ನು ಬಿಡುಗಡೆ ಮಾಡಿದೆ. ಇದರ ಪ್ರಕಾರ ಜಿಡಿಪಿ ಬೆಳೆಯುವ ಬದಲು 7.7ಶೇ.ದಷ್ಟು ಸಂಕುಚನಗೊಳ್ಳಬಹುದು ಎಂದು ಅಂದಾಜು ಮಾಡಲಾಗಿದೆ. 2019–20ರಲ್ಲಿ ಇದು 4.2ಶೆ.ದಷ್ಟು ಬೆಳವಣಿಗೆ ದಾಖಲಿಸಿತ್ತು. ಆಂದರೆ ಒಟ್ಟು 11.7ಶೇ.ದಷ್ಟು ಕುಸಿತ ಕಾಣಲಿದೆ.

2019–20ರ ಒಟ್ಟು ಆಂತರಿಕ ಉತ್ಪನ್ನದ ತಾತ್ಕಾಲಿಕ ಅಂದಾಜು ರೂ. 145.66 ಲಕ್ಷ ಕೊಟಿಯಿದ್ದರೆ, 2020–21 ರ ಒಟ್ಟು ಉತ್ಪನ್ನ ರೂ. 134.40 ಲಕ್ಷ ಕೋಟಿಗೆ ಇಳಿಯಬಹುದು ಎಂದು ಅಂದಾಜು ಮಾಡಲಾಗಿದೆ.

ತಯಾರಿಕಾ ವಲಯ ಕಳೆದ ಹಣಕಾಸು ವರ್ಷದಲ್ಲಿ 0.3ಶೇ.ದಷ್ಟು ಅಲ್ಪ ಪ್ರಮಾಣದಲ್ಲಿ ಹಿಗ್ಗಿದ್ದರೆ, 2020–21ರಲ್ಲಿ ಅದು 9.4ಶೇ.ದಷ್ಟು ಭಾರೀ ಪ್ರಮಾಣದಲ್ಲಿ ಕುಗ್ಗಬಹುದು ಎಂದು ಅಂದಾಜು ಮಾಡಲಾಗಿದೆ. ಅದೇ ರೀತಿಯಲ್ಲಿ ಗಣಿಗಾರಿಕೆ, ವ್ಯಾಪಾರ, ಹೊಟೆಲ್ ಉದ್ಯಮ, ಸಾರಿಗೆ, ಸಂಪರ್ಕ ವಲಯದಲ್ಲೂ ಅರ್ಥವ್ಯವಸ್ಥೆ ಹಿಗ್ಗುವ ಬದಲು ಕುಗ್ಗಿದೆ. 21.4ಶೇ.ದಷ್ಟು.

ಕೃಷಿ ವಲಯ ಮಾತ್ರವೇ 3.4ಶೇ.ದಷ್ಟು ಬೆಳವಣಿಗೆ ದಾಖಲಿಸಿದೆ. ಇದು ಕೂಡ ಕಳೆದ ವರ್ಷಕ್ಕೆ ಹೋಲಿಸಿದರೆ ಇಳಿಕೆಯೇ. ಆಗ ಅದು 4ಶೇ. ಬೆಳವಣಿಗೆ ದಾಖಲಿಸಿತ್ತು.

ಒಟ್ಟು ಮೌಲ್ಯ ಸೇರ್ಪಡೆ(ಜಿವಿಎ) 2019–20ರಲ್ಲಿ 3,9ಶೇ. ಹೆಚ್ಚಿದ್ದರೆ ಈ ವರ್ಷ ಅದು (–) 9,5ಶೇ. ಎಂದು ಅಂದಾಜು.

ಕಳೆದ ಹಣಕಾಸು ವರ್ಷದಲ್ಲಿ ಖಾಸಗಿ ಬಳಕೆ ಪ್ರಮಾಣ ಹಿಂದಿನ ವರ್ಷಕ್ಕೆ ಹೋಲಿಸಿದರೆ 5.ಶೇ.ದಷ್ಟು ಏರಿದ್ದರೆ, 2020–21ರಲ್ಲಿ 2019–20ಕ್ಕಿಂತ 9.5ಶೇ.ದಷ್ಟು ಕಡಿಮೆಯಾಗಿದೆ. ಸರಕಾರೀ ವೆಚ್ಚದ ಪ್ರಮಾಣವೂ 2019–20ರಲ್ಲಿ ಅದರ ಹಿಂದಿನ ವರ್ಷಕ್ಕಿಂತ 11.8ಶೇ.ದಷ್ಟು ಹೆಚ್ಚಿದ್ದರೆ, ಈ ಬಾರಿ ಹಿಂದಿನ ವರ್ಷಕ್ಕಿಂತ 5.8ಶೇ.ದಷ್ಟು ಏರಬಹುದು ಎಂದು ಅಂದಾಜು ಮಾಡಲಾಗಿದೆ.

ರಿಝರ್ವ್ ಬ್ಯಾಂಕ್ ಕೂಡ ಜಿಡಿಪಿ ದರ (–)7.5ಶೇ. ಇರಬಹುದು ಎಂದು ಅಂದಾಜು ಮಾಡಿದೆ. ಆದರೆ ಐಎಂಎಫ್ ಇದು (–) 9.6ಶೇ. ಎಂದು ಅಂದಾಜು ಮಾಡಿದೆ, ಏಕೆಂದರೆ ಈ ಅವಧಿಯಲ್ಲಿ ದೇಶದ ಅನೌಪಚಾರಿಕ ವಲಯ ತೀವ್ರ ಆದಾಯ ನಷ್ಟವನ್ನು ಅನುಭವಿಸಿದೆ ಎಂದು ಅದು ಹೇಳಿದೆ.

ಈ ಎಲ್ಲ ಋಣಾತ್ಮಕ ಅಂಕೆ-ಸಂಖ್ಯೆಗಳಿಗೆ ಈಗಾಗಲೇ ಅರ್ಥಶಾಸ್ತ್ರಜ್ಞರು ಬಹಳ ಸಲ ಹೇಳಿರುವಂತೆ ಕೊರೊನ ಮತ್ತು ಅದರ ಹೆಸರಲ್ಲಿ ಹೇರಿದ ಕಠಿಣ ಲಾಕ್ ಡೌನ್ ಮಾತ್ರವೇ ಕಾರಣವಲ್ಲ.

ನ್ಯೂ ಇಂಡಿಯಾ ನ್ಯೂಸ್



ಖುಶಿಪಡಬೇಕಪ್ಪಾ ವಿಕಾಸ್! ನಿನಗೆ ಹೊಸ 'ವಿಸ್ತಾ'ಗಳು ತೆರೆದುಕೊಳ್ಳುತ್ತಿವೆ
ವ್ಯಂಗ್ಯಚಿತ್ರ: ಸಂದೀಪ ಅಧ್ವರ್ಯು, ಟೈಮ್ಸ್ ಆಫ್ ಇಂಡಿಯ



... ಅವರ ಕಣ್ಣಿಂದ ಒಂದು ತೊಟ್ಟೂ ಇಲ್ಲ
ವ್ಯಂಗ್ಯಚಿತ್ರ: ಅಲೋಕ್ ನಿರಂತರ್

ದಿಲ್ಲಿಯ ಸುತ್ತ ನಾಲ್ಕು ಗಡಿಗಳಲ್ಲಿ ಒಂದೂವರೆ ತಿಂಗಳಿಂದ ಕೂತಿರುವ ರೈತರು ಈ ವಾರ ಕೊರೆಯುವ ಚಳಿಯೊಂದಿಗೆ ಸುರಿಯುವ ಮಳೆಯನ್ನೂ ಎದುರಿಸಬೇಕಾಗಿ ಬಂತು–ಸುದ್ದಿ



ಮಾತುಕತೆಗಳು
ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ

ಬ್ಯಾಂಕ್ ಸುಸ್ತಿ ಸಾಲಗಳ ಪರೋಕ್ಷ 'ಮನ್ನಾ' ದಲ್ಲಿ ಏರಿಕೆ!

ಮೋದಿ ನೇತೃತ್ವದ ಸರಕಾರಗಳ ಅವಧಿಯಲ್ಲಿ ಬ್ಯಾಂಕುಗಳ ಸುಸ್ತಿ ಸಾಲಗಳ ಪ್ರಮಾಣ ಹಿಂದಿನ ಹಣಕಾಸು ವರ್ಷಕ್ಕೆ ಹೋಲಿಸಿದರೆ ಪ್ರಸಕ್ತ ಹಣಕಾಸು ವರ್ಷದಲ್ಲಿ ಇಳಿದಿದೆ. ಆದರೆ ಇದಕ್ಕೆ ಒಂದು ಮುಖ್ಯ ಕಾರಣ ಬ್ಯಾಂಕ್‌ಗಳ ಬ್ಯಾಲನ್ಸ್ ಶಿಟುಗಳನ್ನು 'ಸ್ವಚ್ಛ'ಗೊಳಿಸಲು ಹೆಚ್ಚಿನ ಪ್ರಮಾಣದ 'ರೈಟ್‌ಆಫ್'" ಗಳನ್ನು ಮಾಡಿರುವುದು!(ದಿ ಹಿಂದು, ಜನವರಿ 6)

ಸುಸ್ತಿಸಾಲಗಳ ಪ್ರಮಾಣ ಮಾರ್ಚ್ 2015ರಲ್ಲಿ 4.3ಶೇ.ಇತ್ತು. ಇದು 2016ರಲ್ಲಿ 7.5ಶೇ., 2017ರಲ್ಲಿ 9.3ಶೇ. ಮತ್ತು 2018ರಲ್ಲಿ 11.3ಶೇ.ಕ್ಕೇರಿತು. ನಂತರ ಇಳಿಕೆ ಆರಂಭವಾಗಿ 2019ರಲಿ 9.1ಶೇ. ಮತ್ತು ಮಾರ್ಚ್ 2020ರಲ್ಲಿ 8.2ಶೇ. ಆಯಿತು. ಸಪ್ಟಂಬರ್ 2020ರಲ್ಲಿ ಇದೀಗ 7.5ಶೇ. ಆಗಿದೆ.

ಆದರೆ ಈ ಇಳಿಕೆಗೆ ಕಾರಣ ಸುಸ್ತಿ ಸಾಲಗಾರರ ಕೃಪೆಯಲ್ಲ, ಬ್ಯಾಂಕುಗಳ, ವಾಸ್ತವವಾಗಿ ಆಳುವ ಮಂದಿಯ ಕೃಪೆ. 2014ರಲ್ಲಿ 60,197 ಕೋಟಿ ರೂ. ರೈಟ್ ಆಫ್ ಅಗಿದ್ದರೆ 2018–19ರಲ್ಲಿ ಇದು 2,36,725 ಕೋಟಿ ರೂ.ಗೆ ಮತ್ತು 2019–20ರಲ್ಲಿ 2,37, 876 ಕೋಟಿ ರೂ.ಗೆ ಏರಿತು. 2014ರಿಂದ ಇದುವರೆಗೆ ಒಟ್ಟು 10,10,553 ಕೋಟಿ ರೂ.ಗಳಷ್ಟು 'ರೈಟ್ ಆಫ್' ಆಗಿದೆ! ಇದರ ಪ್ರಮುಖ ಫಲಾನುಭವಿಗಳು ಆಳುವವರ ಬಂಟ ಬಂಡವಾಳಿಗರು ಎಂದು ಬೇರೆ ಹೇಳಬೇಕಾಗಿಲ್ಲ.

3 ಅಂಬಾನಿ ಕಂಪನಿಗಳಿಂದ ಹತ್ತು ಪಟ್ಟು ವಂಚನೆ?

ಅನಿಲ್ ಅಂಬಾನಿಯ ಒಡೆತನದ ಮುರು ಕಂಪನಿಗಳ ಖಾತೆಗಳನ್ನು–ರಿಲಯಂಸ್ ಕಮ್ಯುನಿಕೇಷನ್ಸ್, ರಿಲಯಂಸ್ ಇನ್‌ಫ್ರಾಟೆಲ್ ಮತ್ತು ರಿಲಯಂಸ್ ಟೆಲಿಕಾಂ– ಸ್ಟೇಟ್ ಬ್ಯಾಂಕ್ ಆಫ್‌ಇಂಡಿಯಾ ಸೇರಿದಂತೆ ಮೂರು ಸಾರ್ವಜನಿಕ ವಲಯದ ಬ್ಯಾಂಕುಗಳು ಕುಟಿಲತೆಗಳಿಂದ ಕೂಡಿದೆ ಎಂದು ವರ್ಗೀಕರಿಸಿವೆ ಎಂದು ವರದಿಯಾಗಿದೆ. ಈ ಮೂರು ಕಂಪನಿಗಳು ಒಟ್ಟಾಗಿ ರೂ.86,188 ಕೋಟಿ. ತೆರಬೇಕಾಗಿದೆ. (ಬಿಸಿನೆಸ್ ಇನ್‌ಸೈಡರ್.ಇನ್, ಡಿ.31)ವಿಜಯ ಮಲ್ಯ ಸಾಲ ಭಾಕಿ ರೂ.9000 ಕೋಟಿಯಾದರೆ, ನೀರವ್ ಮೋದಿಯದ್ದು ರೂ. 7409 ಕೋಟಿ. ಅಂದರೆ ಅನಿಲ್ ಅಂಬಾನಿ ಸಾಲವವಂಚನೆ ಇದರ ಹತ್ತು ಪಟ್ಟು!

ಈ ವ್ಯಕ್ತಿಯ ಮೂಲಕವೇ ಈ ಸರಕಾರ ರಫೆಲ್ ಯುದ್ಧವಿಮಾನ ವ್ಯವಹಾರ ಕುದುರಿಸಿದ್ದು, ಬಹಳ ವರ್ಷಗಳಿಂದ ಈ ಕ್ಷೇತ್ರದಲ್ಲಿ ಸಾಧನೆ ಮಾಡಿದ್ದ ಹೆಚ್.ಎ.ಎಲ್.ನ್ನು ಹೊರತಳ್ಳಿದ್ದು ಎಂಬುದು ಗಮನಾರ್ಹ.



ಕ್ಷಮಿಸಿ ಸರ್, ಅಮೆರಿಕಾದ ಸುದ್ದಿಯ ಬದಲು ದಿಲ್ಲಿ ಗಲಭೆಯ ರೆಕಾರ್ಡಿಂಗ್ ಹಾಕಿದೆ
ವ್ಯಂಗ್ಯಚಿತ್ರ: ಮಂಜುಲ್,
ಮುಂಬೈ ಮೇರಿ ಜಾನ್

ಜನವರಿ 6 ದಂದು ವಾಶಿಂಗ್ಟನ್‌ನಲ್ಲಿ ಟ್ರಂಪ್ ಬೆಂಬಲಿಗರು ನಡೆಸಿದ ರಂಪಾಟ ಮತ್ತು ಹಿಂಸಾಚಾರದ ಸುದ್ದಿ ಕೇಳಿ ತನಗೆ ಅತೀವ ವ್ಯಥೆಯಾಗಿದೆ ಎಂದು ಪ್ರಧಾನ ಮಂತ್ರಿ ಮೋದಿ ಹೇಳಿದ್ದಾರೆ–ಸುದ್ದಿ


ಅಮೆರಿಕನ್ನರು ಪ್ರಜಾಪ್ರಭುತ್ವಕ್ಕೆ ಗೌರವ ನೀಡಬೇಕು– ಮೋದಿ

ತೀರಾ ಅತಿಯಾಯ್ತು!
–ಭಾರತದ 'ಪ್ರಜಾಪ್ರಭುತ್ವ



ವ್ಯಂಗ್ಯಚಿತ್ರ: ಅಲೋಕ್ ನಿರಂತರ್

ಇದೀಗ ರೈತಾಪಿ ಜನಗಳ ಅಳಿವು-ಉಳಿವಿನ ಪ್ರಶ್ನೆ



<u>ಜನಸಾಮಾನ್ಯರ ಬಗ್ಗೆ ಸಂವೇದನಾಹೀನತೆಯ ವಿಷಯದಲ್ಲಿ ಹಿಂದಿನ ಎಲ್ಲ ಸರ್ಕಾರಗಳನ್ನೂ ಏಕ್‌ದಂ ಮೀರಿಸಿರುವ ಮೋದಿ ಸರಕಾರ ಜಾರಿಗೆ ತಂದಿರುವ ಮೂರೂ ಕೃಷಿ ಕಾನೂನುಗಳು ಕೃಷಿ ವಲಯದಲ್ಲಿ ನವ-ಉದಾರವಾದಿ ಅಜೆಂಡಾವನ್ನು ಅದರ ಪರಾಕಾಷ್ಠೆಗೆ ಕೊಂಡೊಯ್ಯುತ್ತವೆ. ಈ ಕಾರಣದಿಂದಾಗಿಯೇ ಪ್ರತಿಭಟನಾ ನಿರತ ರೈತರು ಮತ್ತು ಸರ್ಕಾರದ ನಡುವೆ, ಈ ಕಾನೂನುಗಳ ವ್ಯಾಪ್ತಿಯಲ್ಲಿ, ಏಕಾಭಿಪ್ರಾಯ ಮೂಡುವುದು ಸಾಧ್ಯವಿಲ್ಲ. ರೈತರ ಪ್ರತಿಭಟನೆಗಳಲ್ಲಿ ಒಳಗೊಂಡಿರುವ ಪ್ರಶ್ನೆಗಳು, ಆ ಮೂರು ಮಸೂದೆಗಳ ಇದೋ, ಅದೋ ಪರಿಚ್ಛೇದವನ್ನು ಮೀರಿ ಆಚೆ ಬಹಳ ದೂರ ಹೋಗುತ್ತವೆ. ಇವು ರೈತಾಪಿಗಳ ಉಳಿವು-ಅಳಿವಿಗೇ ಸಂಬಂಧಪಟ್ಟ ಪ್ರಶ್ನೆಗಳು.</u>

ಪ್ರೊ. ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ. ನಾಗರಾಜ್

ತಮ್ಮನ್ನು ಬಾಧಿಸುತ್ತಿರುವ ನೈಜ ಸಮಸ್ಯೆಯ ಬಗ್ಗೆ, ಅಂದರೆ, ತಾವು ರೈತರಾಗಿ ಬದುಕಿ ಉಳಿಯಲು ಎದುರಾಗಿರುವ ಸಂಚಕಾರವನ್ನು ಮತ್ತು ತಂಟೆ-ತಕರಾರುಗಳನ್ನು ಸ್ಪಷ್ಟವಾಗಿ ಗುರುತಿಸಿರುವ ರೈತರು ಅದರ ಬಗ್ಗೆ ಪ್ರತಿಭಟಿಸಲು ದೆಹಲಿಯ ಗಡಿಭಾಗದಲ್ಲಿ ಜಮಾಯಿಸಿದ್ದಾರೆ. ನವ-ಉದಾರವಾದದ ಹೊಡೆತದಿಂದ ದೇಶವು ತತ್ತರಿಸುತ್ತಿದ್ದರೂ ಸಹ, ರೈತರನ್ನು ಜೀವಂತವಾಗಿ ಇಟ್ಟುಕೊಳ್ಳುವಂತಹ ಒಂದು ಏರ್ಪಾಟು ಇಲ್ಲಿಯವರೆಗೂ ಜಾರಿಯಲ್ಲಿತ್ತು. ರೈತರು ಬದುಕಿ ಉಳಿಯಲು ಆಧಾರ ಒದಗಿಸಿದ್ದ ಈ ಏರ್ಪಾಟನ್ನು ಸಂಪೂರ್ಣವಾಗಿ ಅಳಿಸಿ ಹಾಕುವುದಕ್ಕಾಗಿಯೇ ಮೋದಿ ಸರ್ಕಾರವು ಮೂರು ಕೃಷಿ ಕಾನೂನುಗಳು ಜಾರಿಗೆ ತಂದಿದೆ. ಈ ಮೂರೂ ಕಾನೂನುಗಳನ್ನು ಕೃಷಿ ವಲಯದಲ್ಲಿ ನವ-ಉದಾರವಾದಿ ಅಜೆಂಡಾವನ್ನು ಅದರ ಪರಾಕಾಷ್ಠೆಗೆ ಕೊಂಡೊಯ್ಯುತ್ತವೆ. ಈ ಕಾರಣದಿಂದಾಗಿಯೇ ಪ್ರತಿಭಟನಾ ನಿರತ ರೈತರು ಮತ್ತು ಸರ್ಕಾರದ ನಡುವೆ, ಈ ಕಾನೂನುಗಳ ವ್ಯಾಪ್ತಿಯಲ್ಲಿ, ಏಕಾಭಿಪ್ರಾಯ ಮೂಡುವುದು ಸಾಧ್ಯವಿಲ್ಲ. ಆದ್ದರಿಂದ, ಈ ಕಾನೂನುಗಳನ್ನು ರದ್ದುಮಾಡಲೇ ಬೇಕಾಗುತ್ತದೆ.

ಈ ಮೂರೂ ಕೃಷಿ ಕಾನೂನುಗಳು ಸ್ವಾತಂತ್ರ್ಯಾನಂತರದಲ್ಲಿ ಮೊಟ್ಟ ಮೊದಲ ಬಾರಿಗೆ ಕೃಷಿಯನ್ನು ಲಂಗುಲಗಾಮಿಲ್ಲದ ಬಂಡವಾಳಶಾಹಿಗಳು ಅತಿಕ್ರಮಿಸಲು ಅನುವು ಮಾಡಿಕೊಡುತ್ತವೆ. ಈ ಬದಲಾವಣೆಗಳಿಂದಾಗಿ, ದೊಡ್ಡ ದೊಡ್ಡ ಕಂಪನಿಗಳು, ಅಂದರೆ, ಅಂಬಾನಿ ಮತ್ತು ಅದಾನಿಯಂತಹ ಕಾರ್ಪೊರೇಟ್‌ಗಳು ಹಾಗೂ ಬಹುರಾಷ್ಟ್ರೀಯ ಕೃಷಿ ಸಂಬಂಧಿತ ಉದ್ದಿಮೆಗಳು ಸಹಜವಾಗಿಯೇ ಬಹು ದೊಡ್ಡ ಫಲಾನುಭವಿಗಳಾಗುತ್ತವೆ. ಈ ಬದಲಾವಣೆಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕಾದರೆ ಮೊದಲು ಒಂದು ವ್ಯತ್ಯಾಸವನ್ನು ಗುರುತಿಸುವುದು ಅವಶ್ಯವಾಗುತ್ತದೆ.

ಬಂಡವಾಳಶಾಹಿ ಮಾದರಿಗೆ ಅನುಸಾರವಾಗಿ ಭಾರತದ ಕೃಷಿಯನ್ನು ಅಭಿವೃದ್ಧಿಪಡಿಸುವ ಬಗ್ಗೆ ಎಪ್ಪತ್ತರ ದಶಕದಲ್ಲೇ ಸಾಕಷ್ಟು ಚರ್ಚೆಗಳು ನಡೆದವು. ತರುವಾಯ, ಬಂಡವಾಳಶಾಹಿ ಮಾದರಿಯ ಕೆಲವು ಪ್ರವೃತ್ತಿಗಳು ಕೃಷಿ ವಲಯದಲ್ಲಿ ಆಚರಣೆಗೆ ಬಂದವು. ಅರ್ಧ ಶತಮಾನದಷ್ಟು ಹಿಂದೆಯೇ ಕೃಷಿ ವಲಯದಲ್ಲಿ ಬಂಡವಾಳಶಾಹಿ ಪ್ರವೃತ್ತಿಗಳು ಕಾಲಿಟ್ಟಿರುವಾಗ, ಇಷ್ಟೊಂದು ಗೊಂದಲವನ್ನು ಈಗ ಎಬ್ಬಿಸಬೇಕು ಏಕೆ ಎಂದು ಯಾರಾದರೂ ಆಶ್ಚರ್ಯಪಡಬಹುದು. ಅಷ್ಟು ಹಿಂದೆಯೇ ಬಂಡವಾಳಶಾಹಿಯು ಕೃಷಿ ವಲಯವನ್ನು ಪ್ರವೇಶಿಸಿದರೂ ಸಹ ಕೃಷಿಯು ಕಣ್ಮರೆಯಾಗಿಲ್ಲ ಎಂದಾದರೆ, ಈಗ ಅದು ಕಣ್ಮರೆಯಾಗುತ್ತದೆ ಎಂದು ಗೋಳಾಡುವುದುಂಟೇ?

ಈ ಸಂದರ್ಭದಲ್ಲಿ ಗಮನಿಸಬೇಕಾದ ಒಂದು



ಬಹಳ ಮುಖ್ಯವಾದ ಅಂಶವೆಂದರೆ, ಆಗ ಕೃಷಿಯಲ್ಲಿ ಉಂಟಾದ ಬಂಡವಾಳಶಾಹಿ ಮಾದರಿಯ ಅಭಿವೃದ್ಧಿಯು ಕೃಷಿ-ಅರ್ಥವ್ಯವಸ್ಥೆಗೆ ಆಂತರಿಕ ವಾಗಿತ್ತು. ಅಂದರೆ, ಬಂಡವಾಳಶಾಹಿಯ ಈ ಮಾದರಿಯು ರೈತ ಕೃಷಿ ಮತ್ತು ಭೂಮಾಲಿಕ ಬಂಡವಾಳಶಾಹಿ ಕೃಷಿ ಈ ಎರಡೂ ಪದ್ಧತಿಗಳ ಒಂದು ಮಿಶ್ರಣವಾಗಿತ್ತು. ಈ ಮಾದರಿಯ ಅಭಿವೃದ್ಧಿಗೆ ನೆರವಾದ ಅಂದಿನ



ಆಳ್ವಿಕೆಯು ಹೊರಗಿನ ಬಂಡವಾಳಶಾಹಿಗಳು ಕೃಷಿ ವಲಯಕ್ಕೆ ಕಾಲಿಡದಂತೆ ನೋಡಿಕೊಂಡಿತು. ಈ ಆಳ್ವಿಕೆಯು, ಭೂಮಿ ಒಡೆತನದ ಮಿತಿ, ಕನಿಷ್ಠ ಬೆಂಬಲ ಬೆಲೆ, ಧಾನ್ಯಗಳ ಖರೀದಿ (procurement), ಸಾರ್ವಜನಿಕರಿಗೆ ಸಬ್ಸಿಡಿ ದರದಲ್ಲಿ ಧಾನ್ಯಗಳ ವಿತರಣೆ ಮುಂತಾದ ಹಲವು ಕ್ರಮಗಳನ್ನು ಒಳಗೊಂಡಿತ್ತು. ಸಂಕ್ಷಿಪ್ತವಾಗಿ ಹೇಳುವುದಾದರೆ, ಒಂದು ಕಡೆಯಲ್ಲಿ ರೈತ ಉತ್ಪಾದಕರು ಮತ್ತು ಮತ್ತೊಂದೆಡೆಯಲ್ಲಿ ಬಂಡವಾಳಗಾರರು ಹಾಗೂ ಜಾಗತಿಕ ಬಂಡವಾಳಶಾಹಿ ಮಾರುಕಟ್ಟೆ ಇವುಗಳ ನಡುವೆ ಸರ್ಕಾರವು ನಿಂತು ಸಮದರ್ಶಿಯ ಕಾರ್ಯನಿರ್ವಹಿಸಿತು. ಹಾಗಾಗಿ, ಹೊರಗಿನ ಬಂಡವಾಳಶಾಹಿಗಳ ಅತಿಕ್ರಮಣದ ವಿರುದ್ಧ ಸರ್ಕಾರವು ಒಂದು ನಮೂನೆಯ ರಕ್ಷಣೆ ಒದಗಿಸಿದ ಪರಿಸ್ಥಿತಿಯಲ್ಲಿ ಬಂಡವಾಳಶಾಹಿ ಮಾದರಿಯ ಅಭಿವೃದ್ಧಿಯು ಕೃಷಿ ವಲಯದಲ್ಲಿ ಸಂಭವಿಸಿತು.

ಇಂತಹ ಹೊರಗಿನಿಂದ ಕೃಷಿಯನ್ನು ಅತಿಕ್ರಮಿಸುವ ಒಂದು ಮುಖ್ಯ ಕಾರ್ಯವಿಧಾನವೆಂದರೆ, ರೈತ ಕೃಷಿಯನ್ನು ಸರಕು ಉತ್ಪಾದನೆಯ ವ್ಯಾಪ್ತಿಯೊಳಗೆ ಬರುವಂತೆ ನೋಡಿಕೊಳ್ಳುವುದು. ರೈತ-ಕೃಷಿ-ವ್ಯವಹಾರಗಳನ್ನು ಬಂಡವಾಳಶಾಹಿಯು ನಾಶಪಡಿಸಿದ ಬಗ್ಗೆ ತಾತ್ವಿಕ ವಿವರಣೆ ಒದಗಿಸಿದ ರೋಸಾ ಲಕ್ಸೆಂಬರ್ಗ್, ಸರಕು ಉತ್ಪಾದನೆಯು ರೈತ-ಕೃಷಿ-ವ್ಯವಹಾರಗಳನ್ನು ವಿನಾಶದತ್ತ ಕೊಂಡೊಯ್ಯುವ ಸಾಧನವಾಗುತ್ತದೆ ಎಂಬುದನ್ನು ಒತ್ತಿ ಹೇಳಿದ್ದರು. ಆದರೆ, ಸರಕು ಉತ್ಪಾದನೆ ಎಂದರೆ ಏನು? ಎಂಬುದರ ಬಗ್ಗೆ ಸ್ಪಷ್ಟತೆ ಇರಬೇಕಾಗುತ್ತದೆ. ಸರಕು ಉತ್ಪಾದನೆ ಎಂದರೆ, ಮಾರುಕಟ್ಟೆಗಾಗಿ ತಯಾರಾಗುವ ಉತ್ಪಾದನೆಯಲ್ಲ. ಸರಕು-ಹಣ-ಸರಕು ಪರಿಚಲನೆ (C-M-C circuit)ರೀತಿಯ ಉತ್ಪಾದನೆಯೂ ಅಲ್ಲ. ಸರಕು ಉತ್ಪಾದನೆಯು, ಅದರ ಪೂರ್ಣ ಅರ್ಥದಲ್ಲಿ, ಕೊಳ್ಳುವವನಿಗೆ ಬಳಕೆ-ಮೌಲ್ಯ ಮತ್ತು ವಿನಿಮಯ ಮೌಲ್ಯ ಈ ಎರಡನ್ನೂ ಕೊಡುವ ಒಂದು ಉತ್ಪನ್ನವು, ಮಾರಾಟಗಾರನಿಗೆ ಕೇವಲ ವಿನಿಮಯ ಮೌಲ್ಯವಾಗಿರುತ್ತದೆ, ಅವನಿಗೆ ಕೇವಲ ಇಂತಿಷ್ಟು ಹಣ ಮಾತ್ರ; ಮತ್ತು ಆ ಮೊತ್ತವೂ ಮಾರುಕಟ್ಟೆಯಲ್ಲಿ ಸ್ವಯಂಪ್ರೇರಿತವಾಗಿ ನಿರ್ಧರಿತವಾಗುವ, ಪರಿಸ್ಥಿತಿಯಲ್ಲಿ ಸಂಭವಿಸುತ್ತದೆ.

ಸರಕು ಉತ್ಪಾದನೆಯ ಒಂದು ಪ್ರಮುಖ ಲಕ್ಷಣವೆಂದರೆ, ಸಣ್ಣ ಉತ್ಪಾದಕರನ್ನು ದೊಡ್ಡ ಉತ್ಪಾದಕರು ನುಂಗುವುದು. ಪ್ರಸ್ತುತ ಸಂದರ್ಭದಲ್ಲಿ, ಕಾರ್ಪೊರೇಟ್‌ಗಳು ರೈತರನ್ನು ನುಂಗುತ್ತವೆ. ರೈತ-ಕೃಷಿ-ವ್ಯವಹಾರಗಳು ಮತ್ತು ಬಂಡವಾಳಶಾಹಿ ಕೃಷಿ-ವ್ಯವಹಾರಗಳು ಈ ಎರಡನ್ನೂ ನಿಜವಾದ ಅರ್ಥದಲ್ಲಿ ಒಟ್ಟಿಗೆ ತಂದಾಗ ಮಾತ್ರ ಸರಕು ಉತ್ಪಾದನೆಯು ಸಂಪೂರ್ಣವಾಗಿ ವ್ಯಕ್ತಗೊಳ್ಳುತ್ತದೆ. ಕನಿಷ್ಠ ಬೆಂಬಲ ಬೆಲೆ ಮತ್ತು ಸಂಗ್ರಹಣೆಯ (procurement) ಆಳ್ವಿಕೆಯಲ್ಲಿ ಮಾರುಕಟ್ಟೆಯ ಸ್ವಯಂಪ್ರೇರಿತ ಕಾರ್ಯಾಚರಣೆಯ ಮೇಲೆ ನಿರ್ಬಂಧಗಳಿದ್ದವು. ವಾಸ್ತವವಾಗಿ, ಈ ನಿಟ್ಟಿನಲ್ಲಿ, ಕನಿಷ್ಠ ಬೆಂಬಲ ಬೆಲೆ ವ್ಯವಸ್ಥೆಯೇ ಒಂದು ನಿರ್ಬಂಧವಾಗಿ ಕೆಲಸ ಮಾಡಿತು ಮತ್ತು ಸಣ್ಣ ಉತ್ಪಾದಕರನ್ನು ದೊಡ್ಡ ಉತ್ಪಾದಕರು ನುಂಗುವುದನ್ನು ತಪ್ಪಿಸಿತು.

ನವ-ಉದಾರವಾದಿ ವ್ಯವಸ್ಥೆಯನ್ನು ಆಚರಣೆಗೆ ತರುವ ಕ್ರಮವು ಮಾರುಕಟ್ಟೆಯ ಸ್ವಯಂಪ್ರೇರಿತ ಕಾರ್ಯಾಚರಣೆಯನ್ನು ಮರುಸ್ಥಾಪಿಸುವ ಉದ್ದೇಶವನ್ನು ಹೊಂದಿತ್ತು. ಈ ಉದ್ದೇಶ ಸಾಧನೆಗಾಗಿ, ಕಾರ್ಪೊರೇಟ್‌ಗಳು ರೈತ-ಕೃಷಿಯನ್ನು ನುಂಗುವುದನ್ನು ತಪ್ಪಿಸಿದ ಏರ್ಪಾಟನ್ನು- ಕನಿಷ್ಠ ಬೆಂಬಲ ಬೆಲೆ, ಧಾನ್ಯಗಳ ಖರೀದಿ-ಸಂಗ್ರಹಣೆ, ಪಡಿತರ ಸಬ್ಸಿಡಿ ಮುಂತಾದವುಗಳನ್ನು ಒಳಗೊಂಡ ಏರ್ಪಾಟನ್ನು- ಕಳಚಿಹಾಕಬೇಕಿತ್ತು. ಒಂದು ಯಂತ್ರದ ಬಿಡಿಭಾಗಗಳನ್ನು ಕಳಚಿಹಾಕುವ ರೀತಿಯಲ್ಲಿ, ಕಾರ್ಪೊರೇಟ್‌ಗಳು ರೈತ-ಕೃಷಿಯನ್ನು ನುಂಗುವುದನ್ನು ತಪ್ಪಿಸಿದ ಏರ್ಪಾಟಿನ ಅನೇಕ ಭಾಗಗಳನ್ನು ಒಂದೊಂದಾಗೇ ಕಳಚಿ ಹಾಕಲಾಯಿತು. ಈ ವಿದ್ಯಮಾನ ನಡೆಯುತ್ತಿರುವಾಗ ರೈತ-ಕೃಷಿಯು, ಹಣಕಾಸಿನ ದೃಷ್ಟಿಯಲ್ಲಿ ಹೇಳುವುದಾದರೆ, ನಷ್ಟ ಅನುಭವಿಸಿತು. ನಮಾಜು ಮಾಡಲು ಹೋಗಿ ಮಸೀದಿಯನ್ನು ತಲೆಯ ಮೇಲೆ ಎಳೆದುಕೊಂಡ ಗಾದೆಯ ಮಾತಿನಂತಾಯಿತು ರೈತರ ಪರಿಸ್ಥಿತಿ. ಸಾಲ ಮಾಡಿ ಕೃಷಿಯಲ್ಲಿ ತೊಡಗಿ ಅದರಿಂದ ಬಂದ ಫಸಲು ಮಾರುವಾಗ ನಷ್ಟ ಅನುಭವಿಸಿದ ಕಾರಣದಿಂದಾಗಿ ಸಾಲು ಸಾಲು ಆತ್ಮಹತ್ಯೆಯ ಪ್ರಕರಣಗಳು ನಡೆದವು (ರೈತರ ಆತ್ಮಹತ್ಯೆಗಳು ಈಗಲೂ ನಡೆಯುತ್ತಿವೆ). ಆದರೆ, ಈ ಏರ್ಪಾಟಿನ ಮುಖ್ಯ ಲಕ್ಷಣವಾದ ಕನಿಷ್ಠ ಬೆಂಬಲ ಬೆಲೆ, ಧಾನ್ಯಗಳ ಖರೀದಿ-ಸಂಗ್ರಹಣೆ, ಪಡಿತರ ಆಹಾರ ಸಬ್ಸಿಡಿಯ ವ್ಯವಸ್ಥೆಯು ಊನಗೊಳ್ಳದೆ ಉಳಿಯಿತು. ಕನಿಷ್ಠ ಬೆಂಬಲ ಬೆಲೆಯನ್ನು ನ್ಯಾಯವಾಗಿ ಎಷ್ಟಿರಬೇಕಿತ್ತೊ ಅದಕ್ಕಿಂತಾ ತುಂಬಾ ಕೆಳ ಮಟ್ಟದಲ್ಲೇ ಅನೇಕ ವರ್ಷಗಳ ಕಾಲ ಇರಿಸಲಾಗಿತ್ತಾದರೂ ಕನಿಷ್ಠ ಬೆಂಬಲ ಬೆಲೆ ಕ್ರಮವನ್ನು ಸಂಪೂರ್ಣವಾಗಿ ಕೈಬಿಟ್ಟಿರಲಿಲ್ಲ. ಈ ಏರ್ಪಾಟನ್ನು ಇಡಿಯಾಗಿ ಕಳಚಿ ಹಾಕುವ ಮಟ್ಟಿಗೆ ರೈತರ ಬಗ್ಗೆ ಅಸಂವೇದನಾಶೀಲ ಧೋರಣೆಯನ್ನು ತಾಳುವ ಭಂಡತನವನ್ನು ಇದುವರೆಗೆ ಯಾವ ಸರಕಾರವೂ ತೋರಿರಲಿಲ್ಲ. ಆದರೆ, ಸರ್ಕಾರಗಳ ಸಂವೇದನಾಹೀನತೆಯ ವಿಷಯದಲ್ಲಿ ಮೋದಿ ಸರಕಾರವು ಹಿಂದಿನ ಎಲ್ಲ ಸರ್ಕಾರಗಳನ್ನೂ ಏಕ್‌ದಂ ಸೋಲಿಸಿದೆ. ಕಾರ್ಪೊರೇಟ್‌ಗಳು ರೈತ-ಕೃಷಿಯನ್ನು ನುಂಗುವುದನ್ನು ತಪ್ಪಿಸುವ ತಡೆಗೋಡೆಯಂತಿದ್ದ ಕನಿಷ್ಠ ಬೆಂಬಲ ಬೆಲೆ, ಧಾನ್ಯಗಳ ಖರೀದಿ-ಸಂಗ್ರಹಣೆ, ಪಡಿತರ ಸಬ್ಸಿಡಿ ಮುಂತಾದವುಗಳನ್ನು ಒಳಗೊಂಡ ಏರ್ಪಾಟನ್ನು ಕಳಚಿಹಾಕಿದರೆ ರೈತನನ್ನು ವಾಸ್ತವವಾಗಿ ಒಬ್ಬ ಗೇಣಿದಾರನ ಅಥವಾ ಕೂಲಿಗಾರನ ಮಟ್ಟಕ್ಕೆ ಇಳಿಸುತ್ತದೆ ಎಂಬುದು ಗೊತ್ತಿದ್ದರೂ ಸಹ ಈ ವ್ಯವಸ್ಥೆಯನ್ನು ಕಳಚಿಹಾಕಲು ಮೋದಿ ಸರ್ಕಾರ ನಿರ್ಧರಿಸಿದೆ.

ವಾಸ್ತವವಾಗಿ, ಕೃಷಿಯನ್ನು ಸರಕು ಉತ್ಪಾದನೆಯ ಪೂರ್ಣಪ್ರಮಾಣದ ಬಿರುಸಿಗೆ ತೆರೆದುಕೊಡುವ ಕ್ರಮವು, ಕೃಷಿ ಮಾರುಕಟ್ಟೆಗಳ ಕಾರ್ಯನಿರ್ವಹಣೆಯಲ್ಲಿ ಪ್ರಭುತ್ವವು ಮಧ್ಯಪ್ರವೇಶ ಮಾಡದಿರುವ ಸನ್ನಿವೇಶದಲ್ಲಿ, ಕೊನೆಯ ಪಕ್ಷ ಮೂರು ಮೂಲಭೂತ ಬದಲಾವಣೆಗಳನ್ನು ತರುತ್ತದೆ. ಮೊದಲನೆಯದಾಗಿ, ಅದು ಜಾಗತಿಕ ಮಾರುಕಟ್ಟೆಯ ನಿರ್ದೇಶನಗಳಿಗೆ ಅನುಸಾರವಾಗಿ ದೇಶದ ಭೂ ಸಂಪನ್ಮೂಲವನ್ನು ತೆರೆದಿಡುತ್ತದೆ. ಅಂದರೆ, ಸಾಮ್ರಾಜ್ಯಶಾಹಿಗಳ ಆಜ್ಞೆಗಳಿಗೆ ತಲೆಬಾಗುವುದು. ಮುಂದುವರಿದ ದೇಶಗಳ ಕೊಳ್ಳುವ ಶಕ್ತಿಯು ಪ್ರಬಲವಾಗಿರುವ ಕಾರಣದಿಂದಾಗಿ ದೇಶದ ಭೂ ಬಳಕೆಯ ಮಾದರಿಯನ್ನು ಸಾಮ್ರಾಜ್ಯಶಾಹಿಗಳು ನಿರ್ಧರಿಸುತ್ತಾರೆ. ಎರಡನೆಯದಾಗಿ, ಪ್ರಸ್ತುತ ಸನ್ನಿವೇಶದಲ್ಲಿ ಮುಂದುವರಿದ ದೇಶಗಳು, ಆಹಾರ ಧಾನ್ಯಗಳನ್ನು ಹೊರತುಪಡಿಸಿ, ಉಷ್ಣವಲಯ ದೇಶಗಳಲ್ಲಿ ಬೆಳೆಯುವ ಇತರ ಬೆಳೆಗಳನ್ನು ಬಯಸುತ್ತವೆ. ಈ ದೇಶಗಳ ಬೇಡಿಕೆಯನ್ನು ಅನುಸರಿಸಿ ಪೂರ್ಣ ಪ್ರಮಾಣದ ಸರಕು ಉತ್ಪಾದನೆಯಲ್ಲಿ ತೊಡಗಿದಾಗ, ಆಹಾರ ಧಾನ್ಯಗಳ ಉತ್ಪಾದನೆಯನ್ನು ಬಿಟ್ಟುಬಿಡಬೇಕಾಗುತ್ತದೆ. ಅಂದರೆ, ಆಹಾರ ಧಾನ್ಯಗಳ ಉತ್ಪಾದನೆಗೆ ಬದಲಿಯಾಗಿ ಭೂಮಿಯನ್ನು ಇತರ ಬೆಳೆಗಳನ್ನು ಬೆಳೆಯಲು ಮತ್ತು ಬೇರೆ ಕೆಲವು ಉದ್ದೇಶಗಳಿಗೆ ಬಳಕೆಮಾಡಲಾಗುತ್ತದೆ. ಈ ವಿದ್ಯಮಾನವು ಏನನ್ನು ಅರ್ಥೈಸುತ್ತದೆ ಎಂದರೆ, ಒಂದು ವೇಳೆ ದೇಶದಲ್ಲಿ ಉತ್ಪಾದಿಸಿದ ಆಹಾರ ಧಾನ್ಯಗಳು ದೇಶದ ಆಹಾರ ಧಾನ್ಯಗಳ ಬೇಡಿಕೆಗಿಂತ ಕಡಿಮೆ ಪ್ರಮಾಣದಲ್ಲಿದ್ದರೆ, ಆಗ, ದೇಶವು ಆಹಾರ-ಆಮದು-ಅವಲಂಬಿತವಾಗುತ್ತದೆ. ಮೂರನೆಯದಾಗಿ, ಮೊದಲೇ ಹೇಳಿದಂತೆ, ರೈತರನ್ನು ಕಾರ್ಪೊರೇಟ್‌ಗಳ ಮರ್ಜಿಗೆ ಬಿಟ್ಟಂತಾಗುತ್ತದೆ. ಪರಿಣಾಮವಾಗಿ, ರೈತರ ಆರ್ಥಿಕ ಸ್ಥಾನ-ಮಾನ ಹೀನಾಯವಾಗುತ್ತದೆ. ಹೀನಾಯಗೊಳ್ಳುವ ವಿದ್ಯಮಾನವು ಹಲವಾರು ವಿಧಗಳಲ್ಲಿ ಸಂಭವಿಸುತ್ತದೆ. ಉದಾಹರಣೆಯಾಗಿ, ಒಂದು ಸಂಭವನೀಯ ವಿಧಾನವನ್ನು ಹೀಗೆ ವಿವರಿಸಬಹುದು: ಜಾಗತಿಕ ಬೇಡಿಕೆಯನ್ನು ಪೂರೈಸುವ ಸಲುವಾಗಿ ಕಾರ್ಪೊರೇಟ್‌ಗಳ ಆಣತಿಯಂತೆ ರೊಕ್ಕದ ಬೆಳೆಗಳನ್ನು ಉತ್ಪಾದಿಸುವ ರೈತರು, ಒಂದು ವೇಳೆ ಆ ಪೈರಿನ ಇಳುವರಿಯು ಕಳಪೆಯಾದ ವರ್ಷದಲ್ಲಿ ಅಥವಾ ಫಸಲಿನ ಬೆಲೆ ಕುಸಿತವಾದಾಗ, ಸಾಲದ ಬಲೆಗೆ ಸಿಲುಕಿಕೊಳ್ಳುತ್ತಾರೆ. ಮಾರುಕಟ್ಟೆಯಲ್ಲಿ ಬೆಲೆಗಳು ಕುಸಿದಾಗ, ಬೆಲೆಯ ಬಗ್ಗೆ ಮಾಡಿಕೊಂಡ ಮೂಲ ಒಪ್ಪಂದವನ್ನು ಕಾರ್ಪೊರೇಟ್‌ಗಳು ಗಾಳಿಗೆ ತೂರುತ್ತವೆ ಮತ್ತು ನಷ್ಟವನ್ನು ರೈತರ ಮೇಲೆ ಹೇರುತ್ತವೆ. ಇಂತಹ ಕಾರಣದಿಂದ ರೈತರು ಒಮ್ಮೆ ಸಾಲದ ಬಲೆಯಲ್ಲಿ ಸಿಲುಕಿದರೆ, ಅನಿವಾರ್ಯವಾಗಿ ತಮ್ಮ ಜಮೀನುಗಳನ್ನು ಕಳೆದುಕೊಂಡು ಕೂಲಿ ಕಾರ್ಮಿಕರಾಗುತ್ತಾರೆ.

ಪುಟ 14 ನೋಡಿ

ಜನಗಳ ಹಸಿವೆ, ನಿರುದ್ಯೋಗದ ಬಗ್ಗೆ ಪರಿವೆಯಿಲ್ಲದ ಸರಕಾರದ 20 ಸಾವಿರ ಕೋಟಿ ರೂ. 'ಸೆಂಟ್ರಲ್ ವಿಸ್ತಾ' ಪ್ರಾಜೆಕ್ಟಿಗೆ ಅನುಮೋದನೆ

ಜನಗಳು ಹಸಿದಿದ್ದರೂ, ನಿರುದ್ಯೋಗಿಗಳಾಗಿದ್ದರೂ ತಲೆಕೆಡಿಸಿಕೊಳ್ಳದ ಸರಕಾರ ರಾಜಧಾನಿಯ ಸೆಂಟ್ರಲ್ ವಿಸ್ತಾ ಪರಿಯೋಜನೆಗೆ 20,000 ಕೋಟಿ ರೂ. ಖರ್ಚು ಮಾಡಲು ಈಗ ದಾರಿ ಸುಗಮವಾಗಿದೆ. ದೇಶದ ಅಧಿಕಾರ ಕೇಂದ್ರ ಸ್ಥಳದ 'ಮರುಅಭಿವೃದ್ಧಿ'ಗೆಂದು ಯೋಜಿಸಿರುವ 'ಸೆಂಟ್ರಲ್ ವಿಸ್ತಾ'ಕ್ಕೆ ಸುಪ್ರಿಂ ಕೋರ್ಟ್ ಈಗ ಅನುಮತಿ ನೀಡಿದೆ. ಜನವರಿ 5 ರಂದು ಮೂವರು ನ್ಯಾಯಾಧೀಶರ ಪೀಠ ಇದರ ವಿರುದ್ಧ ಹಾಕಿದ್ದ ಅರ್ಜಿಗಳ ಮೇಲೆ ನೀಡಿದ 2–1 ಬಹುಮತದ ತೀರ್ಪಿನಲ್ಲಿ ಈ ಅನುಮತಿ ನೀಡಲಾಗಿದೆ.

ಬಹುಮತದ ತೀರ್ಪು ಒಂದು ಚುನಾಯಿತ ಸರಕಾರದ ಆದ್ಯತೆಗಳ ವಿಚಾರಣೆಯನ್ನು ನಡೆಸುವುದು ನ್ಯಾಯಾಲಯದ ಕಾಳಜಿಯಲ್ಲ, ನ್ಯಾಯಾಂಗ ಪರಾಮರ್ಶೆ ಎಂಬುದು ಸರಕಾರದ ಮನಸ್ಸಿನಲ್ಲೇನಿದೆ ಎಂದು ತಿಳಿಯುವ ಸಾಹಸಕ್ಕೆ ಇಳಿಯಬೇಕಾಗಿಲ್ಲ ಎನ್ನುತ್ತ ತಪ್ಪು ಮಾಡಲು ಅಥವ ಯಶಸ್ಸು ಗಳಿಸುವುದು ಸರಕಾರಕ್ಕೆ ಬಿಟ್ಟದ್ದು ಎಂದು ಹೇಳಿರುವುದು ಗಮನಾರ್ಹ.

ಭಿನ್ನಮತದ ತೀರ್ಪು ಇದರಲ್ಲಿ ಸರಿಯಾದ ರೀತಿಯಲ್ಲಿ ಸಾರ್ವಜನಿಕ ಭಾಗವಹಿಸುವಿಕೆ ಇರಬೇಕಾಗಿತ್ತು, ಪಾರಂಪರಿಕ ಕಟ್ಟಡಗಳ ಸಂರಕ್ಷಣಾ ಸಮಿತಿ(ಹೆಚ್.ಇ.ಸಿ.)ಯ ಪೂರ್ವಾನುಮತಿಯನ್ನು ಪಡೆದುಕೊಳ್ಳಬೇಕಾಗಿತ್ತು ಮತ್ತು ಪರಿಣಿತರ ಸಮಿತಿ 'ಸರಿಯಾಗಿ ಯೋಚಿಸಬೇಕಾಗಿತ್ತು' ಎಂದು ಹೇಳಿರುವದಾಗಿ ವರದಿಯಾಗಿದೆ. ಸರಕಾರ ಈ ಪರಿಯೋಜನೆಗೆ ಬಂದಿರುವ ಆಕ್ಷೇಪಗಳು ಮತ್ತು ಸಲಹೆಗಳನ್ನು ಪರಿಗಣಿಸಿತು ಎಂದು ತೋರಿಸಲು ಒಂದಾದರೂ ದಸ್ತಾವೇಜನ್ನು ಸಲ್ಲಿಸಿಲ್ಲ ಎಂದಿರುವ ಈ **ಭಿನ್ನಮತದ ತೀರ್ಪು, ಸಾಕಷ್ಟು ಪ್ರಮಾಣದಲ್ಲಿ ಸಾರ್ವಜನಿಕ ಭಾಗವಹಿಸುವಿಕೆ ಮತ್ತು ಅನ್ಯಾಯವಾಗುತ್ತಿದೆ ಎಂಬ ಭಾವನೆಯನ್ನು ತಪ್ಪಿಸಲು ಆಕ್ಷೇಪಗಳಿಗೆ ಕಿವಿಗೊಡುವುದು "ನಮ್ಮ ಸಮಾಜದ ಎದೆಯಾಳದ ಪ್ರಜಾಪ್ರಭುತ್ವ ನೀತಿಯನ್ನು ಬಿಂಬಿಸುತ್ತದೆ"** ಎಂದು **ಮಾರ್ಮಿಕವಾಗಿ ಹೇಳಿದೆ.**

ಈ ಮೊದಲು, ಈ ಪರಿಯೋಜನೆಯ ವಿರುದ್ಧ ಸಲ್ಲಿಸಿದ್ದ ಅರ್ಜಿಗಳ ಬಗೆ ಸುಪ್ರಿಂ ಕೋರ್ಟ್ ತೀರ್ಪು ನೀಡುವ ಮೊದಲೇ ಡಿಸೆಂಬರ್ 10ರಂದು ಪ್ರಧಾನ ಮಂತ್ರಿಗಳು ಅದರ ಶಂಕುಸ್ಥಾಪನೆಗೆ ಮುಂದಾದ ಬಗ್ಗೆ ದೇಶದ ಸರ್ವೋಚ್ಚ ನ್ಯಾಯಾಲಯ ಅಸಮಾಧಾನ ವ್ಯಕ್ತಪಡಿಸಿತ್ತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

"ಅವರಿಗೆ, ಜನಗಳು ಹಸಿದಿರುವಾಗ, ನಿರುದ್ಯೋಗಿಗಳಾಗಿರುವಾಗ, ಈ ಪರಿಯೋಜನೆಗೆ 20 ಸಾವಿರ ಕೋಟಿ ರೂ.ಗಳನ್ನು ಖರ್ಚುಮಾಡುವುದಕ್ಕೆ ಎಳ್ಳಷ್ಟೂ ಚಿಂತೆಯಿಲ್ಲ. ಅವರು ಇದನ್ನು ಮುಂದೊತ್ತುತ್ತಿದ್ದಾರೆ. ಇದು ನಾಚಿಕೆಗೇಡಿನ ಸಂಗತಿ" ಎಂದು ಮೋದಿ ಸರಕಾರದ ನಿಲುವನ್ನು ಹಿರಿಯ ಸಿಪಿಐ(ಎಂ) ಮುಖಂಡರಾದ ಬೃಂದಾ ಕಾರಟ್ ಕಟುವಾಗಿ ಟೀಕಿಸಿದ್ದಾರೆ.

ದೇಶದ ಕೆಲವು ಅತ್ಯುತ್ತಮ ಕಟ್ಟಡ ತಜ್ಞರು, ನಗರ ಯೋಜನಾ ತಜ್ಞರು ಮತ್ತು ನಗರಾಭಿವೃದ್ಧಿಯ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವವರು ಈ ಪರಿಯೋಜನೆ ಸಂಪೂರ್ಣ ತಪ್ಪು ಎಂದಿದ್ದಾರೆ. ಅವರು ಇದಕ್ಕೆ ಬಲವಾದ ಕಾರಣಗಳನ್ನು ಕೊಟ್ಟಿದ್ದಾರೆ. ಆದರೂ ಸರಕಾರ ಇದನ್ನು ಮಾಡಿಯೇ ತೀರುವುದಾಗಿ ಹೇಳಿದೆ. ದುರದೃಷ್ಟವಶಾತ್ ಇದಕ್ಕೆ ಸಂಬಂಧಪಟ್ಟ ಎಲ್ಲ ಸಮಿತಿಗಳನ್ನು ಮೋದಿ ಸರಕಾರ ಹೇಗೆ ಬುಡಮೇಲು ಮಾಡಿದೆ ಎಂಬುದನ್ನು ನಾವು ನೋಡಿದ್ದೇವೆ ಎಂದು ಮುಂದುವರೆದು ಬೃಂದಾ ಕಾರಟ್ ಹೇಳಿದ್ದಾರೆ.

ಈಗಾಗಲೇ ಮರಗಳನ್ನು ಕಡಿಯಲಾಗುತ್ತಿದೆ, ಈ ಪರಿಯೋಜನೆ ಸಾರ್ವಜನಿಕರಿಗೆಂದು ಇರುವ ಮುಕ್ತ ಸ್ಥಳಗಳ ಅತಿಕ್ರಮಣ, ಪ್ರತಿಯೊಂದು ರೀತಿಯಲ್ಲೂ ಇದು ಭೂಕಬಳಿಕೆ ಎಂದು ಪರಿಸರತಜ್ಞರಾದ ಭವ್ರೀನ್ ಕಂಧಾರಿ ಹೇಳಿದರೆ, ಇಂತಹ ಪರಿಯೋಜನೆಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಸಾರ್ವಜನಿಕ ಸಮಾಲೋಚನೆಗಳು ಅಗತ್ಯ ಎಂದು ಕಟ್ಟಡತಜ್ಞ ನಿವೃತ್ತ ಸೇನಾಧಿಕಾರಿ ಅನುಜ್ ಶ್ರೀವಾಸ್ತವ ಹೇಳಿದ್ದಾರೆ.

ಮಹಾಸೋಂಕು ಮತ್ತು ಲಾಕ್‌ಡೌನ್ ಗಳಿಂದಾಗಿ ಹಸಿವು ಮತ್ತು ಅಪೌಷ್ಟಿಕತೆಯ ಹಲವಾರು ಉದಾಹರಣೆಗಳಿದ್ದರೂ ಉಚಿತ ಆಹಾರಧಾನ್ಯಗಳನ್ನು ಪೂರೈಸಲು ನಿರಾಕರಿಸಿರುವ ಸರಕಾರವಿದು. "ಜನಗಳ ಅಗತ್ಯಗಳಿಗೆ ಈ ಮೋದಿ ಸರಕಾರ ಎಷ್ಟು ಸಂವೇದನಾಶೂನ್ಯವಾಗಿದೆ ಎಂಬುದನ್ನು ಇದು ತೋರಿಸುತ್ತದೆ. ಸಾರ್ವಜನಿಕರಿಗೆ ಆಹಾರಧಾನ್ಯಗಳು ಬೇಕು, ಕೆಲಸ ಬೇಕು, ಸರಕಾರೀ ಮಂತ್ರಿಗಳಿಗೆ ಬೃಹತ್ ಗಾತ್ರದ ಅರಮನೆಯಂತಹ ಭವನಗಳು ಬೇಕಿಲ್ಲ. ಇದು ಆಘಾತಕಾರಿ" ಎಂದು ಬೃಂದಾ ಕಾರಟ್ ಮುಂದುವರೆದು ಹೇಳಿದ್ದಾರೆ.

"ಪ್ರಧಾನ ಮಂತ್ರಿ ಮೋದಿ ರಾಮಮಂದಿರ ಮತ್ತು ಸೆಂಟ್ರಲ್ ವಿಸ್ತಾ ಪರಿಯೋಜನೆಯನ್ನು ಒಂದು ಹೊಸ ಪ್ರಭುತ್ವ ವ್ಯವಸ್ಥೆಯ ಲಾಂಛನವನ್ನಾಗಿ ಮಾಡಲು ಪ್ರಯತ್ನಿಸುತ್ತಿದ್ದಾರೆ. ಭಾರತೀಯ ಸಂವಿಧಾನದಲ್ಲಿ ಕಂಡರಿಸಿದ ಪ್ರಭುತ್ವದ ಜಾತ್ಯಾತೀತ ಕಲ್ಯಾಣಕಾರಿ ಲಕ್ಷಣಗಳಿಗೂ ಇದಕ್ಕೂ ಅಜಗಜಾಂತರವಿದೆ" ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿಯವರು ಕೂಡ ಕೊಲ್ಕತಾದಲ್ಲಿ ಸಮಾರಂಭವೊಂದರಲ್ಲಿ ಟಿಪ್ಪಣಿ ಮಾಡಿದ್ದಾರೆ.



ಪ್ರಜಾಪ್ರಭುತ್ವ ಅತಿಯಾಯ್ತು! ಕೇವಲ ನನಗೆ ಮತ್ತು ನನ್ನ ಪಕ್ಷಕ್ಕಾಗಿ ಒಂದು ದ್ವೀಪವಾಗಿ ಅದರ ಮರು ಯೋಜನೆ ತಯಾರಿಸಿ

ವ್ಯಂಗ್ಯಚಿತ್ರ ಕೃಪೆ: ಸಜಿತ್ ಕುಮಾರ್, ಡೆಕ್ಕನ್ ಹೆರಾಲ್ಡ್

ರೈತಾಪಿ ಜನಗಳ ಅಳಿವು-ಉಳಿವಿನ ಪ್ರಶ್ನೆ

ಪುಟ 13 ರಿಂದ

ಈ ಎಲ್ಲ ವಿಷಯಗಳೂ ವಸಾಹತುಶಾಹಿ ದಿನಗಳ ಅನುಭವದಿಂದ ಚೆನ್ನಾಗಿ ಗೊತ್ತಾಗಿರುವ ವಿಷಯವೇ. ವಸಾಹತುಶಾಹಿ ಕಾಲದಲ್ಲಿ, ಕನಿಷ್ಠ ಬೆಂಬಲ ಬೆಲೆ, ಧಾನ್ಯಗಳ ಖರೀದಿ–ಸಂಗ್ರಹಣೆ, ಸಬ್ಸಿಡಿ ದರದಲ್ಲಿ ಪಡಿತರ ಮುಂತಾದ ಯಾವುದೇ ರೂಪದಲ್ಲಿ ಸರ್ಕಾರವು ಮಧ್ಯಪ್ರವೇಶ ಮಾಡದ ಕಾರಣದಿಂದ ರೈತರು ಮಾರುಕಟ್ಟೆಯ ಮರ್ಜಿಗೆ ತಳ್ಳಲ್ಪಟ್ಟಿದ್ದರು ಎಂಬುದೂ ಸಹ ಗೊತ್ತಿರುವ ವಿಷಯವೇ. ವಸಾಹತುಶಾಹಿ ಆಳ್ವಿಕೆಯಲ್ಲಿ ರೈತರು ಯಾವ ರೀತಿಯ ದುರ್ಗತಿಗೀಡಾದರು ಎಂಬುದರ ಕುರಿತು ಮೂವತ್ತರ ಮತ್ತು ನಲವತ್ತರ ದಶಕದಲ್ಲಿ ಹೊರಬಂದ ದೇಶದ ಎಲ್ಲ ಭಾಷೆಗಳ ಅನೇಕ ಸಾಹಿತ್ಯ ಕೃತಿಗಳೂ ಹೃದಯ ವಿದ್ರಾವಕ ಭಾವವನ್ನು ಉಂಟುಮಾಡಿದವು. ಆದಾಗ್ಯೂ, ರೈತ ಕೃಷಿಯನ್ನು ಮಾರುಕಟ್ಟೆಯ ಆಬಾಧಿತ ಕಾರ್ಯಾಚರಣೆಗೆ ಬಿಟ್ಟುಬಿಡುವುದರ ಪರಿಣಾಮಗಳ ಬಗ್ಗೆ ಅನೇಕ ಬುದ್ಧಿಜೀವಿಗಳು ಏನೂ ಗೊತ್ತಿಲ್ಲದವರಂತೆ ನಟಿಸುತ್ತಾರೆ. ಅವರಿಗೆ ತಮ್ಮ ದೇಶದ ಇತಿಹಾಸವೇ ಗೊತ್ತಿಲ್ಲವೇನೋ, ಪಾಪ, ಎನಿಸುತ್ತದೆ. ಬಿಜೆಪಿಗರು ದೇಶದ ಇತಿಹಾಸದ ಬಗ್ಗೆ ಯಾವುದೇ ತಿಳಿವು ಇಲ್ಲದ ಅಮಾಯಕರು ಎಂದರೆ ಅರ್ಥವಾಗುತ್ತದೆ. ಆದರೆ, ಸರ್ಕಾರವು ಯಾವುದೇ ರೂಪದಲ್ಲಿ ಮಧ್ಯಪ್ರವೇಶ ಮಾಡದ ರೀತಿಯ ಸರಕು ಉತ್ಪಾದನೆಯ ಬಗ್ಗೆ ಬಿಜೆಪಿಯೇತರ ಬುದ್ಧಿಜೀವಿಗಳು ವ್ಯವಹಾರಜ್ಞಾನವೇ ಇಲ್ಲದವರಂತಿರುವುದು ಒಂದು ಅಚ್ಚರಿಯೇ.

ಪೂರ್ಣ ಪ್ರಮಾಣದ ಸರಕು ಉತ್ಪಾದನೆಯಿಂದ ಉಂಟಾಗುವ ಇಂತಹ ಪರಿಣಾಮಗಳು ರೈತರ ಪಾಪರೀಕರಣವನ್ನು ಹೆಚ್ಚಿಸುತ್ತವೆ. ರೈತರ ಸ್ಥಿತಿ–ಗತಿಗಳು ಹದಗೆಡುವ ಪರಿಸ್ಥಿತಿಯಲ್ಲಿ, ಮತ್ತು ಅದೇ ಸಮಯದಲ್ಲಿ, ದುಡಿಯುವ ಇಡೀ ಜನತೆಯ ಸ್ಥಿತಿ–ಗತಿಗಳೂ ಹದಗೆಡುತ್ತವೆ. ಹಾಗಾಗಿ, ದುಡಿಯುವ ಇಡೀ ಜನತೆಯ ಬಡತನವು ಆಬಾಧಿತವಾಗಿ ಹೆಚ್ಚಾಗುತ್ತದೆ. ಒಂದು ಉದಾಹರಣೆಯ ಮೂಲಕ ಇದನ್ನು ಅರಿಯಬಹುದು. ಆಹಾರ ಧಾನ್ಯಗಳಿಂದ ರೊಕ್ಕದ ಬೆಳೆಗಳಿಗೆ ಬದಲಾಗಿದ್ದರಿಂದ ಪ್ರತಿ ಎಕರೆ ಜಮೀನು ಸೃಷ್ಟಿಸುವ ಉದ್ಯೋಗದಲ್ಲಿ ಯಾವ ಬದಲಾವಣೆಯೂ ಇಲ್ಲ ಎಂದೇ ಇಟ್ಟುಕೊಳ್ಳೋಣ (ಒಂದು ವೇಳೆ ಉದ್ಯೋಗಗಳು ಇಳಿಕೆಯಾಗುತ್ತಿದ್ದರೆ, ಬಡತನ ಹೆಚ್ಚುತ್ತದೆ ಎಂಬುದು ಸ್ಪಷ್ಟವೇ). ಆಹಾರ ಧಾನ್ಯಗಳಿಂದ ರೊಕ್ಕದ ಬೆಳೆಗಳಿಗೆ ಬದಲಾಗಿದ್ದರಿಂದ ರೈತರ ಮತ್ತು ಕೃಷಿ ಕಾರ್ಮಿಕರ ತಲಾ ಆದಾಯದಲ್ಲೂ ಯಾವುದೇ ಬದಲಾವಣೆಯಾಗಿಲ್ಲ ಎಂದೇ ಇಟ್ಟುಕೊಳ್ಳೋಣ. ಹೀಗಿದ್ದರೂ ಸಹ, ಒಂದೇ ಒಂದು ವರ್ಷ ರೊಕ್ಕದ ಬೆಳೆಗಳ ಬೆಲೆ ಕುಸಿತವಾದರೆ, ದುಡಿಯುವ ಇಡೀ ಜನತೆಯ ಆದಾಯ, ಅಂದರೆ ರೈತರು ಮತ್ತು ಕೂಲಿ ಕಾರ್ಮಿಕರ ಆದಾಯವು ಕುಸಿಯುತ್ತದೆ. ಈ ಕಾರಣದಿಂದಾಗಿ, ಅವರು ಸಾಲ ಮಾಡುವ ಅನಿವಾರ್ಯತೆ ಉಂಟಾಗುತ್ತದೆ.

ಒಂದು ಸಲ ರೈತರು ಸಾಲದ ಬಲೆಗೆ ಸಿಲುಕಿಕೊಂಡ ಮೇಲೆ, ಅವರು ದಾರಿದ್ರ್ಯದತ್ತ ಬೀಳುವುದನ್ನು ತಡೆದು ನಿಲ್ಲಿಸಲಾಗುವುದಿಲ್ಲ. ಏಕೆಂದರೆ, ಸರಕು ಉತ್ಪಾದನೆಯೊಂದಿಗೆ ಸಂಬಂಧಿಸಿದ ಒಂದು ಸರಳ ಅಂಶವೆಂದರೆ, ರೈತರ ಮತ್ತು ಮಾರುಕಟ್ಟೆಯ ನಡುವೆ ಮಧ್ಯವರ್ತಿಯಾಗಿ ವ್ಯವಹಾರ ಮಾಡುವ ಕಾರ್ಪೊರೇಟ್‌ಗಳು ಬೆಲೆ–ಇಳಿಕೆಯ ನಷ್ಟವನ್ನು ರೈತರಿಗೆ ಸಂಪೂರ್ಣವಾಗಿ ವರ್ಗಾಯಿಸುತ್ತವೆ. ಆದರೆ, ಬೆಲೆ ಏರಿಕೆಯ ಲಾಭವನ್ನು ಮಾತ್ರ ವರ್ಗಾಯಿಸುವುದಿಲ್ಲ, ಅದನ್ನು ಸಲೀಸಾಗಿ ತಮ್ಮ ಜೇಬಿಗೆ ಇಳಿಸುತ್ತವೆ. ಆದ್ದರಿಂದ, ಜಾಗತಿಕ ಮಾರುಕಟ್ಟೆಯ ಬೆಲೆಗಳು ಕುಸಿದಾಗ ಮಾಡಿಕೊಂಡ ಸಾಲವನ್ನು ಜಾಗತಿಕ ಮಾರುಕಟ್ಟೆಯ ಬೆಲೆಗಳು ಏರಿದಾಗ ತೀರಿಸುವ ಸಾಧ್ಯತೆಗಳು ಇಲ್ಲವೇ ಇಲ್ಲ ಎನ್ನಬಹುದು. ಹಾಗಾಗಿ, ಕೊರಳಿಗೆ ಸುತ್ತಿಕೊಂಡ ಬೀಸುವ ಕಲ್ಲಿನಂತಹ ಸಾಲವು ಹಾಗೆಯೇ ಉಳಿಯುತ್ತದೆ. ಪರಿಣಾಮವಾಗಿ ರೈತರು ಪಾಪರಾಗುತ್ತಾರೆ. ಅನೇಕ ಮಂದಿ ರೈತರು ಉದ್ಯೋಗವನ್ನು ಅರಸಿ ನಗರಗಳಿಗೆ ವಲಸೆ ಹೋಗುವುದರಿಂದ, ನಗರಗಳಲ್ಲಿ ನಿರುದ್ಯೋಗಿಗಳ ಮೀಸಲು ಪಡೆಯ ಗಾತ್ರವು ಉಬ್ಬಿಕೊಂಡು, ಸಂಘಟಿತ ಕಾರ್ಮಿಕರೂ ಸೇರಿದಂತೆ ದುಡಿಯುವ ಇಡೀ ಜನತೆಯು ಬಡತನಕ್ಕೆ ತಳ್ಳಲ್ಪಡುತ್ತಾರೆ.

ಆದ್ದರಿಂದ, ರೈತರ ಪ್ರತಿಭಟನೆಗಳಲ್ಲಿ ಒಳಗೊಂಡಿರುವ ಪ್ರಶ್ನೆಗಳು, ಆ ಮೂರು ಮಸೂದೆಗಳ ಇದೋ, ಅದೋ ಪರಿಚ್ಛೇದವನ್ನು ಮೀರಿ ಆಚೆ ಬಹಳ ದೂರ ಹೋಗುತ್ತವೆ. ಇವು ರೈತಾಪಿಗಳ ಉಳಿವು–ಅಳಿವಿಗೇ ಸಂಬಂಧಪಟ್ಟ ಪ್ರಶ್ನೆಗಳು.

ಕಾರ್ಮಿಕ ವರ್ಗದ ಚಳುವಳಿಯ ಬೆಳವಣಿಗೆಯ ಹಾದಿಯಲ್ಲಿ



ಪುಟ 11 ರಿಂದ

ಮತ್ತು ವ್ಯಾಪಕವಾಗಿ ಸಂಭವಿಸುತ್ತಿದ್ದವು. ಅಂದಿನ ಅಸ್ತಿತ್ವದಲ್ಲಿದ್ದ ಕಾರ್ಮಿಕ ಪರಿಸ್ಥಿತಿಗಳನ್ನು ಪರಿಶೀಲಿಸಿದ ಡಾ. ಆರ್. ಕೆ. ದಾಸ್ ಹೀಗೆ ಹೇಳಿದ್ದಾರೆ. "1882 ಮತ್ತು 1890 ರ ನಡುವೆ, ಬಾಂಬೆ ಮತ್ತು ಮದ್ರಾಸ್‌ನ ವಿವಿಧ ಕಾರ್ಖಾನೆಗಳಲ್ಲಿ 25 ಪ್ರಮುಖ ಮುಷ್ಕರಗಳು ದಾಖಲಾಗಿವೆ. ಆದರೆ ಸಣ್ಣಪುಟ್ಟ ಮುಷ್ಕರಗಳು ಹೆಚ್ಚಾಗಿ ನಡೆಯುತ್ತಿದ್ದವು."

ಮುಷ್ಕರಗಳ ಸ್ವರೂಪವನ್ನು ಎತ್ತಿ ತೋರಿಸುತ್ತಾ, ಅಹಮದಾಬಾದ್ ಮಿಲ್–ಮಾಲೀಕರ ಸಂಘದ ಕಾರ್ಯದರ್ಶಿ ಹೇಳುತ್ತಾರೆ,) "ಈ ಸಣ್ಣ ಮುಷ್ಕರಗಳು ಯಾವಾಗ ಬೇಕಾದರೂ ನಡೆಯುತ್ತವೆ, ನಡೆಯುವಾಗ, ಇವುಗಳ ಸ್ಥಿರವಾದ ಕಾರಣವು ಮಾಲೀಕರಿಂದ ಕೆಟ್ಟ ಕೆಲಸಕ್ಕೆ ದಂಡ ವಿಧಿಸುವಿಕೆ ಅಥವಾ ಕಾರ್ಮಿಕರ ವೇತನವನ್ನು ಕಡಿಮೆ ಮಾಡುವ ಪ್ರಯತ್ನಗಳ ವಿರುದ್ಧ ವಾಗಿರುತ್ತವೆ. ಆದರೆ ಇಂತಹ ವಿವಾದಗಳು ಯಾವಾಗಲೂ ಸೌಹಾರ್ದಯುತವಾಗಿ ಇತ್ಯರ್ಥಗೊಳ್ಳುತ್ತವೆ." ಬಾಂಬೆಯ ಕಂದಾಯ ಕಮೀಶನರರ ಹೇಳಿಕೆಯಿಂದ ಈ ವೀಕ್ಷಣೆ ದೃಢ ಪಟ್ಟಿದೆ. ಅವರ ಪ್ರಕಾರ, "ಗೈರುಹಾಜರಿ ಅಥವಾ ಕೆಟ್ಟ ಕೆಲಸಕ್ಕಾಗಿ ದಂಡ ವಿಧಿಸಿದಾಗ ಅಥವಾ ವೇತನ ಕಡಿತಕ್ಕೆ ಪ್ರಯತ್ನಿಸಿದಾಗ ಕೆಲಸಗಾರರು ಸಾಂದರ್ಭಿಕವಾಗಿ ಒಂದು ಅಥವಾ ಎರಡು ದಿನ ಕೆಲಸ ನಿಲುಗಡೆ ಮಾಡುತ್ತಾರೆ."

ಬಂಗಾಳದ ಕಾರ್ಮಿಕರ ಪರಿಸ್ಥಿತಿಯು ಬಾಂಬೆ ಪ್ರೆಸಿಡೆನ್ಸಿಯಂತೆಯೇ ಇತ್ತು. ಬಂಗಾಳ ಸರ್ಕಾರದ ಅಧಿಕೃತ ವಕ್ತಾರರೊಬ್ಬರು ಹೀಗೆ ಹೇಳುತ್ತಾರೆ, "ಸಾಮಾನ್ಯ ಹಿತಾಸಕ್ತಿ ಅಥವಾ ಪ್ರಾಮುಖ್ಯತೆಯ ಯಾವುದೇ ಮುಷ್ಕರಗಳು ಅಥವಾ ಲಾಕ್–ಔಟ್‌ಗಳು ನಡೆದಿಲ್ಲ. ಬಿಡಿ ಗಿರಣಿಗಳು, ಯಾವುದೇ ಇಲಾಖೆಯಲ್ಲಿ ವೇತನವು ಇತರರಿಗಿಂತ ಸಾಪೇಕ್ಷವಾಗಿ ಹೆಚ್ಚಾಗಿದೆ ಅಥವಾ ನೆರೆಯ ಗಿರಣಿಗಳಿಗಿಂತ ಹೆಚ್ಚಾಗಿದೆ ಎಂದು ವೇತನದ ದರವನ್ನು ಕಡಿಮೆ ಮಾಡಲು ಪ್ರಯತ್ನಿಸಿದಾಗ ತೊಂದರೆಗಳನ್ನು ಸಂಭವಿಸಿವೆ, ಮತ್ತು ಕಾರ್ಮಿಕರು ಕೆಲವು ಸಂದರ್ಭಗಳಲ್ಲಿ, ತಮ್ಮನ್ನು ತಾವು ಸಹಿಸಲಾಗದ ಮೇಲ್ವಿಚಾರಕನ ಅಡಿಯಲ್ಲಿ ಕೆಲಸ ಮಾಡಲು ನಿರಾಕರಿಸಿದ್ದಾರೆ ಮತ್ತು ಕೆಲವು ಸಂದರ್ಭಗಳಲ್ಲಿ ಒಂದು ವಾರದ ಕಾಲ ಕೆಲಸವನ್ನು ನಿಲ್ಲಿಸಲಾಗಿದೆ ... ಇಡೀ ಕೈಗಾರಿಕೆಯ ಮೇಲೆ ಪರಿಣಾಮ ಬೀರುವ ಸಂಘಟಿತ ಮುಷ್ಕರ, ಅಥವಾ ಒಂದು ಗಿರಣಿಯಲ್ಲಿರುವ ಎಲ್ಲಾ ಕಾರ್ಮಿಕರು ಸಹ ಮುಷ್ಕರ ಮಾಡಿದ ಘಟನೆಗಳು ಎಂದಿಗೂ ಸಂಭವಿಸಿಲ್ಲ. ಮಾಲಿಕರು ತಮ್ಮ ಕೆಲಸಗಾರರೊಂದಿಗೆ ಘರ್ಷಣೆಗೆ ಒಳಗಾದಾಗ ಮತ್ತು ತಮ್ಮ ಕಾರ್ಮಿಕರ ಮುಷ್ಕರಕ್ಕೆ ವಿರುದ್ಧವಾಗಿ ಅವರು ನಿರ್ಧರಿಸಿದ ಯಾವುದೇ ಬದಲಾವಣೆಗಳನ್ನು ಮಾಡುವಲ್ಲಿ ಸತತ ಪ್ರಯತ್ನ ಮಾಡಿದಾಗ, ಅವರು ಏಕರೂಪವಾಗಿ ಯಶಸ್ವಿಯಾಗಿದ್ದಾರೆ ಎಂದು ನಂಬಲಾಗಿದೆ."

ಗ್ರೇಟ್ ಬ್ರಿಟನ್ನಿನ ರಾಯಲ್ ಕಮಿಷನ್ ಆನ್ ಲೇಬರ್ ಗೆ ಸಲ್ಲಿಸಿದ ಈ ಹೇಳಿಕೆಗಳು ಅದರ ಲಕ್ಷಣಗಳು ಏನೇ ಇರಲಿ, ಈ ಅವಧಿಯಲ್ಲಿ ಮುಷ್ಕರಗಳು ಸಾಕಷ್ಟು ವ್ಯಾಪಕವಾಗಿ ಸಂಭವಿಸಿವೆ ಎಂದು ಸ್ಪಷ್ಟವಾಗಿ ಸೂಚಿಸುತ್ತವೆ. ಆಧುನಿಕ ಶೈಲಿಯಲ್ಲಿಲ್ಲದಿದ್ದರೂ ಮತ್ತು ಅದು ಎಷ್ಟೇ ಸಡಿಲವಾಗಿ ಮತ್ತು ತಾತ್ಕಾಲಿಕವಾಗಿದ್ದರೂ ಆ ಆರಂಭಿಕ ಅವಧಿಯಲ್ಲಿ ಶೋಷಣೆಯ ತೀವ್ರತೆಗೆ ವಿರುದ್ಧವಾಗಿ ಕಾರ್ಮಿಕರು ಆಗಾಗ್ಗೆ ಎದ್ದು ನಿಂತರು ಎಂಬ ಅಂಶವನ್ನು ಅಲ್ಲಗಳೆಯುವಂತಿಲ್ಲ. ಮತ್ತೊಂದು ಗಮನಾರ್ಹ ಲಕ್ಷಣವೆಂದರೆ ಮುಷ್ಕರಗಳು ಬ್ರಿಟಿಷ್ ಒಡೆತನದ ಮತ್ತು ಭಾರತದ ಸ್ವಾಮ್ಯದ ಕೈಗಾರಿಕೆಗಳೆರಡರಲ್ಲೂ ಸಂಭವಿಸಿದವು. ಬ್ರಿಟಿಷ್ ಮತ್ತು ಭಾರತದ ಕೈಗಾರಿಕೋದ್ಯಮಿಗಳ ನಡುವಿನ ವಿವಿಧ ರೀತಿಯ ಹಿತಾಸಕ್ತಿಗಳ ಘರ್ಷಣೆಗಳ ಹೊರತಾಗಿಯೂ, ಭಾರತದ ಕಾರ್ಮಿಕರ ನಿರ್ದಯ ಶೋಷಣೆಗೆ ಸಂಬಂಧಿಸಿದಂತೆ, ಈ ಎರಡು ಪರಸ್ಪರ ಸ್ಪರ್ಧೆಯಲ್ಲಿದ್ದ ಗುಂಪುಗಳು ಸಂಪೂರ್ಣವಾಗಿ ಒಂದಾಗಿದ್ದವು.

ಶ್ರೀಲಂಕಾದ ಅಂತರ್ಯುದ್ಧದ ತಲ್ಲಣಗಳ 'ಇರಾ ಮದಿಯಾಮ'.... ಪುಟ 16 ರಿಂದ

ಬಗೆಯ ನವಿರು ಭಾವನೆ ಬೆಳೆದಿರುತ್ತದೆ. ಆದರೆ ಆತ ಅದಕ್ಕೆ ಸ್ಪಂದಿಸುವುದಿಲ್ಲ.

ಎರಡನೇ ಕಥೆಯಲ್ಲಿ, ಉತ್ತರ ಶ್ರೀಲಂಕಾದಲ್ಲಿ ಎಲ್.ಟಿ.ಟಿ.ಇ. ನಿಯಂತ್ರಣದಲ್ಲಿರುವ ಒಂದು ಹಳ್ಳಿಯಿರುತ್ತದೆ. ಅದರಲ್ಲಿರುವ ಮುಸಲ್ಮಾನರನ್ನು ಉಗ್ರರು ಬಲವಂತವಾಗಿ ಎತ್ತಂಗಡಿ ಮಾಡಲು ಮುಂದಾಗುತ್ತಾರೆ. ಏಕೆಂದರೆ ಮುಸಲ್ಮಾನರು ಆ ಪ್ರದೇಶದಲ್ಲಿ ಅಲ್ಪಸಂಖ್ಯಾತರಾಗಿರುತ್ತಾರೆ. ಉಗ್ರರು ಅವರಲ್ಲಿದ್ದ ಹೆಚ್ಚಿನ ಹಣವನ್ನು ಕಸಿದುಕೊಳ್ಳುತ್ತಾರೆ. ಒಂದು ಕುಟುಂಬದ ಒಬ್ಬ ಸಣ್ಣ ವಯಸ್ಸಿನ ಹುಡುಗ ತಾನು ಇಷ್ಟಪಡುವ ನಾಯಿಯಿಂದ ದೂರಾಗಲು ಬಯಸದೆ ತುಂಬ ಆತಂಕಕ್ಕೆ ಒಳಗಾಗುತ್ತಾನೆ. ಆದರೆ ಆತನ ತಂದೆ ಈ ಬೆಳವಣಿಗೆಯನ್ನು ಉದಾಸ ದೃಷ್ಟಿಯಿಂದ ಕಾಣುತ್ತಾನೆ. ಕೊನೆಗೆ ಈ ಕುಟುಂಬ ಇತರರೊಡನೆ ಚಾಮರಿ ಮತ್ತು ಸಮನ್ ಇರುವ ಸ್ಥಳವನ್ನು ತಲುಪುತ್ತಾರೆ. ನಂತರ ದೋಣಿಯಲ್ಲಿ ತೆರಳುತ್ತಾರೆ. ಚಲನಚಿತ್ರದ ಈ ವಿಭಾಗದಲ್ಲಿ ತಮಿಳು ಭಾಷೆ ಬಳಸಲ್ಪಟ್ಟಿದೆ.

ಮೂರನೆಯ ಕಥೆಯಲ್ಲಿ, ಅಂತರ್‌ಯುದ್ಧದಲ್ಲಿ ನಿರತನಾಗಿರುವ ಒಬ್ಬ ಯುವ ಸೈನಿಕ ದುಮಿಂದ ರಜೆಯನ್ನು ಪಡೆದು ತನ್ನ ಊರಿಗೆ ವಾಪಸಾಗುವ ಸಂದರ್ಭದಲ್ಲಿ ಅನುರಾಧಪುರದ ಒಂದು ವೇಶ್ಯಾಗ್ರಹಕ್ಕೆ ತನ್ನ ಕೆಲವು ಸಂಗಡಿಗರೊಡನೆ ಹೋಗುತ್ತಾನೆ. ಊಟ ಮತ್ತು ಗುಂಡಿನ ಸೇವನೆಯ ತರುವಾಯ ಅವರು ತಮ್ಮ ಸಂಗಾತಿಗಳೊಡನೆ ಮಹಡಿಯತ್ತ ಸಾಗುತ್ತಾರೆ. ಅಲ್ಲಿ ದುಮಿಂದ ತನ್ನ ತಂಗಿಯನ್ನು ನೋಡಿ ಹೌಹಾರುತ್ತಾನೆ. ಆಕೆಗೆ ಹೊಡೆಯುತ್ತಾನೆ. ಆಕೆ ಅಲ್ಲಿಂದ ಕಾಲ್ತೆಗೆಯುತ್ತಾಳೆ. ದುಮಿಂದ ಆಕೆಯನ್ನು ಹುಡುಕಲು ಶುರುಮಾಡುತ್ತಾನೆ.

ಇಂತಹ ಅಂಥಾಲಜಿ ಫಿಲ್ಮ್‌ನ್ನು ನಿರ್ದೇಶಿಸುವುದು ಸವಾಲಿನ ಕೆಲಸವೇ ಸರಿ. ಸಾಮಾನ್ಯವಾಗಿ ಇಂತಹ ಚಲನಚಿತ್ರಗಳಲ್ಲಿ ಒಂದು ಸಮಾನ ಎಳೆಯಿರುತ್ತದೆ. ಇಲ್ಲೂ ಅದು ಇದೆ. ಅದೆಂದರೆ ಮಾನವ ಘನತೆ, ಅಸ್ಮಿತೆ ಮತ್ತು ಉತ್ತಮ ನಾಳೆಗಳಿಗಾಗಿ ಹುಡುಕಾಟ. ಇದು ಈ ಚಲನಚಿತ್ರದ ಸ್ಥಾಯಿ ಭಾವ. ಎಲ್.ಟಿ.ಟಿ.ಇ ಮತ್ತು ಶ್ರೀಲಂಕಾ ಮಿಲಿಟರಿ ಜೊತೆ ಜರಗುವ ಅಂತರ್‌ಯುದ್ಧದಿಂದ ಇಂತಹ ಹುಡುಕಾಟಗಳು ಜರುಗುತ್ತಿರುತ್ತವೆ. ಅಂದರೆ ಯುದ್ಧ, ಅದು ಯಾವುದೇ ಬಗೆಯಾಗಿರಲಿ, ಅದು ಸಾಮಾನ್ಯ ಜನರ ಮೇಲೆ ಎಂತಹ ಭೀಕರ ಪರಿಣಾಮಗಳನ್ನು ಬೀರುತ್ತದೆ ಎಂಬುದನ್ನು ಸೂಕ್ಷ್ಮವಾಗಿ ದಾಟಿಸಲಾಗಿದೆ. ಇದು, ನಮ್ಮಲ್ಲಿರುವ ರಣೋನ್ಮಾದದಿಂದ ಉನ್ಮತ್ತರಾದ ಮಂದಿ ಮಾತೆತ್ತಿದರೇ ನಮ್ಮ ನೆರೆಯ ದೇಶದೊಡನೆ ಯುದ್ಧ ಮಾಡಬೇಕೆಂದು ಚೀರಾಡುತ್ತಾರಲ್ಲ, ಅವರಿಗೆ ಒಂದು ವಿವೇಚನೆಯ ಪಾಠವನ್ನು ಕಲಿಸುತ್ತದೆ.

ಮೂರು ಕಥೆಗಳೂ ಒಂದೇ ಟೈಮ್ ಫ್ರೇಮ್‌ನಲ್ಲಿ ಜರಗುತ್ತವೆ. ಇಲ್ಲಿ ಆಗಸ್ಟ್ ತಿಂಗಳಿನ ಎರಡು ದಿನಗಳಲ್ಲಿನ ಮೂರು ಕಥೆಗಳ ಘಟನೆಗಳನ್ನು ನಿರೂಪಿಸಲಾಗಿದೆ. ಆದುದರಿಂದ 'ದಿ ಆಗಸ್ಟ್ ಸನ್' ಎಂಬ ಶೀರ್ಷಿಕೆಯನ್ನು ಈ ಚಲನಚಿತ್ರಕ್ಕೆ ನೀಡಲಾಗಿದೆ. ಮೊದಲ ಕಥೆಯಲ್ಲಿನ ಚಾಮರಿಯ ತುಯ್ದಾಡುವ ಭಾವಗಳನ್ನು, ಪ್ರೀತಿಗಾಗಿ ಹಂಬಲಿಸುವ ಆಕೆಯ ತಹತಹವನ್ನು ತೋರಿಸುತ್ತಲೇ, ಸಂಯಮದಿಂದ ಅವುಗಳನ್ನು ನಿರ್ವಹಿಸಲಾಗಿದೆ. ಎರಡನೆಯ ಕಥೆಯಲ್ಲಿ ಅರಫತ್‌ನ ನಾಯಿಯೊಡನೆಯ ಸಂಬಂಧ ಹೇಗೆ ಮೊಟಕಾಗುತ್ತದೆ ಎಂಬುದರ ಸುತ್ತ ಹಿರಿಯರು ಸಾಮಾನ್ಯವಾಗಿ ತೋರಿಸುವ ಅಸಡ್ಡೆಯ ಭಾವದ ಜೊತೆಗೆ ಮಕ್ಕಳ ತುಡಿತಗಳು ಹೇಗೆ ಮಣ್ಣುಪಾಲಾಗುತ್ತವೆ ಎಂಬುದನ್ನು ಮಾರ್ಮಿಕವಾಗಿ ಅಭಿವ್ಯಕ್ತಿಸಲಾಗಿದೆ. ಒಂದು ದೃಶ್ಯದಲ್ಲಿ, ಹಳ್ಳಿಯನ್ನು ತೊರೆಯುವಾಗ, ಅಂತಹ ಸಂದರ್ಭದಲ್ಲೂ ಅರಫತ್‌ನ ಕುಟುಂಬದ ವೃದ್ಧೆ ಒಂದು ಪುಟ್ಟ ಸಸ್ಯದ ಕುಂಡವನ್ನು ತೆಗೆದುಕೊಂಡು ಹೋಗುವುದು ಹಾಗೂ ಅದನ್ನು ದೋಣಿಯಲ್ಲೂ ತನ್ನ ಕೈಯಲ್ಲೇ ಇರಿಸಿಕೊಳ್ಳುವುದು, ಒಂದು ಸಂಬಂಧದ ಆಪ್ತ ಭಾವವನ್ನು ಎತ್ತಿಹಿಡಿಯುತ್ತದೆ. ಇಂತಹ ಸಣ್ಣ, ಸಣ್ಣ ಸಂಗತಿಗಳು ಚಲನಚಿತ್ರಕ್ಕೆ ಒಂದು ಗಮನಾರ್ಹವಾದ ಆಯಾಮವನ್ನು ನೀಡುತ್ತವೆ. ಮೂರನೆಯ ಕಥೆಯ ದುಮಿಂದ ತನ್ನ ದೇಹದ ಬಯಕೆಗಳಿಗಾಗಿ ವೇಶ್ಯಾಗ್ರಹಕ್ಕೆ ಬಂದಿರುತ್ತಾನೆ. ಹೀಗಿರಬೇಕಾದರೇ, ತಾನು ಬಂದ ಉದ್ದೇಶವನ್ನು ಅರಿತು ಕೂಡ ತನ್ನ ತಂಗಿಯ ಮೇಲೆ ಕೈ ಮಾಡುತ್ತಾನೆ. ಅಂದರೆ ಇಲ್ಲಿ ಪುರುಷಾಧಿಪತ್ಯದ ಪೌರುಷ ಢಾಳಾಗಿ ಕಂಡು ಬರುತ್ತದೆ. ಆಕೆ ಕೆಲಸವನ್ನು ಕಳೆದುಕೊಂಡಿರುತ್ತಾಳೆ. ಸಂಸಾರದ ನಿರ್ವಹಣೆಗಾಗಿ ಆಕೆ ಅನಿವಾರ್ಯವಾಗಿ ತನ್ನ ದೇಹವನ್ನು ಮಾರಿಕೊಳ್ಳುವ ಪರಿಸ್ಥಿತಿಗೆ ದೂಡಲ್ಪಟ್ಟಿರುತ್ತಾಳೆ. ದುಮಿಂದ ಮತ್ತು ಆತನ ಸಂಗಡಿಗರು ವೇಶ್ಯಾಗ್ರಹದತ್ತ ಪಯಣಿಸುವಾಗ ಎರಡು–ಮೂರು ಬಾರಿ ಅನುರಾಧಪುರದ ಖ್ಯಾತ ಅಭಯಗಿರಿಯ ಸ್ತೂಪವನ್ನು ದೂರದಿಂದ ತೋರಿಸಲಾಗಿದೆ. ಇದು ವೀಕ್ಷಕರಲ್ಲಿ ಒಂದು ಪ್ರಜ್ಞಾ ಭಾವವನ್ನು ಉಂಟು ಮಾಡುತ್ತದೆ.

ಈ ಚಲನಚಿತ್ರದ ನಿರೂಪಣೆಯಲ್ಲಿ ಆಗಾಗ್ಗೆ ಕ್ರಿಕೆಟ್ ಕಾಮೆಂಟರಿ ಕೇಳಿ ಬರುತ್ತದೆ; ಟಿವಿಯಲ್ಲಿ ಶ್ರೀಲಂಕಾ ಕ್ರಿಕೆಟ್ ತಂಡ ವಿಶ್ವಕಪ್ ಗೆದ್ದ ಆಟದ ಕೆಲವು ವಿಶ್ಯುವಲ್‌ಗಳನ್ನು ತೋರಿಸಲಾಗಿದೆ. ಒಂದೆಡೆ ಅಂತರ್‌ಯುದ್ಧದ ನೋವು, ಸಂಕಟಗಳು ಇನ್ನೊಂದೆಡೆ ಕ್ರಿಕೆಟ್ ಆಟದ ಸಂತಸದ ಕ್ಷಣಗಳು ಇವು ಪರಿಸ್ಥಿತಿಯ ಡೈಲೆಕ್ಟಿಕ್‌ನ್ನು ತೋರಿಸುತ್ತ ವೀಕ್ಷಕರನ್ನು ಯೋಚಿಸುವಂತೆ ಮಾಡುತ್ತವೆ. ಒಂದು ದೃಶ್ಯದಲ್ಲಿ ಎರಡನೇ ಕಥೆಯ ಮುಸಲ್ಮಾನ ಕುಟುಂಬ ಏರ್‌ರೈಡ್ ಆದಾಗ ಒಂದು ಬಂಕರ್‌ನಂತಹ ಜಾಗದಲ್ಲಿ ತಾತ್ಕಾಲಿಕ ಆಶ್ರಯವನ್ನು ಪಡೆಯುತ್ತಾರೆ. ಆದರೆ ಈ ಚಲನಚಿತ್ರದಲ್ಲಿ ಅಂತರ್‌ಯುದ್ಧದ ಒಂದೇ ಒಂದು ಬೀಭತ್ಸ ದೃಶ್ಯವಿಲ್ಲ. ಆದರೂ ವೀಕ್ಷಕರಲ್ಲಿ ಯುದ್ಧ ಸಂಬಂಧಿತ ನಾನಾ ಹಿಂಸೆಗಳ ತಲ್ಲಣಗಳ ಅರಿವಾಗುತ್ತದೆ!

ಈ ಚಲನಚಿತ್ರದಲ್ಲಿ ನೀಲಿ ಬಣ್ಣದ ಆಗಸವನ್ನು ತೋರಿಸಲಾಗಿದೆ. ಚಲನಚಿತ್ರಗಳಲ್ಲಿ ನೀಲಿ ಬಣ್ಣ ಶಾಂತಿ, ಸಾಮರಸ್ಯ, ಸ್ಥಿರತೆ, ಸಂತೃಪ್ತಿ ಇತ್ಯಾದಿಗಳನ್ನು ಸೂಚಿಸುತ್ತದೆ. ಆದರೆ ಚಲನಚಿತ್ರಾದ್ಯಂತ ಪಾತ್ರಧಾರಿಗಳ ಅನುಭವಿಸುವ ನೋವು, ಸಂಕಟ, ನೆಮ್ಮದಿಯ ನಾಳೆಗಳ ಅರಸುವಿಕೆ ಮುಂತಾದವು ರಾಚುತ್ತವೆ. ಇಂತಹಬಣ್ಣದವಿನ್ಯಾಸ ಆಶಯಕ್ಕೂ, ವಸ್ತುಸ್ಥಿತಿಗೂ ಇರುವ ಅಂತರವನ್ನು ಗಮನೀಯವಾಗಿ ತಿಳಿಸುತ್ತದೆ. ಸಿನಿಮೆಟೊಗ್ರಫಿ ಮತ್ತು ಸಂಗೀತ ಎರಡೂ ಪಾತ್ರಗಳ ಭಾವನೆಗಳಿಗೆ ತಕ್ಕಂತೆ ಸೂಕ್ತವಾಗಿ ಸ್ಪಂದಿಸಿವೆ.

ಈ ಚಲನಚಿತ್ರಕ್ಕೆ ಸಂಬಂಧಿಸಿದಂತೆ ಎರಡು ವಿಶೇಷ ಸಂಗತಿಗಳಿವೆ. ಇದನ್ನು ನಿರ್ಮಿಸಲು ನಾಲ್ಕು ವರ್ಷಗಳು ತೆಗೆದುಕೊಂಡಿದೆ. ಮೂರೂ ಕಥೆಗಳು 1990ರ ದಶಕದ ಕೊನೆಯ ವರ್ಷಗಳಲ್ಲಿ ಜರಗುತ್ತವೆ. ಚಿತ್ರೀಕರಣವನ್ನು ಅಂತರ್‌ಯುದ್ಧ ನಡೆಯುತ್ತಿರುವಾಗಲೇ ಮಾಡಲಾಯಿತು. ಬಹುಶಃ ಯುಗೋಸ್ಲಾವಿಯಾದ ಅಂತರ್‌ಯುದ್ಧದ ಸಮಯದಲ್ಲಿ ಕೆಲವು ಚಲನಚಿತ್ರಗಳನ್ನು ಈ ರೀತಿಯಲ್ಲಿ ನಿರ್ಮಿಸಲಾಯಿತು. ಇದನ್ನು ಬಿಟ್ಟರೆ ಬೇರೆಲ್ಲೂ ಇಂತಹ ಉದಾಹರಣೆಗಳಿಲ್ಲವೇನೋ. ಸುಮಾರು 900 ಮಂದಿ ಈ ಚಲನಚಿತ್ರದಲ್ಲಿ ನಟಿಸಿದ್ದಾರೆ. ಮುಸಲ್ಮಾನರನ್ನು ಸ್ಥಳಾಂತರಿಸುವ ಎರಡನೆಯ ಕಥೆಗೆ ಸಂಬಂಧಿಸಿದ ಎಲ್ಲ ಪಾತ್ರಧಾರಿಗಳೂ ಪ್ರಥಮ ಬಾರಿಗೆ ಕ್ಯಾಮರವನ್ನು ಎದುರಿಸಿದರು. ಈ ಚಲನಚಿತ್ರವನ್ನು ತಯಾರಿಸಲು ಅಪಾರ ವೆಚ್ಚವಾಯಿತು. ಇದರ ಜೊತೆ ಪ್ರಸನ್ನ ವಿತನಾಗೆ ನಿರ್ದೇಶಿಸಿದ 'ಡೆತ್ ಆನ್ ಎ ಫುಲ್ ಮೂನ್ ಡೇ' ಮತ್ತು 'ವಿತ್ ಯೂ, ವಿತೌಟ್ ಯೂ' ಚಲನಚಿತ್ರಗಳನ್ನು 'ವಾರ್ ಟ್ರಯಾಲಜಿ' ಅಂದರೆ ಯುದ್ಧಕ್ಕೆ ಸಂಬಂಧಿಸಿದ ತ್ರಿವಳಿ ಚಲನಚಿತ್ರಗಳೆಂದು ಗುರುತಿಸಲಾಗುತ್ತದೆ.

ಮಾನವನ ಅಸ್ತಿತ್ವದ ಬಗೆಗೆ ವೀಕ್ಷಕರಲ್ಲಿ ಆಲೋಚನಾ ಲಹರಿಗಳನ್ನು ಉದ್ದೀಪಿಸುವ ಈ ಚಲನಚಿತ್ರ ಯೂಟ್ಯೂಬ್‌ನಲ್ಲಿ ಲಭ್ಯವಿದೆ. ■





ಜಾತಿ ವ್ಯವಸ್ಥೆಯಲ್ಲಿ ಬೆವರು ಹರಿಸದವರಿಗೆ ಮಣೆ.... ಪುಟ 16 ರಿಂದ

ಸಂಘದ ರಾಜ್ಯಾಧ್ಯಕ್ಷ ನಿತ್ಯಾನಂದಸ್ವಾಮಿ ಸಮಾವೇಶದ ಅಧ್ಯಕ್ಷತೆ ವಹಿಸಿದ್ದರು. ರಾಜ್ಯ ಕಾರ್ಯದರ್ಶಿ ಚಂದ್ರಪ್ಪ ಹೊಸ್ಕೇರಾ ಕರಡು ವರದಿಯನ್ನು ಮಂಡಿಸಿದರು. ದೇವದಾಸಿ ಮಹಿಳೆಯರ ವಿಮೋಚನಾ ಸಂಘದ ಪ್ರಧಾನ ಕಾರ್ಯದರ್ಶಿ ಬಿ. ಮಾಳಮ್ಮ, ದಲಿತ ಹಕ್ಕುಗಳ ಸಮಿತಿ ರಾಜ್ಯ ಸಂಚಾಲಕರಾದ ಗೋಪಾಲಕೃಷ್ಣ ಅರಳಹಳ್ಳಿ ಮಾತನಾಡಿದರು. ಕೃಷಿ ಕೂಲಿಕಾರರ ಸಂಘದ ಜಿ.ಎನ್. ನಾಗರಾಜ, ಪಟ್ಟಮಾದು, ಮಲ್ಲಮ್ಮ ಕೊಡ್ಲಿ, ಹನುಮೇಗೌಡ ಸೇರಿದಂತೆ ವಿವಿಧ ಜಿಲ್ಲೆಗಳಿಂದ ಪ್ರತಿನಿಧಿಗಳ ಭಾಗವಹಿಸಿದ್ದರು.

ಸಮಾವೇಶವು ಈ ಕೆಳಗಿನ ಹಕ್ಕೊತ್ತಾಯಗಳನ್ನು ಅನುಮೋದಿಸಿತು.

ಹಕ್ಕೊತ್ತಾಯಗಳು:

1. ಎಸ್.ಸಿ. ಮತ್ತು ಎಸ್.ಟಿ. ದೌರ್ಜನ್ಯ ತಡೆ ಕಾಯ್ದೆಯನ್ನು ಬಲಪಡಿಸಿ ಸಮರ್ಪಕವಾಗಿ ಜಾರಿಗೊಳಿಸಬೇಕು.
2. ದಲಿತರ ಮೇಲೆ ದೌರ್ಜನ್ಯವೆಸಗುವ ಅಪರಾಧಿಗಳ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಂಡು ಮಾದರಿಯಾಗುವ ಶಿಕ್ಷೆ ನೀಡಬೇಕು.
3. ಸಮಾಜಘಾತಕ ಗೋ ರಕ್ಷಣಾ ತಂಡಗಳನ್ನು ನಿಷೇಧಿಸಬೇಕು.
4. ಮಲ ಹೊರುವ ಪದ್ಧತಿಯನ್ನು ಸಂಪೂರ್ಣ ನಿಲ್ಲಿಸಬೇಕು. ಮತ್ತು ಅವರಿಗೆ ಪರ್ಯಾಯ ಉದ್ಯೋಗ ನೀಡಬೇಕು.
5. ದಲಿತರಿಗೆ ಆದ್ಯತೆ ನೀಡಿ ಎಲ್ಲ ಭೂ ರಹಿತ ಬಡವರಿಗೆ ಭೂಮಿಯನ್ನು ವಿತರಣೆ ಮಾಡಬೇಕು.
6. ಎಲ್ಲ ಬಡವರ ಮಕ್ಕಳಿಗೆ ಮತ್ತು ದಲಿತರ ಮಕ್ಕಳಿಗೆ ಉತ್ತಮ ಗುಣಮಟ್ಟದ, ಉಚಿತ ಶಿಕ್ಷಣವನ್ನು ಪೂರ್ವ ಪ್ರಾಥಮಿಕದಿಂದ ವಿಶ್ವವಿದ್ಯಾಲಯದವರೆಗೆ ಒದಗಿಸಬೇಕು.
7. ಶಿಕ್ಷಣ, ಆರೋಗ್ಯ ಮತ್ತು ಸಾರ್ವಜನಿಕ ರಂಗದ ಉದ್ದಿಮೆಗಳ ಖಾಸಗೀಕರಣ ನಿಲ್ಲಿಸಬೇಕು.
8. ಖಾಸಗಿ ರಂಗದಲ್ಲಿಯೂ ಮೀಸಲಾತಿ ನೀಡುವುದನ್ನು ಕಾನೂನು ಬದ್ಧಗೊಳಿಸಿ. ಬ್ಯಾಕ್‌ಲಾಗ್ ಮೀಸಲು ಹುದ್ದೆಗಳನ್ನು ಭರ್ತಿಮಾಡಬೇಕು.
9. ಅಂತರಜಾತಿ, ಅಂತರಧರ್ಮೀಯ ವಿವಾಹ ಆಗುವವರಿಗೆ ಆರ್ಥಿಕ ನೆರವು ಒದಗಿಸಬೇಕು. ಅಂತಹ ವಧುವರರಿಗೆ ರಕ್ಷಣೆ ನೀಡಬೇಕು. ದುರುಪಯೋಗ ಪಡಿಸಲಾಗುತ್ತಿರುವ ವಿಶೇಷ ವಿವಾಹ ಕಾಯ್ದೆಯನ್ನು ರದ್ದು ಮಾಡಬೇಕು.
10. ಎಸ್.ಸಿ. ಮತ್ತು ಎಸ್.ಟಿ. ಸಮುದಾಯಗಳ ವಿಶೇಷ ಘಟಕ ಯೋಜನೆಯನ್ನು ಗರಿಷ್ಠ ಅನುದಾನದೊಂದಿಗೆ ಜಾರಿಮಾಡಬೇಕು. ಅನುದಾನದ ದುರುಪಯೋಗವನ್ನು ಬಿಗಿಯಾಗಿ ತಡೆಯಬೇಕು.
11. ಹೊಸ ಕಾರ್ಮಿಕ ಸಂಹಿತೆಗಳನ್ನು, ಹೊಸಕೃಷಿ ಕಾಯ್ದೆಗಳನ್ನು ಮತ್ತು 2020 ರ ವಿದ್ಯುಚ್ಛಕ್ತಿ ತಿದ್ದುಪಡಿ ಕಾಯ್ದೆಯನ್ನು ಹಿಂತೆಗೆದುಕೊಳ್ಳಬೇಕು.
12. ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ಬಲಪಡಿಸಿ ಎಲ್ಲ ಗ್ರಾಮಗಳಿಗೂ ವಿಸ್ತರಿಸಬೇಕು.
13. ಕೊರೊನಾ ಚಿಕಿತ್ಸೆಯನ್ನು ಮತ್ತು ಲಸಿಕೆಯನ್ನು ಉಚಿತವಾಗಿ ಒದಗಿಸಬೇಕು. ■



JANASHAKTHI KANNADA VARA PATRIKE January 11-17, 2021 Price: Rs. 10/- Date of Publication: 8 January 2021 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21

ಜಾತಿ ವ್ಯವಸ್ಥೆಯಲ್ಲಿ ಬೆವರು ಹರಿಸದವರಿಗೆ ಮಣೆ: ನ್ಯಾ ನಾಗಮೋಹನ ದಾಸ ಆರೋಪ



ಜಾತಿ ವ್ಯವಸ್ಥೆಯಲ್ಲಿ ಬೆವರು ಹರಿಸದವರಿಗೆ ಮಣೆ ಹಾಕಲಾಗುತ್ತಿದೆ ಎಂದು ನಿವೃತ್ತ ನ್ಯಾಯಮೂರ್ತಿ ಜಸ್ಟೀಸ್ ಎಚ್.ಎನ್. ನಾಗಮೋಹನ್ ದಾಸ ಆಕ್ರೋಶ ವ್ಯಕ್ತಪಡಿಸಿದರು. ಅವರು ಬೆಂಗಳೂರಿನ ಕೊಂಡಜ್ಜಿ ಬಸ್ಸಪ್ಪ ಸಭಾಂಗಣದಲ್ಲಿ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ ಹಮ್ಮಿಕೊಂಡಿದ್ದ "ಜಾತಿ ದಮನ ವಿರೋಧಿಸಿ ದಲಿತರ ಹಕ್ಕುಗಳಿಗಾಗಿ ಒತ್ತಾಯಿಸಿ" ರಾಜ್ಯ ಮಟ್ಟದ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದರು.

ಜಾತಿ ವ್ಯವಸ್ಥೆಯಲ್ಲಿ ವರ್ಗ ಅಸಮಾನತೆ ಜೊತೆಗೆ ಸಾಮಾಜಿಕ, ಆರ್ಥಿಕ, ರಾಜಕೀಯ ಸೇರಿದಂತೆ ಎಲ್ಲ ರಂಗದಲ್ಲೂ ಅಸಮಾನತೆ ಕಾಣುತ್ತಿದ್ದೇವೆ ಇದರಿಂದ ಕೆಲವರಿಗೆ ಲಾಭವಿದೆ. ಬೆವರು ಸುರಿಸಿ ದುಡಿಯವ ಜನರು ಒಂದೊತ್ತಿನ ಊಟಕ್ಕಾಗಿ ಪರದಾಡಿದರೆ, ಬೆವರನ್ನೇ ಸುರಿಸದ, ಯಾವುದೇ ರೀತಿಯ ಕಷ್ಟವನ್ನೇ ನೋಡದ ಜನರು ಇಂತಹ ವ್ಯವಸ್ಥೆಯ ಲಾಭ ಪಡೆಯುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಈ ವ್ಯವಸ್ಥೆಯನ್ನು ಮುಂದುವರೆಸುವುದಕ್ಕಾಗಿ ಈ ಬೆವರು ಹರಿಸದ ವರ್ಗ ಇಂತಹ ವ್ಯವಸ್ಥೆಯನ್ನು ನಿರಂತರವಾಗಿಸಲು ಹುನ್ನಾರ ನಡೆಸುತ್ತಿದೆ. ಈ ಅಸಮಾನತೆಗೆ ಅನೇಕ ರೀತಿಯ ಕಂದಾಚಾರ ಮೂಢನಂಬಿಕೆಯ ಬಣ್ಣ ಬಳಿದು ಜನರನ್ನು ದಿಕ್ಕು ತಪ್ಪಿಸುತ್ತಿದ್ದಾರೆ. ಇದಕ್ಕೆ ಧರ್ಮ ಜಾತಿಯ ಲೇಪನ ಬಳಿದು ಜನತೆಯ ಮೇಲೆ ಬಲವಂತವಾಗಿ ಜಾತಿಯ ಅಫೀಮುನ್ನು ಹೇರುತ್ತಿದ್ದಾರೆ. ಇನ್ನು ಈ ವ್ಯವಸ್ಥೆಯಿಂದ ತೊಂದರೆಗಳನ್ನು ಅನುಭವಿಸಿದ ವರ್ಗ ನಿರಂತರವಾಗಿ ಇತಿಹಾಸದುದ್ದಕ್ಕೂ ಧ್ವನಿ ಎತ್ತಿದ್ದಾರೆ. ಜಾತಿ ಅಸಮಾನತೆ ವಿರುದ್ದವಾಗಿ ಬುದ್ದನ ಕಾಲದಲ್ಲಿ, ಬಸವಣ್ಣನ ಕಾಲದಲ್ಲಿ, ಭಕ್ತಿ ಪಂಥ, ದಾಸ ಪಂಥಗಳಲ್ಲಿ ಇದರ ವಿರುದ್ದ ದೊಡ್ಡ ಪ್ರಮಾಣದಲ್ಲಿ ಧ್ವನಿ ಎತ್ತಲಾಗಿದೆ ಎಂದರು. ದೇಶದಲ್ಲಿ ಜಾರಿಗೆ ತರಲಾಗುತ್ತಿರುವ ಹೊಸ ಕೃಷಿ ಕಾಯ್ದೆಗಳು, ಕಾರ್ಮಿಕ ಕಾನೂನುಗಳಿಂದ ಈಗೀಗ ಅಭಿವೃದ್ಧಿ ಹೊಂದುತ್ತಿರುವ ದಲಿತರು ಶಾಶ್ವತವಾಗಿ ದಮನಕ್ಕೊಳಗಾಗಲಿದ್ದಾರೆಂದು ಅವರು ಹೇಳಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಎಐಎಡಬ್ಲ್ಯುಯು (AIAWU) ನ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ಬಿ.ವೆಂಕಟ್ ಮಾತನಾಡಿ ನಮ್ಮ ಹಕ್ಕುಗಳನ್ನು ರಕ್ಷಿಸಿಕೊಳ್ಳಲು ಮತ್ತು ನ್ಯಾಯವನ್ನು ಪಡೆದುಕೊಳ್ಳಲು ಚಳುವಳಿ ಬಲಗೊಳಿಸಬೇಕು. ಕೂಲಿಕಾರರು ಮತ್ತು ದಲಿತರ ಹಕ್ಕುಗಳನ್ನು ರಕ್ಷಿಸಲು ಪ್ರಭಲ ಚಳುವಳಿಯನ್ನು ಕಟ್ಟಿ ಆಳುವ ಸರಕಾರಗಳ ಮೇಲೆ ಒತ್ತಡ ಹೇರಬೇಕು. ನಾವು ನೆಮ್ಮದಿಯಾಗಿ ಇರುವಂತೆ ಮಾಡುವ ಶಕ್ತಿ, ಬಲ ಚಳುವಳಿಗೆ ಇದೆ ಎಂದು ಅವರು ಅಭಿಪ್ರಾಯ ಪಟ್ಟರು. ಕೇಂದ್ರದಲ್ಲಿ ಮೋದಿ ನೇತೃತ್ವದ ಬಿಜೆಪಿ ಆಡಳಿತ ಬಂದಾಗಿನಿಂದ ದಲಿತರನ್ನು ತುಳಿಯುವ ಪ್ರವೃತ್ತಿ ಹೆಚ್ಚಾಗುತ್ತಿದ್ದು ಉತ್ತರ ಪ್ರದೇಶ, ಗುಜರಾತ್, ಮಧ್ಯಪ್ರದೇಶ, ಬಿಹಾರ ಮುಂತಾದ ರಾಜ್ಯಗಳಲ್ಲಿ ದಲಿತರ ಹತ್ಯಾಕಾಂಡಗಳು ಹೆಚ್ಚಿವೆ. ಹತ್ರಾಸ್‌ದಂತಹ ಪ್ರಕರಣ ಇತ್ತೀಚಿನ ಒಂದು ಉದಾಹರಣೆಯಷ್ಟೇ ಎಂದರು. ದುರ್ಬಲ ಪ್ರಾಣಿಗಳನ್ನಷ್ಟೇ ಬಲಿಕೊಡುತ್ತಾರೆ. ಹುಲಿಸಿಂಹಗಳನ್ನು ಬಲಿ ಕೊಡುವುದಿಲ್ಲ ಎಂಬ ಅಂಬೇಡ್ಕರ್ ವಾಣಿಯನ್ನು ಎಲ್ಲರೂ ನೆನಪಿಡಬೇಕೆಂದರು.

ಪುಟ 15 ಕ್ಕೆ


ಕಾಂ. ಬಿ. ವೆಂಕಟ್




ಗ್ರಾಮ ಪಂಚಾಯತ್ ಚುನಾವಣೆಯಲ್ಲಿ ಗೆದ್ದವರನ್ನು ಸನ್ಮಾನಿಸಲಾಯಿತು



ಶ್ರೀಲಂಕಾದ ಅಂತರ್ಯುದ್ಧದ ತಲ್ಲಣಗಳ 'ಇರಾ ಮದಿಯಾಮ'

'ಇರಾ ಮದಿಯಾಮ' ಅಂದರೆ 'ದಿ ಆಗಸ್ಟ್ ಸನ್'ನಲ್ಲಿ ಮೂರು ಕಥೆಗಳನ್ನು ಹೆಣೆಯಲಾಗಿದೆ. ಇಂತಹ ಚಲನಚಿತ್ರಗಳನ್ನು ಸಿನಿಮಾ ಪರಿಭಾಷೆಯಲ್ಲಿ 'ಅಂಥಾಲಜಿ ಫಿಲ್ಮ್ಸ್' ಎಂದು ಕರೆಯಲಾಗುತ್ತದೆ. ಸಾಮಾನ್ಯವಾಗಿ ಇಂತಹ ಚಲನಚಿತ್ರಗಳಲ್ಲಿ ಒಂದು ಸಮಾನ ಎಳೆಯಿರುತ್ತದೆ. ಇಲ್ಲೂ ಅದು ಇದೆ. ಅದೆಂದರೆ ಮಾನವ ಘನತೆ, ಅಸ್ಮಿತೆ ಮತ್ತು ಉತ್ತಮ ನಾಳೆಗಳಿಗಾಗಿ ಹುಡುಕಾಟ. ಇದು ಈ ಚಲನಚಿತ್ರದ ಸ್ಥಾಯಿ ಭಾವ. ಎಲ್.ಟಿ.ಟಿ.ಇ ಮತ್ತು ಶ್ರೀಲಂಕಾ ಮಿಲಿಟರಿ ಜೊತೆ ಜರಗುವ ಅಂತರ್‌ಯುದ್ಧದಿಂದ ಇಂತಹ ಹುಡುಕಾಟಗಳು ಜರುಗುತ್ತಿರುತ್ತವೆ. ಅಂದರೆ ಯುದ್ಧ, ಅದು ಯಾವುದೇ ಬಗೆಯಾಗಿರಲಿ, ಅದು ಸಾಮನ್ಯ ಜನರ ಮೇಲೆ ಎಂತಹ ಭೀಕರ ಪರಿಣಾಮಗಳನ್ನು ಬೀರುತ್ತದೆ ಎಂಬುದನ್ನು ಸೂಕ್ಷ್ಮವಾಗಿ ದಾಟಿಸಲಾಗಿದೆ. ಆದರೆ ಈ ಚಲನಚಿತ್ರದಲ್ಲಿ ಅಂತರ್‌ಯುದ್ಧದ ಒಂದೇ ಒಂದು ಬೀಭತ್ಸ ದೃಶ್ಯವಿಲ್ಲ. ಆದರೂ ವೀಕ್ಷಕರಲ್ಲಿ ಯುದ್ಧ ಸಂಬಂಧಿತ ನಾನಾ ಹಿಂಸೆಗಳ ತಲ್ಲಣಗಳ ಅರಿವಾಗುತ್ತದೆ! ಇದರ ಜೊತೆ ಪ್ರಸನ್ನ ವಿತನಾಗೆ ನಿರ್ದೇಶಿಸಿದ 'ಡೆತ್ ಆನ್ ಎ ಫುಲ್ ಮೂನ್ ಡೇ' ಮತ್ತು 'ವಿತ್ ಯೂ, ವಿತೌಟ್ ಯೂ' ಚಲನಚಿತ್ರಗಳನ್ನು 'ವಾರ್ ಟ್ರಯಾಲಜಿ' ಅಂದರೆ ಯುದ್ಧಕ್ಕೆ ಸಂಬಂಧಿಸಿದ ತ್ರಿವಳಿ ಚಲನಚಿತ್ರಗಳೆಂದು ಗುರುತಿಸಲಾಗುತ್ತದೆ.

ಮ ಶ್ರೀ ಮುರಳಿ ಕೃಷ್ಣ

ಶ್ರೀಲಂಕಾದ ಸಿಂಹಳಿ ಭಾಷೆಯ 'ಇರಾ ಮದಿಯಾಮ' 2003ರಲ್ಲಿ ಲೋಕಾರ್ಪಣೆಯಾಯಿತು. ಇದರ ನಿರ್ದೇಶಕರು ಪ್ರಸನ್ನ ವಿತನಾಗೆ. ಈ ಬರಹದಲ್ಲಿ ಮೂರು ವಿಭಾಗಗಳಿವೆ. ಮೊದಲನೆಯದರಲ್ಲಿ ಶ್ರೀಲಂಕಾ ಚಲನಚಿತ್ರದ ಚರಿತ್ರೆ, ಎರಡನೆಯದರಲ್ಲಿ ನಿರ್ದೇಶಕ ಪ್ರಸನ್ನ ವಿತನಾಗೆಯ ಫಿಲ್ಮೋಗ್ರಫಿ ಹಾಗೂ ಕೊನೆಯ ವಿಭಾಗದಲ್ಲಿ 'ಇರಾ ಮದಿರಾಮ'ದ ಕಥೆ ಮತ್ತು ನನ್ನ ಅನಿಸಿಕೆಗಳು ಇರುತ್ತವೆ.

ಶ್ರೀಲಂಕಾ ಚಲನಚಿತ್ರರಂಗಕ್ಕೂ ನಮ್ಮದಕ್ಕೂ ಅವಿನಾಭಾವ ಸಂಬಂಧ ಎನ್ನಬಹುದು. 1947ರಲ್ಲಿ ಅದರ ಪ್ರಥಮ ಫೀಚರ್ ಫಿಲ್ಮ್ ನಿರ್ಮಿಸಿದವರು ಎಸ್ ಎಮ್ ನಾಯಗಮ್. ಇದು ಮಧುರೈನ ಸ್ಟೂಡಿಯೊ ಒಂದರಲ್ಲಿ ತಯಾರಾಯಿತು. ತಮಿಳುನಾಡಿನವರಾಗಿದ್ದ ನಾಯಗಮ್ ಒಬ್ಬ ವ್ಯಾಪಾರಿಯಾಗಿದ್ದರು. ನಂತರ ಅವರು ಶ್ರೀಲಂಕಾದಲ್ಲಿ ಶ್ರೀ ಮುರುಗನ್ ನವಕಲಾ ಸ್ಟೂಡಿಯೊ ಸ್ಥಾಪಿಸಿದರು. ಸುಮಾರು ಒಂದು ದಶಕದ ಕಾಲ ಶ್ರೀಲಂಕಾದ ಚಲನಚಿತ್ರಗಳ ಹೂರಣದ ಮೇಲೆ ತಮಿಳು ಮತ್ತು ತೆಲುಗು ಚಲನಚಿತ್ರಗಳ ವಸ್ತುಗಳ ದಟ್ಟ ಪ್ರಭಾವಗಳು ಇದ್ದವು. ನಂತರ ಕ್ರಮೇಣ ದೇಶೀಯ ವಸ್ತುಗಳು ಅಲ್ಲಿನ ಚಲನಚಿತ್ರಗಳಲ್ಲಿ ಪ್ರತಿಫಲನಗೊಂಡವು. ಕೆಲವು ನಟ–ನಟಿಯರು, ತಂತ್ರಜ್ಞರ ಕೊಡುಕೊಳುವಿಕೆಗಳು ಜರುಗಿವೆ.

ಪ್ರಸನ್ನ ವಿತನಾಗೆ ಶ್ರೀಲಂಕಾದ ಮೂರನೇ ಪೀಳಿಗೆಗೆ ಸೇರಿದ ಚಲನಚಿತ್ರ ನಿರ್ದೇಶಕರು. ಇವರ ಪ್ರಥಮ ಚಲನಚಿತ್ರ 1991ರಲ್ಲಿ ಬಿಡುಗಡೆಯಾಯಿತು. ಇದುವರೆಗೆ ಅವರು 11 ಫೀಚರ್ ಫಿಲ್ಮ್‌ಗಳನ್ನು ಮತ್ತು ಒಂದು ಡಾಕ್ಯುಮೆಂಟರಿ ಫಿಲ್ಮ್‌ನ್ನು ನಿರ್ದೇಶಿಸಿದ್ದಾರೆ. ಸಮಕಾಲೀನ ವಿಷಯಗಳ ಬಗೆಗೆ ಕ್ಷಕಿರಣವನ್ನು



ಬೀರುವ ಅವರ ಚಲನಚಿತ್ರಗಳು ವೀಕ್ಷಕರನ್ನು ತಟ್ಟುತ್ತವೆ; ಯೋಚಿಸುವಂತೆ ಮಾಡುತ್ತವೆ; ಕೆಲವು ಗಹನವಾದ ಪ್ರಶ್ನೆಗಳನ್ನು ಎತ್ತುತ್ತವೆ. ಲಿಯೊ ಟಾಲ್ಸ್‌ಟಾಯ್, ದೋಸ್ತೊವ್ಸ್ಕಿ ಮತ್ತು ಇತರ ಕೆಲವು ಸಾಹಿತಿಗಳ ಕೃತಿಗಳನ್ನು ಆಧರಿಸಿವೆ ಅವರ ಕೆಲವು ಚಲನಚಿತ್ರಗಳು. ಅವರು ಸತ್ಯಜಿತ್ ರೇ, ಅಕಿರಾ ಕುರೋಸಾವ, ಶ್ರೀಲಂಕಾದ ಲೆಸ್ಟರ್ ಜೇಮ್ಸ್ ಪೆರೀಸ್, ಕ್ರಿಸ್ಟಾಫ್ ಕಿಸ್ಲೌಸ್ಕಿ, ಟರ್ಕೋವ್‌ಸ್ಕಿ ಇತ್ಯಾದಿ ಚಲನಚಿತ್ರ ನಿರ್ದೇಶಕರಿಂದ ಪ್ರಭಾವಿತರಾಗಿದ್ದಾರೆ. ಅವರ ಕೆಲವು ಚಲನಚಿತ್ರಗಳು ಕೋರ್ಟುಗಳ ಕಟಕಟ್ಟೆಯನ್ನು ಏರಿ ನಂತರ ಬಿಡುಗಡೆಯಾಗಿವೆ. ಒಂದರ್ಥದಲ್ಲಿ ಅವರು 'ಕ್ರಿಟಿಕಲ್ ಇನ್ಸೈಡರ್' ಆಗಿದ್ದಾರೆ. ದಿಟ್ಟ ಚಲನಚಿತ್ರಗಳನ್ನು ನೀಡಿದ್ದಾರೆ. ಹೀಗಾಗಿ, ಅವರು ಏಷ್ಯಾದ ಪ್ರಮುಖ ನಿರ್ದೇಶಕರಲ್ಲಿ ಒಬ್ಬರಾಗಿದ್ದಾರೆ. ಅನೇಕ ರಾಷ್ಟ್ರೀಯ, ಅಂತರರಾಷ್ಟ್ರೀಯ ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ.

'ಇರಾ ಮದಿಯಾಮ' ಅಂದರೆ 'ದಿ ಆಗಸ್ಟ್ ಸನ್'ನಲ್ಲಿ ಮೂರು ಕಥೆಗಳನ್ನು ಹೆಣೆಯಲಾಗಿದೆ. ಇಂತಹ ಚಲನಚಿತ್ರಗಳನ್ನು ಸಿನಿಮಾ ಪರಿಭಾಷೆಯಲ್ಲಿ 'ಅಂಥಾಲಜಿ ಫಿಲ್ಮ್ಸ್' ಅಥವಾ 'ಪ್ಯಾಕೇಜ್ ಫಿಲ್ಮ್ಸ್' ಅಥವಾ 'ಆಮ್ನಿಬಸ್ ಫಿಲ್ಮ್ಸ್' ಎಂದು ಕರೆಯಲಾಗುತ್ತದೆ. ಮೊದಲ ಕಥೆಯಲ್ಲಿ ಕೊಲೊಂಬೊದಲ್ಲಿ ವಾಸ ಮಾಡುತ್ತಿರುವ ಒಬ್ಬ ಯುವ ಮಹಿಳೆ ಚಾಮರಿ, ಏರ್ ಫೋರ್ಸ್ ಪೈಲಟ್ ಆಗಿರುವ, ತಾನಿನ್ನು ಮದುವೆಯಾಗಿರದ ಸಂಗಾತಿಯನ್ನು ಹುಡುಕಲು ಒಬ್ಬ ಪತ್ರಕರ್ತ ಸಮನ್‌ನ ಸಹಾಯದಿಂದ ಮುಂದಾಗುತ್ತಾಳೆ. ಆಕೆ ತನ್ನ ಗಂಡನಾಗುವವ ಯುದ್ಧಾಚರಣೆಯಲ್ಲಿ ಎಲ್‌ಟಿಟಿಇಯವರ ಬಳಿ ಸೆರೆಯಲ್ಲಿರುವನೆಂದು ನಂಬಿದ್ದಾಳೆ. ಒಂದು ದೊಡ್ಡ ವ್ಯಾನ್‌ನಲ್ಲಿ ಅವರು ಎಲ್.ಟಿ.ಟಿ.ಇ. ಪ್ರಾಬಲ್ಯವಿರುವ ಉತ್ತರ ಶ್ರೀಲಂಕಾಗೆ ಪಯಣಿಸುತ್ತಾರೆ. ಮಧ್ಯದಲ್ಲಿ ಒಂದು ಚೆಕ್‌ಪೋಸ್ಟ್ ಬಳಿ ಇಡೀ ರಾತ್ರಿ ಕಳೆಯಬೇಕಾಗುತ್ತದೆ. ಆಗ ಅವರೀರ್ವರು ತಮ್ಮ ವೈಯಕ್ತಿಕ ವಿಚಾರಗಳನ್ನು ಹಂಚಿಕೊಳ್ಳುತ್ತಾರೆ. ಬೆಳಿಗ್ಗೆ ಒಂದು ಸಮುದ್ರ ಕಿನಾರೆಯ ಸಮೀಪದ ಸ್ಥಳವನ್ನು ತಲುಪುತ್ತಾರೆ. ಆದರೆ ಅವರು ಅಲ್ಲಿಂದ ಮುಂದೆ ಹೋಗಲು ಸಾಧ್ಯವಾಗುವುದಿಲ್ಲ. ಈ ನಡುವೆ ಚಾಮರಿಗೆ ಸಮನ್‌ನ ಮೇಲೆ ಒಂದು

ಪುಟ 15 ಕ್ಕೆ

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**